

ಭಾರತದ ಯೌವನದ 'ನ್ಯಾಷನಲ್ ಕ್ರಶ್' ಎಂಬ ಖ್ಯಾತಿಗೆ ಪಾತ್ರರಾದ ನಟ ರಶ್ಮಿಕಾ ಮಂದಣ್ಣ ಮತ್ತೊಮ್ಮೆ ಅಭಿಮಾನಿಗಳ ಮನಗೆದ್ದಿದ್ದಾರೆ. ಈ ಬಾರಿ ಅವರು ನಾಯಕಿಯಂತೆ ತೆರೆ ಮೇಲೆ ಹೊಳೆಯದಿದ್ದರೂ, ಸಾಮಾಜಿಕ ಜಾಲತಾಣಗಳ ಮೂಲಕ ತಮ್ಮ ಭಾವನೆಗಳನ್ನು ಹಂಚಿಕೊಂಡು ಸುದ್ದಿಯಲ್ಲಿ ತಮ್ಮದೇ ಆದ ಖಾಸಗಿತನದಿಂದ ಓದುಗರ ಹೃದಯ ಮುಟ್ಟಿದ್ದಾರೆ.

2 ಚರಂತಪ್ಪಜ್ಜನ ಲೀಲೆಗಳು ನಂಬಿದ ಮನೆಮನಗಳಿಗೂ ಬೆಳಕಾಗಿವೆ

3 14 ನೌಕರರಿಗೆ ಪಿಂಚಣಿ ನೀಡುವಂತೆ ಹೈ ಆದೇಶ

6 51.25 ಕೋಟಿ ರೂ. ಮೌಲ್ಯದ ಅಕ್ರಮ ಒತ್ತುವರಿ ತೆರವು

ಬೆಂಗಳೂರು | ಬೆಂ.ಗ್ರಾಮಾಂತರ | ತುಮಕೂರು | ಮೈಸೂರು | ಮಂಡ್ಯ | ರಾಮನಗರ | ಕೋಲಾರ | ಚಿಕ್ಕಬಳ್ಳಾಪುರ | ಚಿತ್ರದುರ್ಗ | ದಾವಣಗೆರೆ | ಶಿವಮೊಗ್ಗ | ಮಂಗಳೂರು | ಉಡುಪಿ | ಹುಬ್ಬಳ್ಳಿ | ಮಡಿಕೇರಿ | ಚಿಕ್ಕಮಗಳೂರು | ಹಾಸನ | ಬಳ್ಳಾರಿ

VOLUME: 15 22 APRIL 2025 ಮಂಗಳವಾರ RS: 2 PAGE: 06 ISSUE: 18

CALL 9740160669

# ಭಾರತ ಸಾರಥಿ

BHARATHA SARATHI

KANNADA DAILY NEWS PAPER

ಸದಾ ನಿಮ್ಮೊಂದಿಗೆ ಕನ್ನಡ ದಿನಪತ್ರಿಕೆ



ಸಂಪಾದಕ ಗಂಡಸಿ ಸದಾನಂದಸ್ವಾಮಿ

RNI KARKAN2011/44806

ಇ:ಪೇಪರ್: www.epaperbharathasarathi.com | ಇಮೇಲ್: desk.newsbox@gmail.com




ಬಿಜೆಪಿ ವತಿಯಿಂದ ರಾಜ್ಯಾಧ್ಯಕ್ಷ ವಿಜಯೇಂದ್ರ ನೇತೃತ್ವದಲ್ಲಿ ದಾವಣಗೆರೆಯಲ್ಲಿ ಆಯೋಜಿಸಿದ್ದ ಜನಾಕ್ರೋಶ ಯಾತ್ರೆಯಲ್ಲಿ ಹಿರಿಯ ಬಿಜೆಪಿ ನಾಯಕರುಗಳು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಬೃಹತ್ ಜನ ಬೆಂಬಲ ವ್ಯಕ್ತವಾಯಿತು.

## ಅಪಘಾತ: ಓರ್ವ ಸಾವು

ಹಾಸನ: 2 ಬೈಕ್‌ಗಳ ನಡುವೆ ಮುಖಾಮುಖಿ ಡಿಕ್ಕಿಯಾಗಿ, ಝೊಮ್ಯಾಟೋ ಫುಡ್ ಡೆಲಿವರಿ ಬಾಯ್ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಹಾಸನ ಹೊರವಲಯದ ಬೂವನಹಳ್ಳಿ ಬಳಿಯ ರಾಷ್ಟ್ರೀಯ ಹೆದ್ದಾರಿ 75ರ ಬೈಪಾಸ್ ರಸ್ತೆಯಲ್ಲಿ ನಡೆದಿದೆ.

ಮುತ್ತತ್ತಿ ಗ್ರಾಮದ ಎಸ್.ಬಿ.ಎಂ. ಲೇಔಟ್‌ನ ನಿವಾಸಿ ಶರತ್(40) ಮೃತ ದುರ್ದೈವಿ. ಶರತ್ ಭಾನುವಾರ ರಾತ್ರಿ 11 ಗಂಟೆಯಲ್ಲಿ ಫುಡ್ ಡೆಲಿವರಿ ಮಾಡಲು ಹಾಸನ ನಗರದಿಂದ ಗೆಂಡೆಗಟ್ಟೆಗೆ ತೆರಳುತ್ತಿದ್ದರು. ಈ ವೇಳೆ ರಾಷ್ಟ್ರೀಯ ಹೆದ್ದಾರಿಗೆ ತಿರುವು ತೆಗೆದುಕೊಳ್ಳುತ್ತಿದ್ದಾಗ ಬೆಂಗಳೂರು ಕಡೆಯಿಂದ ಬಂದ ಮತ್ತೊಂದು ಬೈಕ್ ಡಿಕ್ಕಿಯಾಗಿದೆ. ಅಪಘಾತದ ರಭಸಕ್ಕೆ ಶರತ್ ತಲೆಗೆ ತೀವ್ರ ಪೆಟ್ಟು ಬಿದ್ದು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.

ಶರತ್ ಹೆಲ್ಮೆಟ್ ಧರಿಸದ ಕಾರಣ ತಲೆಗೆ ಬಲವಾದ ಪೆಟ್ಟಾಗಿದ್ದು, ತೀವ್ರ ರಕ್ತಸ್ರಾವವಾಗಿ ಶರತ್ ಸ್ಥಳದಲ್ಲೇ ಮೃತಪಟ್ಟದ್ದಾರೆ. ಮತ್ತೊಬ್ಬ ಬೈಕ್ ಸವಾರನಿಗೂ ಗಂಭೀರ ಗಾಯಗಳಾಗಿದ್ದು, ಹಿಮ್ಸ್ ಆಸ್ಪತ್ರೆಗೆ ದಾಖಲಾಗಿದೆ.

ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದೆ.

## ಲವ್ವರ್ ಕಾಟಕ್ಕೆ ಶಿಕ್ಷಕಿ ಆತ್ಮಹತ್ಯೆ

ಗದಗ: ಲವ್ವರ್ ಬ್ಲ್ಯಾಕ್‌ಮೇಲ್‌ನಿಂದ ಹಸೆಮಣೆ ಏರಬೇಕಿದ್ದ ದೈಹಿಕ ಶಿಕ್ಷಕಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲೂಕಿನ ಅಸುಂಡಿ ಗ್ರಾಮದಲ್ಲಿ ನಡೆದಿದೆ.

ಸೈರಾಬಾನು ನದಾಫ್(29) ಆತ್ಮಹತ್ಯೆ ಮಾಡಿಕೊಂಡಿರುವ ಶಿಕ್ಷಕಿ. ಮದುವೆಗೆ ಇನ್ನೂ ಕೇವಲ 8 ದಿನ ಬಾಕಿ ಇರುವಾಗಲೇ ಸೈರಾಬಾನು ಮನೆಯಲ್ಲಿ ನೇಣಿಗೆ ಶರಣಾಗಿದ್ದಾರೆ.

ಸೈರಾಬಾನು ಪೋಷಕರು ಮದುವೆ ಸಾಮಗ್ರಿಗಳನ್ನು ತರಲು ಪೇಟೆಗೆ ಹೋಗಿದ್ದರು. ಪೋಷಕರು ಮರಳಿ ಬರುವಷ್ಟರಲ್ಲಿ ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಕಳೆದ 5 ವರ್ಷಗಳಿಂದ ಸೈರಾಬಾನು, ಮೈಲೇರಿ ಎಂಬಾತನನ್ನು ಪ್ರೀತಿ ಮಾಡುತ್ತಿದ್ದರು. ಆದರೆ ಕೆಲ ದಿನಗಳ ಹಿಂದೆ ಲವ್ ಬ್ರೇಕಪ್ ಆಗಿತ್ತು. ಬ್ರೇಕಪ್ ಬಳಿಕ ಪೋಷಕರ ಒತ್ತಾಯದ ಮೇರೆಗೆ ಸೈರಾಬಾನು ಬೇರೆ ಮದುವೆಗೆ ಒಪ್ಪಿಕೊಂಡಿದ್ದರು. ಆದರೆ ಸೈರಾಬಾನು ಮದುವೆ ತಯಾರಿ ನೋಡಿ ಲವರ್ ಮೈಲಾರಿ ಟಾರ್ಚರ್ ಶುರುವಾಗಿತ್ತು. ಬೇರೆ ಮದುವೆ ಆದರೆ ಇಬ್ಬರ ಫೋಟೋ ಹಾಗೂ ವೀಡಿಯೋಗಳನ್ನು ವೈರಲ್ ಮಾಡುತ್ತೇನೆ ಎಂದು ಆತ ಬೆದರಿಕೆ ಹಾಕಿದ್ದ ಎಂಬ ಆರೋಪವಿದೆ. ಸೈರಾಬಾನು ಮರ್ಯಾದೆಗೆ ಅಂಜಿ ಆತ್ಮಹತ್ಯೆ ಶರಣಾಗಿದ್ದಾರೆ ಎಂಬ ಶಂಕ ವ್ಯಕ್ತವಾಗಿದೆ.

ಕೊನೆಯ ಮಗಳು ಎಂದು ಹೆತ್ತವರು ಭರ್ಜರಿಯಾಗಿ ಮದುವೆ ಮಾಡಿಕೊಡಲು ಸಿದ್ಧತೆ ಮಾಡಿಕೊಂಡಿದ್ದರು. ಮದುವೆಯ ಸಂಭ್ರಮದಲ್ಲಿದ್ದ ಮನೆಗೆ ಈಗ ಸೂತಕದ ಛಾಯೆ ಆವರಿಸಿದೆ.

ಹತ್ತಾರು ಮೆಡಲ್, ಕಪ್ ಗೆದ್ದುಕೊಂಡಿದ್ದರು. ಗಂಡು ಮಕ್ಕಳಿಲ್ಲದ ಕಾರಣ ಸೈರಾಬಾನು ಇಡೀ ಮನೆ ಜವಾಬ್ದಾರಿಯನ್ನು ಹೊತ್ತಿದ್ದರು.

ಸ್ಪೀಕರ್‌ಗೆ ಮನವಿ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿರೋಧ ಪಕ್ಷದ ನಾಯಕ(ಎಲ್‌ಒಪಿ) ಆರ್. ಅಶೋಕ್ ಅವರು, "ನಾವು ಸ್ಪೀಕರ್ ಅವರನ್ನು ಭೇಟಿ ಮಾಡಿ ನಮ್ಮ ಮನವಿ ಸಲ್ಲಿಸಿದ್ದೇವೆ. ಶಾಸಕರು ಕಮಿಟಿ ಸಭೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಬಿಜೆಪಿ ಶಾಸಕರನ್ನು ಆರು ತಿಂಗಳ ಕಾಲ ಅಮಾನತುಗೊಳಿಸಿರುವುದು ನ್ಯಾಯಯುತ ಕ್ರಮವಲ್ಲ" ಎಂದರು. "ಹಿಂದೆ ನೂರಾರು ಇದೇ ರೀತಿಯ ಘಟನೆಗಳು ನಡೆದಿವೆ. ಬಿಜೆಪಿ, ಸ್ಪೀಕರ್ ಗೆ ಅವಮಾನಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಸಿಡಿ ವಿಷಯದ ಬಗ್ಗೆ ನಾವು ಒಂದು ಪಕ್ಷವಾಗಿ ಪ್ರತಿಭಟನೆ ನಡೆಸುತ್ತಿದ್ದೆವು.

## ಶಾಸಕರ ಅಮಾನತು ವಾಪಸ್‌ಗೆ ಆಗ್ರಹ

ಬೆಂಗಳೂರು: ರಾಜ್ಯ ಬಿಜೆಪಿ ನಿಯೋಗವು ಸೋಮವಾರ ಬೆಂಗಳೂರಿನ ವಿಧಾನಸೌಧದಲ್ಲಿ ಸ್ಪೀಕರ್ ಯು.ಟಿ. ಖಾದರ್ ಅವರನ್ನು ಭೇಟಿ ಮಾಡಿದ್ದು, 18 ಬಿಜೆಪಿ ಶಾಸಕರ ಅಮಾನತು ರದ್ದುಗೊಳಿಸುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದೆ.

ಮಾರ್ಚ್ 21 ರಂದು, ಒಂದು ಪ್ರಮುಖ ಬೆಳವಣಿಗೆಯೊಂದರಲ್ಲಿ, ಸ್ಪೀಕರ್ ಕುರ್ಚಿಗೆ ಅಗೌರವ ತೋರಿಸಿದ ಮತ್ತು ಮಸೂದೆಯ ಹರಿದ ಪ್ರತಿಗಳನ್ನು ಅವರ ಮೇಲೆ ಎಸೆದ ಆರೋಪದ ಮೇಲೆ 18 ಬಿಜೆಪಿ ಶಾಸಕರನ್ನು ವಿಧಾನಸಭೆಯಿಂದ ಆರು ತಿಂಗಳ ಕಾಲ ಅಮಾನತುಗೊಳಿಸಲಾಗಿದೆ.

ಸ್ಪೀಕರ್‌ಗೆ ಮನವಿ ಪತ್ರ ಸಲ್ಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ವಿರೋಧ ಪಕ್ಷದ ನಾಯಕ(ಎಲ್‌ಒಪಿ) ಆರ್. ಅಶೋಕ್ ಅವರು, "ನಾವು ಸ್ಪೀಕರ್ ಅವರನ್ನು ಭೇಟಿ ಮಾಡಿ ನಮ್ಮ ಮನವಿ ಸಲ್ಲಿಸಿದ್ದೇವೆ. ಶಾಸಕರು ಕಮಿಟಿ ಸಭೆಗೆ ಹೋಗಲು ಸಾಧ್ಯವಾಗುತ್ತಿಲ್ಲ. ಬಿಜೆಪಿ ಶಾಸಕರನ್ನು ಆರು ತಿಂಗಳ ಕಾಲ ಅಮಾನತುಗೊಳಿಸಿರುವುದು ನ್ಯಾಯಯುತ ಕ್ರಮವಲ್ಲ" ಎಂದರು.

"ಹಿಂದೆ ನೂರಾರು ಇದೇ ರೀತಿಯ ಘಟನೆಗಳು ನಡೆದಿವೆ. ಬಿಜೆಪಿ, ಸ್ಪೀಕರ್ ಗೆ ಅವಮಾನಿಸುವ ಉದ್ದೇಶವನ್ನು ಹೊಂದಿರಲಿಲ್ಲ. ಸಿಡಿ ವಿಷಯದ ಬಗ್ಗೆ ನಾವು ಒಂದು ಪಕ್ಷವಾಗಿ ಪ್ರತಿಭಟನೆ ನಡೆಸುತ್ತಿದ್ದೆವು.

ಪ್ರತಿಭಟನೆಯು ಪಕ್ಷದ ನಿಲುವು ಮತ್ತು ಸ್ಪೀಕರ್ ವಿರುದ್ಧ ಹೋಗುವ ಯಾವುದೇ ಉದ್ದೇಶ ಇರಲಿಲ್ಲ ಎಂದು ನಾವು ಸ್ಪಷ್ಟಪಡಿಸಿದ್ದೇವೆ" ಎಂದು ಅಶೋಕ್ ಹೇಳಿದರು.

ಸ್ಪೀಕರ್ ನಮ್ಮ ಮನವಿಗೆ ಗೌರವಯುತವಾಗಿ ಪ್ರತಿಕ್ರಿಯಿಸಿದರು ಮತ್ತು ಈ ವಿಷಯವನ್ನು ಪರಿಶೀಲಿಸುವುದಾಗಿ ಹಾಗೂ ಕಾನೂನು ಸಚಿವರೊಂದಿಗೆ ಚರ್ಚಿಸಿದ ನಂತರ ತಮ್ಮ ಅಭಿಪ್ರಾಯ ತಿಳಿಸುವುದಾಗಿ ಹೇಳಿದರು ಎಂದರು.

ವಿಧಾನಸಭಾ ಅಧಿವೇಶನವು ಸುಗಮವಾಗಿ ನಡೆಯಬೇಕೆಂದು ಸ್ಪೀಕರ್ ಬಯಸುವುದಾಗಿ ಮತ್ತು ಅಂತಿಮ ನಿರ್ಧಾರ ತೆಗೆದುಕೊಳ್ಳುವ ಮೊದಲು ಸರ್ಕಾರದೊಂದಿಗೆ ಸಮಾಲೋಚಿಸುವುದಾಗಿ ಹೇಳಿದರು. "ಅವರ ಪ್ರತಿಕ್ರಿಯೆ ಸಕಾರಾತ್ಮಕವಾಗಿತ್ತು" ಎಂದು ಅಶೋಕ್ ತಿಳಿಸಿದರು.

ಇನ್ನು ಕರ್ನಾಟಕದ ಮಾಜಿ ಡಿಜಿಪಿ ಓಂ ಪ್ರಕಾಶ್ ಅವರ ಹತ್ಯೆಯ ಬಗ್ಗೆ ಪ್ರತಿಕ್ರಿಯಿಸಿದ ಅಶೋಕ್, "ಕರ್ನಾಟಕದಲ್ಲಿ ಕೊಲೆಗಳು ಮತ್ತು ಅತ್ಯಾಚಾರಗಳು ನಡೆಯುತ್ತಿವೆ. ಕಾನೂನು ಸುವ್ಯವಸ್ಥೆ ಕುಸಿದಿದೆ.

ಈಗ ಪೊಲೀಸ್ ಅಧಿಕಾರಿಗಳೂ ಸುರಕ್ಷಿತವಾಗಿಲ್ಲ. ಕೊಲೆಗೆ ಕಾರಣ ಏನೇ ಇರಲಿ, ಘಟನೆ ರಾಷ್ಟ್ರೀಯ ಸುದ್ದಿಗಳಲ್ಲಿ ಸ್ಥಾನ ಪಡೆದಿದೆ" ಎಂದು ಟೀಕಿಸಿದರು.

## ರಾಜ್ಯದಲ್ಲಿ ಒಂದು ವಾರ ಮಳೆ ಮುನ್ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಬಿಸಿಲಬ್ಬರ ಹೆಚ್ಚುತ್ತಿರುವ ಹೊತ್ತಲ್ಲಿ ಹಲವೆಡೆ ಮಳೆರಾಯ ತಂಪೆರೆಯುತ್ತಿದ್ದಾನೆ. ಕೆಲವೆಡೆ ವರುಣ ಅಬ್ಬರಿಸಿ ಬೊಬ್ಬರಿಯುತ್ತಿದ್ದರೇ ಇನ್ನೂ ಹಲವೆಡೆ ಸಾಧಾರಣ ಮಳೆಯಾಗುತ್ತಿದೆ. ಇದರ ನಡುವೆಯೇ ಹವಾಮಾನ ಇಲಾಖೆ ಮುಂದಿನ ಒಂದು ವಾರ ಗುಡುಗು ಸಹಿತ ಹಾಗೂ ಸಾಧಾರಣ ಮಳೆಯಾಗುವ ಮುನ್ನೆಚ್ಚರಿಕೆ ನೀಡಿದೆ. ವಾಯುಭಾರ ಕುಸಿತದ ಹಿನ್ನೆಲೆ ರಾಜ್ಯದಲ್ಲಿ ಏಳು ದಿನಗಳ ಕಾಲ ಮಳೆಯಾಗಲಿದೆ ಎಂಬ ಮುನ್ಸೂಚನೆಯನ್ನು ಹವಮಾನ ಕೇಂದ್ರ ನೀಡಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಬಿರುಗಾಳಿ, ಸಿಡಿಲು-ಗುಡುಗು ಸಹಿತ ಭಾರೀ ಮಳೆ ಬರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ. ಈಗಾಗಲೇ ರಾಜ್ಯದ ಹಲವೆಡೆ ಮಳೆರಾಯ ಅಬ್ಬರಿಸುತ್ತಿದ್ದು, ಈ ಆರ್ಭಟ ಮುಂದಿನ ಒಂದು ವಾರವೂ ಮುಂದುವರೆಯಲಿದೆ ಎಂದು ಅಂದಾಜಿಸಲಾಗಿದೆ. ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಬಿರುಗಾಳಿ, ಸಿಡಿಲು-ಗುಡುಗು ಸಹಿತ ಭಾರೀ ಮಳೆ ಬರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ಈಗಾಗಲೇ ರಾಜ್ಯದ ಹಲವೆಡೆ ಮಳೆರಾಯ ಅಬ್ಬರಿಸುತ್ತಿದ್ದು, ಈ ಆರ್ಭಟ ಮುಂದಿನ ಒಂದು ವಾರವೂ ಮುಂದುವರೆಯಲಿದೆ ಎಂದು ಅಂದಾಜಿಸಲಾಗಿದೆ. ಏ.21ರಿಂದ ಏ.27ರವರೆಗೆ ಮಳೆ ಬರುವ ಮುನ್ಸೂಚನೆ ನೀಡಲಾಗಿದೆ. ಸೋಮವಾರ, ಮಂಗಳವಾರ ಹಾಗೂ ಬುಧವಾರ ದಕ್ಷಿಣ ಕನ್ನಡ, ಉಡುಪಿ, ಬೆಳಗಾವಿ, ಹಾವೇರಿ, ಗದಗ, ಧಾರವಾಡ, ಕೊಡಗು, ಹಾಸನ, ಚಿಕ್ಕಮಗಳೂರು, ಶಿವಮೊಗ್ಗದ ಒಂದೆರಡು ಸ್ಥಳಗಳಲ್ಲಿ ಬಲವಾದ ಮೇಲ್ಮೈ ಸುಳಿಗಾಳಿ ಇದೆ.



ಅಮೆರಿಕ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಭಾರತಕ್ಕೆ ಭೇಟಿಯನ್ನು ನೀಡಿದ್ದು, ಸೋಮವಾರ ಸಂಜೆ ಜೆ.ಡಿ. ವ್ಯಾನ್ಸ್ ತಮ್ಮ ಪತ್ನಿ ಉಷಾ ಹಾಗೂ ಮೂವರು ಮಕ್ಕಳೊಂದಿಗೆ ದೆಹಲಿಯಲ್ಲಿರುವ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರಿ ಬಂಗಲೆಗೆ ಆಗಮಿಸಿದ್ದಾರೆ. ಈ ವೇಳೆ ವ್ಯಾನ್ಸ್ ಕುಟುಂಬವನ್ನು ಆತ್ಮೀಯವಾಗಿ ಬರಮಾಡಿಕೊಂಡ ಪಿಎಂ ನರೇಂದ್ರ ಮೋದಿ ಜೆಡಿ ವ್ಯಾನ್ಸ್ ಅವರ ಮಕ್ಕಳ ಕೈ ಹಿಡಿದು ತಾವೇ ಮನೆಯೊಳಗೆ ಕರೆದುಕೊಂಡು ಹೊದರು. ಈ ಅಧಿಕೃತ ಭೇಟಿಯ ವೇಳೆ ಪ್ರಧಾನಿ ಮೋದಿ ವ್ಯಾಪಾರ ಒಪ್ಪಂದದ ಬಗ್ಗೆಯೂ ಮಾತನಾಡಿದ್ದಾರೆ.

## ಬೆಲೆ ಕುಸಿತ: ರೈತ ಕಂಗಾಲು

ಚಿತ್ರದುರ್ಗ: ಕೋಟೆನಾಡು ಚಿತ್ರದುರ್ಗದಲ್ಲಿ ಟೊಮೆಟೊದಿಂದ ಅಪಾರ ಲಾಭದ ನಿರೀಕ್ಷೆಯಲ್ಲಿದ್ದ ರೈತರಿಗೆ ಟೊಮೆಟೊ ಬೆಲೆ ಕುಸಿತದಿಂದಾಗಿ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗಿದೆ. ಬೆಲೆ ಕುಸಿತದಿಂದ ಕಂಗಾಲಾದ ರೈತರು ಟೊಮೆಟೊ ಬೆಳೆಯನ್ನು ಕಟಾವು ಮಾಡದೇ ಹೊಲದಲ್ಲೇ ಬಿಟ್ಟಿದ್ದಾರೆ.

ಚಿತ್ರದುರ್ಗ ತಾಲೂಕಿನ ಸಜ್ಜನಕೆರೆ ಗ್ರಾಮದ ರೈತರು ಯಾವುದೇ ಬೆಳೆ ಬೆಳೆದರೂ ಒಂದಲ್ಲ, ಒಂದು ರೀತಿಯಲ್ಲಿ ನಷ್ಟ ಅನುಭವಿಸುವಂತಾಗಿದೆ. ಹೀಗಾಗಿ ಈ ಬಾರಿ ಟೊಮೆಟೊ ಬೆಳೆದು ಅಪಾರ ಲಾಭದ ನಿರೀಕ್ಷೆಯಲ್ಲಿದ್ದರು. ಆದರೆ ನಿರೀಕ್ಷೆಯಂತೆ ಉತ್ತಮ ಇಳುವರಿ ಬಂದರೂ ಕೂಡ ಟೊಮೆಟೊ ಬೆಲೆ ಕುಸಿತದಿಂದಾಗಿ ಮತ್ತೆ ಅನ್ನದಾತರು ಸಾಲ ಶೂಲಕ್ಕೆ ಸಿಲುಕುವಂತಾಗಿದೆ. 25 ಕೆ.ಜಿಯ ಟೊಮೆಟೊ ಬಾಕ್ಸ್‌ಗೆ ಕೇವಲ 20 ರೂ.ಗೆ ಮಾರಾಟವಾಗುತ್ತಿದೆ. ಇದರಿಂದ ಸಾಗಾಣೆ ವೆಚ್ಚ ಹಾಗೂ ಕೂಲಿಯ ಹಣವೂ ರೈತರ ಕೈಗೆ ಸಿಗುತ್ತಿಲ್ಲ. ಹೀಗಾಗಿ ಟೊಮೆಟೊವನ್ನು ಕಟಾವು ಮಾಡದೇ ಗಿಡದಲ್ಲೇ ಬಿಟ್ಟು ರೈತರು ಆಕ್ರೋಶ ಹೊರಹಾಕಿದ್ದಾರೆ.

ಅಪಾರ ಬೆಳೆ ಬೆಳೆದು, ಉತ್ತಮ ಇಳುವರಿ ಬಂದರೂ ಕೂಡ ತಕ್ಕ ಬೆಲೆ ಸಿಗಲಾರದೇ ಕೋಟೆನಾಡಿನ ರೈತರು ಸಂಕಷ್ಟಕ್ಕೀಡಾಗಿದ್ದಾರೆ. ಆದರೆ ಯಾವೊಬ್ಬ ಅಧಿಕಾರಿಯಾಗಲಿ, ಜನಪ್ರತಿನಿಧಿಗಳಾಗಲಿ ಇವರತ್ತ ಸುಳಿದಿಲ್ಲ. ರೈತರ ಸಂಕಷ್ಟ ಆಲಿಸಿಲ್ಲವೆಂದು ರೈತರು ಅಸಮಾಧಾನ ಹೊರಹಾಕಿದ್ದು, ಸರ್ಕಾರದಿಂದ ಸೂಕ್ತ ಪರಿಹಾರ ಒದಗಿಸುವಂತೆ ಆಗ್ರಹಿಸಿದ್ದಾರೆ.

## ವಿಂಗ್ ಕಮಾಂಡರ್‌ಗೆ ಹಿಗ್ಗಾಮುಗ್ಗಾ ಥಳಿತ..!

ಬೆಂಗಳೂರು: ಬೆಂಗಳೂರಿನಲ್ಲಿ ವಿಂಗ್ ಕಮಾಂಡರ್ ಬೋಸ್ ಅವರಿಗೆ ಯುವಕನೋರ್ವ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿತ್ತು. ಈ ಪ್ರಕರಣಕ್ಕೆ ಸದ್ಯ ಟ್ವಿಸ್ಟ್ ಸಿಕ್ಕಿದೆ. ಸಿವಿ ರಾಮನ್ ನಗರದ, ಗೋಪಾಲನ್ ಗ್ರ್ಯಾಂಡ್ ಮಾಲ್ ಬಳಿ ಘಟನೆ ನಡೆದಿದ್ದು, ಇಲ್ಲಿನ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ, ವಿಂಗ್ ಕಮಾಂಡರ್ ಬೋಸ್ ಅವರು ಬೈಕ್ ಸವಾರ, ಟೆಕ್ಕಿ ವಿಕಾಸ್ ಕುಮಾರ್ ಎಂಬುವರ ಮೇಲೆ ಹಲ್ಲೆ ಮಾಡಿರುವ ದೃಶ್ಯಗಳು ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಹಲ್ಲೆ ನಡೆದ ಬಳಿಕ ಬೋಸ್ ಅವರು ಸಂದರ್ಭವನ್ನು ತಿರುಚಲು ಯತ್ನಿಸಿದ್ದಾರೆ. ಭಾಷೆ ವಿಚಾರಕ್ಕೆ ಗಲಾಟೆ ನಡೆದಿದೆ ಎಂದು ವಿಂಗ್ ಕಮಾಂಡರ್ ವಿಡಿಯೋದಲ್ಲಿ ಹೇಳಿದ್ದಾರೆ. ಟೆಕ್ಕಿ



ವಿಕಾಸ್ ಕುಮಾರ್ ಮತ್ತು ಬೋಸ್ ನಡುವೆ ಗಲಾಟೆ ನಡೆಯುತ್ತಿರುವ ವೇಳೆ, ಸ್ಥಳೀಯರು ಗಲಾಟೆ ಬಿಡಿಸಲು ಪ್ರಯತ್ನ ಪಟ್ಟರು.

ಆದರೂ, ಕೂಡ ವಿಂಗ್ ಕಮಾಂಡರ್ ಬೋಸ್ ಬಿಡದೆ ಟೆಕ್ಕಿ ವಿಕಾಸ್ ಕುಮಾರ್ ಮೇಲೆ ಹಲ್ಲೆ ಮಾಡಿರುವುದು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಘಟನೆ ಸಂಬಂಧ ಬೈಯಪ್ಪನಹಳ್ಳಿ ಪೋಲಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ವಿಂಗ್ ಕಮಾಂಡರ್ ಬೋಸ್ ಮತ್ತು ಅವರ ಪತ್ನಿ ಕಾರಿನಲ್ಲಿ ಹೋಗುತ್ತಿದ್ದರು. ಈ ವೇಳೆ, ಸಿವಿ ರಾಮನ್ ನಗರದ, ಗೋಪಾಲನ್ ಗ್ರ್ಯಾಂಡ್ ಮಾಲ್ ಬಳಿ ಬೋಸ್ ಅವರ ಕಾರಿಗೆ ಬೈಕ್ ಸವಾರ, ಟೆಕ್ಕಿ ವಿಕಾಸ್ ಕುಮಾರ್ ಅವರ ಬೈಕ್ ಟಚ್ ಆಗಿದೆ. ಈ ವಿಚಾರಕ್ಕೆ ಟೆಕ್ಕಿ ವಿಕಾಸ್ ಕುಮಾರ್ ಮತ್ತು ವಿಂಗ್ ಕಮಾಂಡರ್ ಬೋಸ್ ನಡುವೆ ಗಲಾಟೆಯಾಗಿ ಪರಸ್ಪರ ಹೊಡದಾಡಿದ್ದಾರೆ. ಭಾಷೆ ವಿಚಾರಕ್ಕೆ ನನ್ನ ಮೇಲೆ ಹಲ್ಲೆ ಮಾಡಲಾಗಿದೆ ಎಂದು ವಿಂಗ್ ಕಮಾಂಡರ್ ಬೋಸ್ ಅವರು ವಿಡಿಯೋ ಮಾಡಿದ್ದಾರೆ.

ವಿಂಗ್ ಕಮಾಂಡರ್ ಬೋಸ್ ಅವರ ಪತ್ನಿ ನೀಡಿದ ದೂರಿನ ಆಧಾರದ ಮೇಲೆ ಟೆಕ್ಕಿ ವಿಕಾಸ್ ಕುಮಾರ್ ಅವರ ವಿರುದ್ಧ ಬೈಯಪ್ಪನಹಳ್ಳಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ವಿಕಾಸ್ ಕುಮಾರ್ ಅವರನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆ ಸಂಬಂಧ ಬೆಂಗಳೂರಿನ ಪೂರ್ವ ವಿಭಾಗದ ಡಿಸಿಪಿ ದೇವರಾಜ್ ಮಾತನಾಡಿ, ಟಿನ್ ಫ್ಯಾಕ್ಟರಿ ಜಂಕ್ಷನ್ ಬಳಿ ಬೆಳಗ್ಗೆ 6 ಗಂಟೆ ಸುಮಾರಿಗೆ ಘಟನೆ ನಡೆದಿದೆ.

ವಿಂಗ್ ಕಮಾಂಡರ್ ಬೋಸ್ ಹಾಗೂ ಅವರ ಪತ್ನಿ ವಾಯುಸೇನೆಯಲ್ಲಿ ಕೆಲಸ ಮಾಡುತ್ತಿದ್ದರು.

## ಬಿಎಸ್‌ವೈ ಕೇಸ್ ವಿಸ್ತೃತ ಪೀಠಕ್ಕೆ

ನವದೆಹಲಿ: ಅಕ್ರಮ ಡಿನೋಟಿಫಿಕೇಷನ್ ಸೇರಿದಂತೆ ಭ್ರಷ್ಟಾಚಾರ ಪ್ರಕರಣಗಳಲ್ಲಿ ಮಾಜಿ ಸಿಎಂ ಬಿ.ಎಸ್ ಯಡಿಯೂರಪ್ಪ ವಿರುದ್ಧ ತನಿಖೆ ನಡೆಸಲು ಪೂರ್ವಾನುಮತಿ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ. ಸೆಕ್ಷನ್ 17ಎಗೆ ಸಂಬಂಧಿಸಿದ ಸ್ಪಷ್ಟನೆಗಾಗಿ ವಿಸ್ತೃತ ಪೀಠಕ್ಕೆ ಪ್ರಕರಣವನ್ನು ವರ್ಗಾಯಿಸಿದೆ. ನ್ಯಾ. ಜೆ.ಬಿ ಪಾರ್ದಿವಾಲಾ ನೇತೃತ್ವದ ದ್ವಿ ಸದಸ್ಯ ಪೀಠ ವಿಸ್ತೃತ ವಿಚಾರಣೆ ನಡೆಸಿತ್ತು. ಇಂದು ಈ ಬಗ್ಗೆ ತೀರ್ಪು ನೀಡಿದ ಪೀಠ, ಸುಪ್ರೀಂ ಕೋರ್ಟ್‌ನ ಇಬ್ಬರು ನ್ಯಾಯಾಧೀಶರ ಪೀಠವು ಹಿಂದೆ ಎರಡು ಪ್ರಕರಣಗಳಲ್ಲಿ ಭ್ರಷ್ಟಾಚಾರ ವಿಚಾರಣೆ ಅಥವಾ ತನಿಖೆಯನ್ನು ಪ್ರಾರಂಭಿಸುವ ಮೊದಲು ಪೂರ್ವಾನುಮತಿ ಪಡೆಯುವ ವಿಷಯದ ಬಗ್ಗೆ ವಿಭಿನ್ನ ತೀರ್ಪು ನೀಡಿವೆ.

# ಚರಂತಪ್ಪಜ್ಜನ ಲೀಲೆಗಳು ನಂಬಿದ ಮನೆಮನಗಳಿಗೂ ಬೆಳಕಾಗಿವೆ

ಬೆಂಗಳೂರು: ಶ್ರೀ ಗುರು ದೊಡ್ಡ ಬಸವೇಶ್ವರ ಪೌಂಡೇಶನ್ ಮತ್ತು ಸೇವಾ ಸಮಿತಿ ಬೆಂಗಳೂರು ವತಿಯಿಂದ ಶ್ರೀ ಚರಂತಪ್ಪಜ್ಜ ಮಹಾಸ್ವಾಮಿಗಳ 21ನೇಯ ಪುಣ್ಯ ಸ್ಮರಣೋತ್ಸವ ಮತ್ತು ಗುರುಚರಂತಾರ್ಯ ಶ್ರೀ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಬೆಂಗಳೂರು ನಗರದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.






ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಮತ್ತು ಚಂರಂಪ್ಪಜ್ಜನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಡಾ.ಚಂದ್ರಶೇಖರ ಕಂಬಾರವರು ಉದ್ಘಾಟಿಸಿದರು ಇದೇ ವೇಳೆ ಮಾತನಾಡಿದ ಅವರು ಈ ನಾಡಿನಲ್ಲಿ ಸಂತ ಶರಣರು ಇರುವುದರಿಂದಲೆ ಈ ನಾಡು ಸೊಂಪಾಗಿರುವುದು,ಚರಂತಪ್ಪಜ್ಜನವರು ನಡೆದಾಡಿದ ಪುಣ್ಯಭೂಮಿಯಲ್ಲಿ ನಾನು ಕರ್ತವ್ಯ ನಿರ್ವಹಿಸಿದ್ದು ನನ್ನ ಭಾಗ್ಯ. ನಾನು ಪಡೆದ ಸಾವಿರಾರು ಪ್ರಶಸ್ತಿಗಳಲ್ಲಿ "ಗುರುಚರಂತಾರ್ಯ ಶ್ರೀ" ಪ್ರಶಸ್ತಿಯು ನನ್ನ ಅಂತರಾಳದ ಹೃದಯದ ಶ್ರೇಷ್ಠತೆಯನ್ನು ಹೆಚ್ಚಿಸಿದೆ ಎಂದು ಭಾವುಕರಾದರು.ಒಬ್ಬ ಸಂತ ಲಿಂಗೈಕ್ಯರಾಗಿ ಎರಡು ದಶಕ ಕಳೆದರೂ ಅವರ ಸ್ಮರಣೆ ಈ ನಾಡಿನಲ್ಲಿದೆ ಎಂದರೆ ಅವರ ಲೀಲೆ ಮತ್ತು ತತ್ವಾದರ್ಶಗಳು ನಮಗೆ ಮಾದರಿ ಎಂದರು.

ದಿವ್ಯ ಸಾನಿಧ್ಯವಹಿಸಿ ಮಾತನಾಡಿದ ಶ್ರೀ ಮ.ನಿ.ಪ್ರ.ಜ.ಸೋಮಶಂಕರ ಮಹಾಸ್ವಾಮಿಗಳು ಮಾತನಾಡಿ ಈ ನಾಡು ಕಂಡ ಸಂಸಾರಯೋಗಿ ಪರಮತಪಸ್ವಿ ಚರಂತಪ್ಪಜ್ಜನು ಲೀಲೆಗಳ ಮೂಲಕ ಈ ನಾಡಿಗೆ ಬೆಳಕಾದವರು.ಸಮಾಜದಲ್ಲಿ ಭಕ್ತಿಯ ಯುಕ್ತಿಗಳನ್ನು ಬಿತ್ತರಿಸುವ ಮೂಲಕ ಮಠ ಮಾನ್ಯಗಳ ಶ್ರೇಷ್ಠತೆಯನ್ನು ಹೆಚ್ಚಿಸುವ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯ ಎಂದರು.

ನಟ ಶ್ರೀಧರ ಮಾತನಾಡಿ ನಾನು ಕಲಾಕ್ಷೇತ್ರದಲ್ಲಿ ವಿಭಿನ್ನ ವಿಶೇಷ ದೈವ ಸ್ವರೂಪದ ಪಾತ್ರಗಳನ್ನು ಮಾಡಿರುವೆ ಆದರೆ ಚರಂತಪ್ಪಜ್ಜನ ಪಕೃತಿದತ್ತ ಲೀಲೆಗಳನ್ನು ಕೇಳಿದಾಗಿನಿಂದ ನನ್ನ ಆಧ್ಯಾತ್ಮಿಕತೆ ಹೆಚ್ಚಾಗಿ ಮಠ ಮಾನ್ಯಗಳೊಂದಿಗಿನ ಒಡನಾಟವನ್ನು ಮತ್ತು ಸಂತ ಶರಣ ಪರಂಪರೆಯ ತತ್ವಾದರ್ಶಗಳನ್ನು ನನ್ನ ವೈಯಕ್ತಿಕ ಜೀವನದಲ್ಲಿ ನೆಮ್ಮದಿ ಕಲ್ಪಿಸಿವೆ ಎಂದರು.

ಇದೇ ವೇಳೆ ಡಾ.ಚಂದ್ರಶೇಖರ ಕಂಬಾರ ಅವರಿಗೆ ವಿಶೇಷ ಗೌರವದೊಂದಿಗೆ ಗುರುಚರಂತಾರ್ಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಾಧ್ಯಾಪಕಿ ಸಂಪದಾ,ಪ್ರದೀಪ್ ಗುಡ್ಡದ್, ಡಾ.ವಾಣಿಶ್ರೀ ಪಾಟೀಲ್,ನಾಗಭೂಷನ್ ಅರಳಿ ಅವರಿಗೂ ಗುರುಚರಂತಾರ್ಯ



ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಡಾ.ಮಹೇಶ್ವರ ಸ್ವಾಮೀಜಿ, ಷ.ಬ್ರ.ಅಜಾತ ಶಂಭುಲಿಂಗ ಶಿವಾಚಾರ್ಯ ಸ್ವಾಮೀಜಿ, ಶಿವಜ್ಜ ತಾತನವರು,ಡಾ.ಎಂ.ಶಿವಮೂರ್ತಿ,ನಟ ಗಂಡಸಿ ಸದಾನಂದ,ಉಮೇಶ ಬಣಕಾರ,ಕಲಾವಿದರಾದ ಕೋಗಳಿ ಕೊಟ್ರೇಶ್ ,ಎಸ್.ವಿ.ಪಾಟೀಲ್ ಗುಂಡೂರು ಮತ್ತಿತರರು ಉಪಸ್ಥಿತಿ ಇದ್ದರು. ಇದೇ ವೇಳೆ ಸಾಹಿತಿ ಎಸ್.ವಿ.ಪಾಟೀಲ್ ಗುಂಡೂರು ಅವರು ಬರೆದ ಪುಸ್ತಕ ಪ್ರದರ್ಶನ, ಯೋಗನೃತ್ಯ,ಸಂಗೀತ ಕಾರ್ಯಕ್ರಮ ಜರುಗಿದವು.

# ಸೇವಾಮನೋಭಾವ ಬೆಳಸಿಕೊಳ್ಳಲು ಕರೆ

ರಾಮನಗರ: ತುರ್ತು ಸಂದರ್ಭಗಳು, ಕಠಿಣ ಸನ್ನಿವೇಶಗಳು ಸೇರಿದಂತೆ ಮಾನವನಿಗೆ ಅಗತ್ಯವೆನಿಸಿದ ಸಂದರ್ಭಗಳಲ್ಲಿ ನೆರವು ನೀಡುವ ರೆಡ್‌ಕ್ರಾಸ್ ಸಂಸ್ಥೆಯಂತೆ ಸೇವಾ ಮನೋಭಾವವನ್ನು ಬೆಳಸಿಕೊಳ್ಳುವಂತೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ನ್ಯಾ. ಬಿ.ವಿ. ರೇಣುಕ ಕರೆ ನೀಡಿದರು.

ಅವರು ಏ. 19ರ ಶನಿವಾರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾ ವಕೀಲರ ಸಂಘ ಹಾಗೂ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಪ್ರಥಮ ಚಿಕಿತ್ಸಾ ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ತುರ್ತು ಪರಿಸ್ಥಿತಿಗಳಲ್ಲಿ ಸಹಾಯ ಮಾಡುವುದು, ಗಾಯಗೊಂಡವರಿಗೆ ಚಿಕಿತ್ಸೆ ನೀಡುವುದು ಮತ್ತು ಬಡವರಿಗೆ ಆರೋಗ್ಯ ಸೇವೆ ಒದಗಿಸುವುದು ರೆಡ್ ಕ್ರಾಸ್‌ನ ಮುಖ್ಯ ಉದ್ದೇಶವಾಗಿದೆ ಎಂದರು.

ರೆಡ್‌ಕ್ರಾಸ್ ಸಂಸ್ಥೆಯು 1863ರಲ್ಲಿ ಸ್ವಿಜರ್‌ಲ್ಯಾಡ್‌ನ ಜಿನೀವ ಹೆನ್ರಿ ಡುನಾಂಟ್ ಎಂಬ ವ್ಯಕ್ತಿ ಸ್ಥಾಪನೆ ಮಾಡಿದರು. ಈ ಸಂಸ್ಥೆಯು ಮಾನವೀಯತೆ, ತಟಸ್ಥತೆ, ತಟಸ್ಥ ನಿಲುವು, ಸ್ವಯಂ ಶಾಸನ, ಸೇವಾ ಮನೋಭಾವನೆ, ಏಕತೆ ಮತ್ತು ವಿಶ್ವ ಭ್ರಾತೃತ್ವ ಎಂಬ ತತ್ವಗಳನ್ನು ಹೊಂದಿದೆ. ರಕ್ತದಾನ ಶಿಬಿರಗಳನ್ನು ಆಯೋಜಿಸಿ ಅಗತ್ಯವಿರುವವರಿಗೆ ರಕ್ತ ಒದಗಿಸುವುದು, ಪ್ರಥಮ ಚಿಕಿತ್ಸೆಯ ತರಬೇತಿಗಳನ್ನು ನಾಗರೀಕರಿಗೆ ನೀಡುವುದು ಮತ್ತು ಪ್ರಕೃತಿ ವಿಕೋಪಗಳುಂಟಾಗುವ ಸಂದರ್ಭದಲ್ಲಿ ಆಹಾರ, ಬಟ್ಟೆ, ಔಷಧಿ ಹಾಗೂ ತಾತ್ಕಾಲಿಕ ಆಶ್ರಯ ಒದಗಿಸುವುದು ಇದರ ಪ್ರಮುಖ ಕಾರ್ಯಗಳಾಗಿವೆ ಎಂದರು.

ಸೇವಾ ಮನೋಭಾವನೆಯ ರೆಡ್‌ಕ್ರಾಸ್ ಸಂಸ್ಥೆಯೊಂದಿಗೆ ನಾವು ಸಹ ಕೈ ಜೋಡಿಸಬೇಕು. ಆರೋಗ್ಯ ಮತ್ತು ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ತಕ್ಷಣಕ್ಕೆ ಆರೋಗ್ಯದ ಸಮಸ್ಯೆ ಉಂಟಾಗುವ ಸಂದರ್ಭದಲ್ಲಿ ಮನೆಯಲ್ಲಿಯೇ ಪ್ರಥಮ ಚಿಕಿತ್ಸೆ ಮಾಡಿಕೊಳ್ಳಲು ಪ್ರಥಮ ಚಿಕಿತ್ಸಾ ಕಿಟ್‌ಗಳನ್ನು ರೆಡ್‌ಕ್ರಾಸ್ ಸಂಸ್ಥೆಯವರು ವಿತರಿಸುತ್ತಿದ್ದಾರೆ. ಇದರ ಸದುಪಯೋಗ ಪಡೆದುಕೊಳ್ಳುವಂತೆ ಅವರು ಹೇಳಿದರು.

# ಎಐ ಆಲಂಗಿಸಿಕೊಂಡ ಜಾಹೀರಾತು ಉದ್ದಿಮೆ

ಮುಂಬೈ: ಭಾರತದ ಜಾಹೀರಾತು ಮಾನದಂಡಗಳ ಪರಿಷತ್ತಿನ ಅಕಾಡೆಮಿಯು, ಮುಂಬೈನಲ್ಲಿ ನಡೆದ ಜಾಗತಿಕ ಮಾತುಕತೆಗಳ ಶೃಂಗಸಭೆಯ ವೇಳೆ ನಡೆದ ತನ್ನ ಗ್ಲೋಬಲ್ ಅಡ್ಡ ಕಾರ್ಯಕ್ರಮದ ಸಂದರ್ಭದಲ್ಲಿ ತನ್ನ ಇತ್ತೀಚಿನ ವರದಿನ್ನು ಬಿಡುಗಡೆ ಮಾಡಿತು. ಇದು, ಜಾಹೀರಾತು ಉದ್ದಿಮೆಯ ಮೇಲೆ ಕೃತಕ ಬುದ್ಧಿಮತ್ತೆ(ಎಐ)ನ ಪ್ರಭಾವದ ಬಗ್ಗೆ ಸುದೀರ್ಘ ಶೋಧನೆಯಾಗಿದ್ದು ಕ್ರಿಯಾಶೀಲವಾದ ಭಾರತೀಯ ಮಾರುಕಟ್ಟೆಯ ಮೇಲೆ ನಿರ್ದಿಷ್ಟ ಗಮನ ಕೇಂದ್ರೀಕರಣ ಸಲ್ಲಿಸುತ್ತದೆ. ಎಐ, ಬ್ರ್ಯಾಂಡುಗಳು ಯಾವ ರೀತಿ ಗ್ರಾಹಕರೊಡನೆ ಸಂಪರ್ಕಗೊಳ್ಳುತ್ತವೆ, ಪ್ರಚಾರಗಳನ್ನು ಗರಿಷ್ಟೀಕರಣಗೊಳಿಸುತ್ತವೆ ಮತ್ತು ಅನುಭವಗಳನ್ನು ವೈಯಕ್ತೀಕೃತಗೊಳಿಸುತ್ತವೆ ಎಂಬುದನ್ನು ಮೂಲಭೂತವಾಗಿ ಮರುರೂಪಿಸುತ್ತಿರುವಂತಹ ಪ್ರಮುಖ ಸಂದರ್ಭದಲ್ಲಿ ಈ ವರದಿಯು ಬಂದಿದೆ.



ಸಂಶೋಧನೆಯನ್ನು, ಒಂದು ವಿನ್ಯಾಸ ತಂತ್ರಜ್ಞಾನ ಸಂಸ್ಥೆ ನೆರವೇರಿಸಿತ್ತು. ಗೂಗಲ್ ಮತ್ತು ಗೇಮ್ಸ್‌ನಿಂದ ಬೆಂಬಲ ಪಡೆದುಕೊಳ್ಳುವುದರ ಜೊತೆಗೆ, ಅಧ್ಯಯನವು, ಡಿಯಾಗೊ, ಹಿಂದುಸ್ತಾನ್ ಯೂನಿಲಿವರ್ ಮಾಂಡೆಲೆಜ್, ನೆಸ್ಲೆ, ಸಿಪ್ಲ ಹೆಲ್ತ್, ಕೋಕ–ಕೋಲಾ, ಕೋಲ್ಗೇಟ್, ಪೆಪ್ಸಿಕೊ, ಕ&ಉ, ಕೆನ್ವ್ಯು, ಬಜಾಜ್ ಆಟೋ ಮತ್ತು ಡ್ರೀಮ್ ಸ್ಪೋರ್ಟ್ಸ್‌ನ ಬೆಂಬಲ ಹೊಂದಿರುವ ಅಕಾಡೆಮಿಯ ಚಿಂತನಾ ನಾಯಕತ್ವದ ಕೆಲಸದ ಭಾಗವೂ ಆಗಿದೆ. ವರದಿಯು, ಬ್ರ್ಯಾಂಡುಗಳು, ಏಜೆನ್ಸಿಗಳು, ಕಾನೂನು ನಿಪುಣರು, ಶೈಕ್ಷಣಿಕ ತಜ್ಞರು, ನಿರ್ಬಂಧಕರು ಹಾಗೂ ತಂತ್ರಜ್ಞಾನ ಆವಿಷ್ಕಾರಕರೂ ಒಳಗೊಂಡಂತೆ, ಡಿಜಿಟಲ್ ಪರಿಸರವ್ಯವಸ್ಥೆಯಾದ್ಯಂತ ಇರುವ 27ಕ್ಕಿಂತ ಹೆಚ್ಚಿನ ಮುಂಚೂಣಿ ಭಾರತೀಯ ಪ್ರಾಕ್ಟಿಶನರ್ ಗಳು ಮತ್ತು ಚಿಂತನಾ ನಾಯಕರುಗಳಿಂದ ಬಂದ ದೃಷ್ಟಿಕೋನಗಳನ್ನು ಒಟ್ಟಿಗೆ ತರುತ್ತದೆ. ಪ್ರಾಥಮಿಕ ಸಂಶೋಧನೆ, ಫೋಕಸ್ ಗ್ರೂಪ್‌ಗಳು ಹಾಗೂ ಮುಖಾಮುಖಿ ಸಂದರ್ಶನಗಳು, ದ್ವಿತೀಯ ಸಂಶೋಧನೆ ಮತ್ತು ಅಭಿಪ್ರಾಯ ಲೇಖನಗಳ ಮೂಲಕ ವರದಿಯು, ಜಾಹೀರಾತಿನಲ್ಲಿ ಎಐ ಒದಗಿಸುವ ಅವಕಾಶಗಳು ಹಾಗೂ ಸವಾಲುಗಳ ಸೂಕ್ಷ್ಮ ತಿಳುವಳಿಕೆಯನ್ನು ಒದಗಿಸುತ್ತದೆ. ಜಾಹೀರಾತು ಕ್ಷೇತ್ರದಲ್ಲಿ ಎಐನ ಸದಾ ಬದಲಾಗುತ್ತಿರುವ ಪಾತ್ರದ ಸಮಗ್ರ ದೃಷ್ಟಿಕೋನ ಒದಗಿಸಲು ವರದಿಯು ನಾಲ್ಕು ಪ್ರಮುಖ ಕ್ಷೇತ್ರಗಳನ್ನು ಶೋಧಿಸುತ್ತದೆ:

ಎಐನ ಪರಿಕಲ್ಪನೆ: ಜಾಹೀರಾತಿನಲ್ಲಿ ಎಐ ಸಂಯೋಜನೆಯ ಸುತ್ತಮುತ್ತ ಇರುವ ಧನಾತ್ಮಕ ದೃಷ್ಟಿಕೋನವನ್ನು ಎತ್ತಿತೋರಿಸುವ ವರದಿಯಲ್ಲಿ, ಸಾಮರ್ಥ್ಯ ಹಾಗೂ ವೈಯಕ್ತೀಕರಣವನ್ನು ಮುನ್ನಡೆಸಲು ಅದಕ್ಕಿರುವ ಸಂಭಾವ್ಯತೆಯನ್ನು ತಜ್ಞರು ಗುರುತಿಸಿದ್ದಾರೆ. ಮಹತ್ತರವಾದ ಶೋಧನೆ ಏನೆಂದರೆ, ಮನುಷ್ಯ ಸೃಜನಶೀಲತೆಯನ್ನು ಸ್ಥಳಬದಲಾಯಿಸುವುದಲ್ಲದೆ, ಅದನ್ನು ವರ್ಧಿಸುವಲ್ಲಿ ಎಐನ ನಿಜವಾದ ಶಕ್ತಿ ಅಡಗಿದೆ ಎಂಬುದು ತಿಳಿದಿರುವುದು. ಇದು, ಜಾಹೀರಾತುದಾರರು ಸೆರೆಹಿಡಿಯುವಂತಹ ಮತ್ತು ಸೂಕ್ಷ್ಮ ಕಥಾನಕಗಳನ್ನು ರಚಿಸಲು ನೆರವಾಗಿದೆ.

# ಕೆಎಂಎಫ್‌ಗೆ ಜವಾಬ್ದಾರಿ ವಹಿಸುವವರನ್ನು ನೇಮಿಸಲಿ: ಸತೀಶ್



ಬಳ್ಳಾರಿ: ಇಲ್ಲಿನ ಕೆಎಂಎಫ್‌ನ ವಿಭಾಗಗಳಿಗೆ ಜವಾಬ್ದಾರಿಯುತ ಅಧಿಕಾರಿಗಳನ್ನು ನಿಯೋಜಿಸಬೇಕೆಂದು ವಿಧಾನ ಪರಿಷತ್ ಸದಸ್ಯ ಸತೀಶ್ ಒತ್ತಾಯಿಸಿದ್ದಾರೆ.

ವಾಜಪೇಯ ಬಡಾವಣೆಯ ಬಿಜೆಪಿ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ಹಿಂದಿನ ಅವಧಿಯಲ್ಲಿ ಕೇಂದ್ರೀಯ ಜಾಗೃತ ದಳ ವಿಭಾಗದ ಅಧಿಕಾರಿಗಳು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟ ನಿಯಮಿತ, ಸಹಕಾರ ಸಂಘಗಳು, ಬಿಎಂಸಿಗಳು, ಶೀಥಲೀಕರಣ ಕೇಂದ್ರಗಳು ಹಾಗೂ ಮಾರುಕಟ್ಟೆಯ ವ್ಯಾಪ್ತಿ ಪ್ರದೇಶಕ್ಕೆ ಭೇಟಿ ನೀಡಿದಾಗ, ಹಲವಾರು ನ್ಯೂನ್ಯತೆಗಳು ಕಂಡು ಬಂದಿದೆ ಎಂದು ಹೇಳಿದ್ದಾರೆ.

ದಿನವಹಿ ಒಕ್ಕೂಟಕ್ಕೆ ಬರುವ ಒಟ್ಟು ಹಾಲಿನ ಪ್ರಮಾಣ 2.1 ಲಕ್ಷ ಲೀಟರ್ ಹಾಲು ಬಿಎಂಸಿ ಬ್ಯಾಂಕರುಗಳ ಮೂಲಕ ಸ್ವೀಕರಿಸಲಾಗುತ್ತಿದ್ದು, ಸಂಜೆ 5.30 ರಿಂದ ರಾತ್ರಿ 12 ಶಿವರೆಗೆ ಸದರಿ ಬ್ಯಾಂಕರುಗಳ ಹಾಲು ಸ್ವೀಕರಣೆಯ ಜವಾಬ್ದಾರಿಯುತ ಅಧಿಕಾರಿಗಳು ಇರುವುದು ಕಂಡು ಬಂದಿದೆ. 8 ಉತ್ಪಾದನಾ ವಿಭಾಗಕ್ಕೆ ಜವಾಬ್ದಾರಿಯುತ ಅಧಿಕಾರಿಗಳನ್ನು ನಿಯೋಜಿಸಬೇಕೆಂದು ಅವರು ಒತ್ತಾಯಿಸಿದರು.

5.30 ರ ನಂತರ ಕೇವಲ ಪಾಳೆಯಲ್ಲಿ ಸಹ ಕೆಮಿಸ್ಟಳು ಮಾತ್ರ ಕರ್ತವ್ಯ ನಿರ್ವಹಿಸುತ್ತಾರೆ. ಗುಣಮಟ್ಟ ನಮೂದಿಸಿ, ಟ್ಯಾಂಕರ್ ಟ್ರಕ್ ಚೀಟಿಗೆ ಸಹಿ ಮಾಡಿರುವುದನ್ನು ಗಮನಿಸಿದ್ದು, ತಾಂತ್ರಿಕ ಅಧಿಕಾರಿ, ಸಹಾಯಕ ವ್ಯವಸ್ಥಾಪಕರ ಸಹಿ ಇರುವುದಿಲ್ಲ ಎಂದು ಸತೀಶ ಹೇಳಿದರು. ಮಿಲ್ಕ್ ಕೋಲ್ಡ್ ಸ್ಟೋರ್ ಮತ್ತು ಡಿಪ್ ಫ್ರೀಜರ್‌ಗಳನ್ನು ನಿರ್ವಹಣೆ ಮಾಡಿ ದುರಸ್ತಿ ಮಾಡಿಸಬೇಕಾಗಿರುತ್ತದೆ. ಮೊಸರು, ಇನ್ ಕ್ಯೂಬೆಷನ್ ಕೊಠಡಿಯನ್ನು ಸ್ವಚ್ಛವಾಗಿರಬೇಕಾಗಿರುತ್ತದೆ. ಭೇಟಿ ನೀಡಿದ ಸಮಯದಲ್ಲಿ ಎಲ್ಲಾ ಕೋಲ್ಡ್ ಸ್ಟೋರ್‌ಗಳಿಗೆ ನೀರು ಹೊಡೆದಿರುವುದನ್ನು ಗಮನಿಸಲಾಗಿದೆ. ಕೋಲ್ಡ್ ಸ್ಟೋರ್‌ನಲ್ಲಿ ಪೈಪ್ ಲೈನ್‌ಗಳು, ಬೊಯರ್ ಗಳ ನಿರ್ವಹಣೆ ಇರುವುದಿಲ್ಲ. ಹಾಗೂ ಅಮೋನಿಯಾ ಲೀಕೇಜ್ ಇರುವುದನ್ನು ಗಮನಿಸಲಾಗಿರುತ್ತದೆ.

ಪ್ರಿವೆಂಟಿವ್ ನಿರ್ವಹಣೆ ಆಗತ್ಯವಿರುತ್ತದೆ. ಟ್ಯಾಂಕರ್‌ಗಳಿಂದ ಬರುವ ಹಾಲಿನ ಗುಣಮಟ್ಟ ತುಂಬಾ ಕಡಿಮೆ ಇದ್ದು ಎಮ್‌ಬಿಆರ್‌ಟಿ 50 ರಿಂದ 120 ನಿಮಿಷಗಳು ಇರುವುದನ್ನು ಗಮನಿಸಲಾಗಿದೆ. ಇದನ್ನು ವೃದ್ಧಿಸಲು ಎಮ್ ಪಿಸಿಎಸ್ಗಳಲ್ಲಿ ಸ್ವಚ್ಛತೆ ಅಗತ್ಯವಿದೆ ಎಂದು ಅವರು ವಿವರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಅನಿಲ್ ನಾಯ್ಡು, ಕೆಎಂ–ಎಫ್‌ನ ಮಾಜಿ ನಿರ್ದೇಶಕ ವೀರಶೇಖರರೆಡ್ಡಿ, ಬಳ್ಳಾರಿ ಮಹಾನಗರ ಬೆಂಪಾಲಿಕೆಯ ಸದಸ್ಯರಾದ ಡಾ.ಕೆ.ಎಸ್.ಅಶೋಕ್ ಕುಮಾರ್, ಹನುಮಂತಪ್ಪ, ಮತ್ತಿತರರು ಉಪಸ್ಥಿತರಿದ್ದರು.

# ಯಣ್ಣಂಗೂರು ಗ್ರಾಮದಲ್ಲಿ ಧಾರ್ಮಿಕ ವೈಭವ



ಶಿಡ್ಲಘಟ್ಟ: ತಾಲ್ಲೂಕಿನ ಯಣ್ಣಂಗೂರು ಗ್ರಾಮದಲ್ಲಿರುವ ಶ್ರೀ ಸೋಮೇಶ್ವರಸ್ವಾಮಿ, ಶ್ರೀ ವೇಣುಗೋಪಾಲಸ್ವಾಮಿ ಹಾಗೂ ಶ್ರೀ ಯೋಗಿ ನಾರೇಯಣಯತೀಂದ್ರ ದೇವಾಲಯಗಳ ಮಹಾದ್ವಾರದ ಕಳಸಗಳ ಕುಂಭಾಭಿಷೇಕ ಮತ್ತು ಪ್ರಾರಂಭೋತ್ಸವ ಕಾರ್ಯಕ್ರಮವು ಶನಿವಾರದಂದು ವಿಜೃಂಭಣೆಯಿಂದ ನಡೆಯಿತು.

ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಸಕರು ಬಿ.ಎನ್. ರವಿಕುಮಾರ್ ಅವರು ಮಾತನಾಡುತ್ತಾ, "ಭಾರತೀಯರ ಪುರಾತನ ಧಾರ್ಮಿಕ ಪರಂಪರೆ ಹಾಗೂ ಸಂಸ್ಕೃತಿಯು ಮುಂದಿನ ಯುವಪೀಳಿಗೆಗೆ ಪರಿಚಿತವಾಗಬೇಕಾದ ಅಗತ್ಯವಿದೆ. ರಾಮಾಯಣ, ಮಹಾಭಾರತ, ಭಾಗವತಗಳ ಬೋಧನೆಯ ಮೂಲಕ ಮಕ್ಕಳು ಮೌಲ್ಯಯುತ ಜೀವನ ಶೈಲಿಗೆ ಪ್ರೇರಿತರಾಗುತ್ತಾರೆ," ಎಂದು ಹೇಳಿದರು.

ಅವರು ಮುಂದುವರೆದು, "ಶಿಡ್ಲಘಟ್ಟ ಕ್ಷೇತ್ರವು ಹಿಂದಿನ ಕಾಲದಲ್ಲಿ ಹಿಂದುಳಿದ ಭಾಗವಾಗಿದ್ದರೂ, ಕಳೆದ ಒಂದು ವರ್ಷದಲ್ಲಿ ಹಲವಾರು ಅಭಿವೃದ್ಧಿ ಕಾರ್ಯಗಳು ನಡೆದಿವೆ. ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆ, ಡಾ. ಬಿ.ಆರ್. ಅಂಬೇಡ್ಕರ್ ಭವನ, ನೌಕರರ ಭವನ, ಗುರುಭವನದಂತಹ ಯೋಜನೆಗಳು ಪ್ರಗತಿಯಲ್ಲಿವೆ," ಎಂದು ಹೇಳಿದರು.

ಸಂಸ್ಕೃತಿಯ ಪುನರುಜ್ಜೀವನೆ ಅಗತ್ಯವಿದೆ: ತಾಲ್ಲೂಕು ಬಿಜೆಪಿ ಅಧ್ಯಕ್ಷ ಸೀಕಲ್ ಆನಂದಗೌಡ ಅವರು, "ಯುವಪೀಳಿಗೆ ಮೇಲೆ ಹಿರಿಯರ ವರ್ತನೆಯ ಪ್ರಭಾವವಿದ್ದು, ಕ್ಷೀಣಿಸುತ್ತಿರುವ ಸಂಸ್ಕಾರಗಳು ಪುನಃ ಸ್ಥಾಪನೆಯಾಗಬೇಕು. ಜೀವನದ ಸರಳತೆ ಮತ್ತು ಮೌಲ್ಯಪೂರ್ಣತೆಯ ಅಗತ್ಯವಿದೆ," ಎಂದು ತಿಳಿಸಿದರು.

ಯತ್ನಮೂಲಕ ಐತಿಹಾಸಿಕ ಎಚ್ಚರಿಕೆ: ಕಾರ್ಯಕ್ರಮದಲ್ಲಿ ಮಾತನಾಡಿದ ಬೆಂಗಳೂರು ಗ್ರಾಮಾಂತರ ಜಿಲ್ಲಾ ಶರಣಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಎಚ್.ಎಸ್. ರುದ್ರೇಶಮೂರ್ತಿ ಅವರು, "ಈ ಗ್ರಾಮಕ್ಕೆ ಐತಿಹಾಸಿಕ ಮಹತ್ವವಿದ್ದು, ಕೈವಾರ ಯೋಗಿನಾರಾಯಣ ಯತೀಂದ್ರರು ಈ ಗ್ರಾಮದಲ್ಲಿ ಸಂಚರಿಸಿದ್ದಾರೆ. ದೇವಾಲಯದ ಗೋಪುರದಲ್ಲಿ ಜಯ–ವಿಜಯ, ಆನೆ ಶಿಲ್ಪಗಳು ಮತ್ತು ದೇವತೆಗಳ ವಿಗ್ರಹಗಳು ಅತ್ಯಂತ ಆಕರ್ಷಕವಾಗಿವೆ," ಎಂದರು.

ಪೂಜಾ ಕಾರ್ಯಕ್ರಮಗಳ ವೈಭವ: ನೂತನ ಮಹಾದ್ವಾರದಲ್ಲಿ ವಿ.ಎನ್. ರಾಮಮೋಹನ್ ಶಾಸ್ತ್ರಿ ಮತ್ತು ತಂಡದಿಂದ ಹೋಮ, ಹವನ, ಕುಂಭಾಭಿಷೇಕ, ಪ್ರತಿಷ್ಠಾಪನೆ ಕಾರ್ಯಗಳು ಜರುಗಿದವು. ಶಾಸಕರಿಂದ ನಾಮಫಲಕ ಅನಾವರಣದೊಂದಿಗೆ ದ್ವಾರಭಾಗಿಲು ಲೋಕಾರ್ಪಣೆ ನಡೆಯಿತು.

ಮಹತ್ವದ ಉಪಸ್ಥಿತಿ: ಕಾರ್ಯಕ್ರಮದಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಂಕ್ ಮುನಿಯಪ್ಪ, ನಿರ್ದೇಶಕ ಕೆ. ಮಂಜುನಾಥ್, ಮಾಜಿ ನಿರ್ದೇಶಕ ಸಿ.ವಿ. ನಾರಾಯಣಸ್ವಾಮಿ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಲಕ್ಷ್ಮೀನಾರಾಯಣರೆಡ್ಡಿ, ಕೃಷಿಕ ಸಮಾಜದ ನಿರ್ದೇಶಕ ನಾಗಮಂಗಲ ಶ್ರೀನಿವಾಸಗೌಡ, ಹಾಗೂ ಹಲವು ಗಣ್ಯರು ಉಪಸ್ಥಿತರಿದ್ದರು.

# *ವಿಧಾನಸೌಧಕ್ಕೂ ಬಂಗಾರಪೇಟೆ ಚಾಟ್ಸ್ ಎಂಟ್ರಿ..!!!*

ಬಂಗಾರಪೇಟೆ: ವಿವಿಧ ತಿಂಡಿ ತಿನಿಸುಗಳಿಂದ ಇಡೀ ರಾಜ್ಯದಲ್ಲೇ ಗಮನ ಸೆಳೆಯುತ್ತಿರುವ ಬಂಗಾರಪೇಟೆ ಚಾಟ್ಸ್ ವಿಧಾನಸೌಧಕ್ಕೂ ಎಂಟ್ರಿ ಕೊಡುವ ಮೂಲಕ ಬಂಗಾರಪೇಟೆ ಹೆಮ್ಮೆ ಪಡುವಂತೆ ಆಗಿದೆ.

ಕಳೆದ ಮೂರು ದಶಕಗಳಿಂದ ಬಂಗಾರಪೇಟೆ ಚಾಟ್ಸ್ ತನ್ನದೇ ಆದ ಖ್ಯಾತಿಯನ್ನ ಪಡೆದುಕೊಂಡಿದೆ. ಪಾನಿಪೂರಿಯಿಂದಲೇ ಆಹಾರ ಪ್ರಿಯರಿಗೆ ಬಾಯಲ್ಲಿ ನೀರೂರಿಸುತ್ತದೆ. ಸಣ್ಣದಾಗಿ ಬಂಗಾರಪೇಟೆಯಲ್ಲಿ ಪ್ರಾರಂಭಗೊಂಡಿದ್ದ ಪಾನಿಪೂರಿ ಬಂಗಾರಪೇಟೆ ಚಾಟ್ಸ್ ಹೆಸರಿನಲ್ಲಿ ಮೂಲೆ ಮೂಲೆಯಲ್ಲಿ ಖ್ಯಾತಿಗೊಂಡು ಎಲ್ಲಿ ನೋಡಿದರೂ ಬಂಗಾರಪೇಟೆ ಚಾಟ್ಸ್ ಬೋರ್ಡ್‌ಗಳು ರಾರಾಜಿಸುತ್ತಿವೆ. ರಾಜಧಾನಿ ಬೆಂಗಳೂರು ನಗರದಿಂದ ಕೇವಲ 70–80ಕಿಮೀ ದೂರದಲ್ಲಿ ಬಂಗಾರಪೇಟೆಯಿದೆ. ಬಂಗಾರಪೇಟೆ ಪಾನಿಪೂರಿ ಎಷ್ಟು ಫೇಮಸ್




ಆಗಿದೆ ಎಂದರೆ ರಾಜಧಾನಿ ಸೇರಿದಂತೆ ಜಿಲ್ಲಾ ಕೇಂದ್ರ, ತಾಲ್ಲೂಕು ಕೇಂದ್ರಗಳಲ್ಲಿ ಒಂದಲ್ಲ, ಎರಡಲ್ಲ, ಹತ್ತು ಇಪ್ಪತ್ತು ಬಂಗಾರಪೇಟೆ ಚಾಟ್ಸ್ ಬೋರ್ಡ್ ಕಾಣಬಹುದಾಗಿದೆ.

ಈ ಚಾಟ್ಸ್ ಜೊತೆಗೆ ಈ ಊರಿನ ಹೆಸರು ತಳುಕು ಹಾಕಿಕೊಂಡಿದೆ ಎಂದರೆ ಅದರರ್ಥ ಈ ಚಾಟ್ಸ್ ಮೊದಲು ಹುಟ್ಟಿದ್ದೇ ಬಂಗಾರಪೇಟೆಯಲ್ಲಿ, ಆರಂಭವಾದ ಈ ಚಾಟ್ಸ್ ಈಗ ಇಡೀ ರಾಜ್ಯದಲ್ಲೇ ಫೇಮಸ್ ಆಗಿದೆ. ಬಹುತೇಕ ನಗರಗಳಲ್ಲಿ ಬಂಗಾರಪೇಟೆ ಚಾಟ್ಸ್ ಬ್ರಾಂಚ್ ಶುರುವಾಗಿದೆ.

ಇದು ಮಾಮೂಲು ಚಾಟ್ಸ್‌ಗಿಂತ ಸ್ವಲ್ಪ ವಿಭಿನ್ನವಾಗಿರುತ್ತದೆ. ಅದರಲ್ಲೂ ಬಂಗಾರಪೇಟೆ ಪಾನಿ ಎಂದರೆ ಬಹಳ ರುಚಿ. ನೋಡಲು ಥೇಟ್ ನೀರಿನಂತೆ ಇರುತ್ತೆ. ಈ ಚಾಟ್ಸ್ ರುಚಿ ಇಷ್ಟ ಇಲ್ಲ ಅಂತ ಹೇಳೋಕೆ ಸಾಧ್ಯವೇ ಇಲ್ಲ. ಹೊರಗೆ ಹೋಗಿ ನಾವು ನಮ್ಮ ಇಷ್ಟದ ತಿಂಡಿ ತಿಂದು ಬರುತ್ತೇವೆ.1984ರಲ್ಲಿ ಶುರುವಾದ ಈ ಚಾಟ್ಸ್ ಈಗ ಎಲ್ಲೆಡೆ ಖ್ಯಾತಿ ಗಳಿಸಿದೆ. ಜೊತೆಗೆ ಇದರದ್ದೇ ಪ್ರತ್ಯೇಕ ಶಾಪ್‌ಗಳಿವೆ.

ಹಾಗಾಗಿ ರಾಜ್ಯದ ಮೂಲೆ ಮೂಲೆಯಲ್ಲಿ ಖ್ಯಾತಿಗೊಂಡಿರುವ ಬಂಗಾರಪೇಟೆ ಚಾಟ್ಸ್ ವಿಧಾನಸೌದ ಹೋಟೆಲ್ ಗೆ ಎಂಟ್ರಿ ಕೊಟ್ಟಿರುವ ಬೋರ್ಡ್ ಎಲ್ಲರ ಗಮನ ಸೆಳೆಯುವ ಕೆಲಸ ಆಗಿದೆ.

# ಕಾರ್ಕಲ್ ಮತ್ತು ಐಕಾಮ್ ನಡುವೆ ಮಹತ್ವದ ಒಪ್ಪಂದ

ಹೈದರಾಬಾದ್: ಯುಎಇಯ ಪ್ರಮುಖ ಸಣ್ಣ ಶಸ್ತ್ರಾಸ್ತ್ರ ತಯಾರಕ ಮತ್ತು ಎಡ್ಜ್ ಸಮೂಹದ ಕಾರ್ಕಲ್, ಸಹಯೋಗದೊಂದಿಗೆ ಮೇಘಾ ಎಂಜಿನಿಯರಿಂಗ್ ಅಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್)ನ ಸಮೂಹ ಕಂಪನಿಯಾದ ಐಕಾಮ್ ಟೆಲಿ ಲಿಮಿಟೆಡ್ ಇಲ್ಲಿನ ಐಕಾಮ್ನ ಇಂಟಿಗ್ರೇಟೆಡ್ ಎಂಜಿನಿಯರಿಂಗ್ ಘಟಕದಲ್ಲಿ ವಿಶ್ವ ದರ್ಜೆಯ ಸಣ್ಣ ಶಸ್ತ್ರಾಸ್ತ್ರ ಉತ್ಪಾದನಾ ಸೌಲಭ್ಯಕ್ಕೆ ಚಾಲನೆ ನೀಡಲಾಯಿತು.




ಈ ಘಟಕವು ಟಿಓಟಿ ಒಪ್ಪಂದದಂತೆ ಸುಧಾರಿತ ಶಸ್ತ್ರಾಸ್ತ್ರಗಳ ಸಮಗ್ರ ಸ್ಥಳೀಯ ಉತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತದೆ, ಇದು ಯುಎಇ–ಭಾರತ ರಕ್ಷಣಾ ಸಹಯೋಗದಲ್ಲಿ ಒಂದು ಹೆಗ್ಗುರುತು ಮೈಲಿಗಲ್ಲಾಗಿದೆ.

ಈ ಮುಂದಿನ ಪೀಳಿಗೆಯ ಶಸ್ತ್ರಾಸ್ತ್ರಗಳು ಭಾರತೀಯ ಸಶಸ್ತ್ರ ಪಡೆಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು (ಸಿಆರ್ಪಿಎಫ್), ವಿಶೇಷ ಪಡೆಗಳು, ರಾಜ್ಯ ಪೊಲೀಸ್ ಪಡೆಗಳು ಮತ್ತು ಎಸ್ಪಿಜಿಗಳ ನಿರ್ಣಾಯಕ ಅಗತ್ಯಗಳನ್ನು ಪೂರೈಸುತ್ತವೆ ಮತ್ತು ಕಾರ್ಕಲ್ ನ ಜಾಗತಿಕ ರಫ್ತಿಗೂ ಸಹಕಾರಿಯಾಗಲಿದೆ.

"ಈ ಸೌಲಭ್ಯವು ಭಾರತದ ರಕ್ಷಣಾ ಪಡೆಗಳಿಗೆ ನಮ್ಮ ಅಚಲ ಬದ್ಧತೆ ಮತ್ತು ನಮ್ಮ ಗೌರವಾನ್ವಿತ ಪ್ರಧಾನ ಮಂತ್ರಿ ನರೇಂದ್ರ ಅವರ ದೂರದೃಷ್ಟಿಯ ಮೇಲಿನ ನಮ್ಮ ನಂಬಿಕೆಗೆ ಸಾಕ್ಷಿಯಾಗಿದೆ. ಮೋದಿ ಅವರ ಆತ್ಮನಿರ್ಭರ ಭಾರತಕ್ಕಾಗಿ ಐಕಾಮ್ನಲ್ಲಿ ನಾವು ಭಾರತದಲ್ಲಿ ಮಾತ್ರ ತಯಾರಿಸುತ್ತಿಲ್ಲ, ಭಾರತಕ್ಕಾಗಿ ಮತ್ತು ಜಾಗತಿಕವಾಗಿ ನಿಖರತೆ, ಹೆಮ್ಮೆ ಮತ್ತು ಪ್ರಬಲ ಉದ್ದೇಶದಿಂದ ತಯಾರಿಸುತ್ತಿದ್ದೇವೆ" ಎಂದು ಐಕಾಮ್ನ ವ್ಯವಸ್ಥಾಪಕ ನಿರ್ದೇಶಕ ಸುಮಂತ್ ಪಟೂರು ಹರ್ಷಿಸಿದರು.

"ಕಾರ್ಕಲ್ ನಮ್ಮೊಂದಿಗೆ ವಿಶ್ವಾಸಾರ್ಹ ದೂರದೃಷ್ಟಿಯ ಪಾಲುದಾರರಾಗಿ, ನಾವು ವಿಶ್ವ ದರ್ಜೆಯ ಶಸ್ತ್ರಾಸ್ತ್ರಗಳಿಗಿಂತ ಹೆಚ್ಚಿನದನ್ನು ನಿರ್ಮಿಸಲಿದ್ದೇವೆ – ಇದು ದಿಟ್ಟ, ಸ್ವಾವಲಂಬಿ ಭಾರತ ನಿರ್ಮಾಣದಲ್ಲಿ ಮಹತ್ವದ ಹೆಜ್ಜೆಯಾಗಿದೆ. ಇದು ಪ್ರತಿಯೊಬ್ಬ ಸೈನಿಕನಿಗೂ ನಮ್ಮ ಸೆಲ್ಯೂಟ್ ಮತ್ತು ರಕ್ಷಣಾ ಕ್ಷೇತ್ರವನ್ನು ಸಬಲೀಕರಣಗೊಳಿಸುವ ಮತ್ತು ಸ್ಫೂರ್ತಿ ನೀಡುವ ಗುಣಮಟ್ಟವನ್ನು ತಲುಪಿಸುವ ನಮ್ಮ ಭರವಸೆ" ಎಂದು ಪಟೂರ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

"ಐಕಾಮ್– ಕಾರ್ಕಲ್ ಸಣ್ಣ ಶಸ್ತ್ರಾಸ್ತ್ರ ಸಂಕೀರ್ಣದ ಉದ್ಘಾಟನೆಯು ಭಾರತೀಯ ಶಸ್ತ್ರಾಸ್ತ್ರ ಮಾರುಕಟ್ಟೆ ಮತ್ತು ರಕ್ಷಣಾ ವಲಯವನ್ನು ಬೆಂಬಲಿಸುವ ನಮ್ಮ ಪ್ರಯತ್ನಗಳಲ್ಲಿ ಇದು ಒಂದು ಮೈಲಿಗಲ್ಲು, ಯುಎಇಯಿಂದ ಭಾರತಕ್ಕೆ ಮೊದಲ ಸಣ್ಣ ಶಸ್ತ್ರಾಸ್ತ್ರ ತಂತ್ರಜ್ಞಾನ ವರ್ಗಾವಣೆಯಾಗಿರುವ ಈ ಕಾರ್ಖಾನೆಯು ಪ್ರಧಾನಿ ಮೋದಿಯವರ ಮೇಕ್ ಇನ್ ಇಂಡಿಯಾ ಉಪಕ್ರಮಕ್ಕೆ ನಮ್ಮ ಬದ್ಧತೆಯನ್ನು ಮತ್ತಷ್ಟು ಎತ್ತಿ ತೋರಿಸುತ್ತದೆ ಎಂದು ಕಾರ್ಕಲ್ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಮದ್ ಅಲಮೇರಿ ಹೇಳಿದರು. "ಎರಡು ವಿಶೇಷ ಪಡೆಗಳ ಘಟಕಗಳಿಂದ ಯಶಸ್ವಿ ತಾಂತ್ರಿಕ ಅರ್ಹತೆ ಮತ್ತು ಸೇನಾ ಪ್ರಯೋಗಗಳಲ್ಲಿ ಬಲವಾದ ಪ್ರಗತಿಯೊಂದಿಗೆ, ಭಾರತದ ರಕ್ಷಣಾ ಪರಿಸರ ವ್ಯವಸ್ಥೆಯಲ್ಲಿ ನಮ್ಮ ಪಾತ್ರವನ್ನು ಇನ್ನಷ್ಟು ಆಳಗೊಳಿಸಲು ನಾವು ಹೆಮ್ಮೆಪಡುತ್ತೇವೆ. ವಿಶ್ವ ದರ್ಜೆಯ ಉತ್ಪಾದನಾ ಪರಿಣತಿ ಮತ್ತು ರಾಷ್ಟ್ರೀಯ ಸ್ವಾವಲಂಬನೆಗೆ ಆಳವಾದ ಬದ್ಧತೆಯೊಂದಿಗೆ ಐಕಾಮ್ (ಐಸಿಓಎಂಎಂ) ಹೆಚ್ಚು ಸಮರ್ಥ ಮತ್ತು ವಿಶ್ವಾಸಾರ್ಹ ಪಾಲುದಾರ ಎಂದು ಸಾಬೀತಾಗಿದೆ ಎಂದವರು ಈ ಸಂದರ್ಭದಲ್ಲಿ ನುಡಿದರು,

ಹೈದರಾಬಾದ್ನಲ್ಲಿ ತಲೆಎತ್ತಿರುವ ಈ ಅತ್ಯಾಧುನಿಕ ಶಸ್ತ್ರಾಸ್ತ್ರ ನಿರ್ಮಾಣ ಘಟಕವು ದೇಶದ ಆತ್ಮನಿರ್ಭರ ಭಾರತ್ ಮತ್ತು ಮೇಕ್ ಇನ್ ಇಂಡಿಯಾ ಪ್ರಯಾಣದಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಜಾಗತಿಕ ತಂತ್ರಜ್ಞಾನವನ್ನು ಭಾರತೀಯ ಉತ್ಪಾದನಾ ಶ್ರೇಷ್ಠತೆಯೊಂದಿಗೆ ಸಂಯೋಜಿಸುತ್ತದೆ. ಇದು ಕಾರ್ಕಲ್ನ ಅಂತರರಾಷ್ಟ್ರೀಯ ಕಾರ್ಯಕ್ರಮಗಳನ್ನು ಸಹ ಬೆಂಬಲಿಸುತ್ತದೆ, ವಿಶ್ವಾಸಾರ್ಹ ಜಾಗತಿಕ ರಕ್ಷಣಾ ಉತ್ಪಾದನಾ ಕೇಂದ್ರವಾಗಿ ಭಾರತದ ಪಾತ್ರವನ್ನು ಬಲಪಡಿಸುತ್ತದೆ.

# ಇನ್ನರ್ ವೀಲ್ ಕ್ಲಬ್‌ನಿಂದ ಪುಸ್ತಕ ವಿತರಣೆ



ಬಳ್ಳಾರಿ: ಇಲ್ಲಿನ ಇನ್ನರ್ ವೀಲ್ ಕ್ಲಬ್ ವತಿಯಿಂದ ಶ್ರೀ ವಾಸವಿ ವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೇಸಿಗೆ ಶಿಬಿರದ ಪುಸ್ತಕಗಳನ್ನು ವಿತರಿಸಲಾಯಿತು.

ಶ್ರೀ ವಾಸವಿ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷರಾದ ವಿಠ್ಠ ಕೃಷ್ಣಕುಮಾರ್, ಕಾರ್ಯದರ್ಶಿ ಪಿ.ಎನ್. ಸುರೇಶ್, ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ ಶಿಲ್ಪಾ, ಕಾರ್ಯದರ್ಶಿ ಅಲ್ಲಂ ರಚನಾ, ಖಜಾಂಚಿಗಳಾದ ಭಾರತಿ ಪಾಟೀಲ್, ಇಂದಿರಾ, ಸದಸ್ಯರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷೆ, ಶಿಲ್ಪಾ, ಖಜಾಂಚಿ ಭಾರತಿ ಪಾಟೀಲ್ ವಾಸವಿ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷ ವಿಠ್ಠ ಕೃಷ್ಣಕುಮಾರ್ ಅವರು ಮಾತನಾಡಿ, ಇನ್ನರ್‌ವೀಲ್ ಕ್ಲಬ್ ಎಂದರೆ ಕೇವಲ ಸಮಾಜ ಸೇವೆಯೇ ಅಲ್ಲ, ಅದು ಸಹಾನುಭೂತಿ, ಸಹಕಾರ ಮತ್ತು ಪ್ರೇರಣೆಯ ಮಾದರಿಯಾಗಿದೆ. ಮಕ್ಕಳ ಅಭಿವೃದ್ಧಿಗೆ ಸಹಕಾರಿಯಾಗುವ ಈ ರೀತಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ನಮಗೆ ಹೆಮ್ಮೆಯ ವಿಷಯವಾಗಿದೆ ಎಂದರು. ಶಾಲೆಯ ಆಡಳಿತ ಮಂಡಳಿ, ಶಿಕ್ಷಕವೃಂದ ಮತ್ತು ಮಕ್ಕಳಿಗೆ ತಮ್ಮ ಧನ್ಯವಾದಗಳನ್ನು ಸಲ್ಲಿಸಿದರು.

# ಚಿಣ್ಣರಿಗಾಗಿ ಅಪ್ಲಾಟೂನ್ ಅನಿಮೇಟೆಡ್ ಸೀರೀಸ್

ಬೆಂಗಳೂರು: ಗತಕಾಲದಲ್ಲಿ ಅಮರ ಚಿತ್ರ ಕಥಾ ಮ್ಯಾಗಜಿನ್ ಹೆಚ್ಚು ಪ್ರಸಿದ್ಧಿಗೊಂಡಿತ್ತು. ಇದರ ಜೂನಿಯರ್ ಲೈಬ್ರರಿಯನ್ನು ಆಧರಿಸಿದ ಮೊದಲ ಅನಿಮೇಟಡ್ 'ಅಪ್ಲಟೂನ್' ಸರಣಿ ಪ್ರಾರಂಭವಾಗುತ್ತಿದೆ. 4 ರಿಂದ 8 ವರ್ಷದ ಮಕ್ಕಳನ್ನು ಗುರಿಯಾಗಿಟ್ಟುಕೊಂಡು, ಕಿಯಾ ಮತ್ತು ಕಯಾನ್ ಇಬ್ಬರು ಕಾಲ್ಪನಿಕ ಒಡಹುಟ್ಟಿದವರ ಸಾಹಸಗಳನ್ನು ಅನುಸರಿಸುತ್ತದೆ.




ಮಕ್ಕಳು ವಿಆರ್ ಹೆಡ್‌ಸೆಟ್‌ಗಳನ್ನು ನೋಡುತ್ತಿದ್ದಾಗ, ಅವರನ್ನು ಭಾರತೀಯ ಪುರಾಣ ಮತ್ತು ಜಾನಪದದ ಐಕಾನಿಕ್ ಕಥೆಗಳ ಮೇಲೆ, ನಿರ್ಮಿಸಲಾದ ಮೋಡಿ ಮಾಡುವ ಪ್ರಪಂಚವಾದ ಸ್ಟೋರಿಲ್ಯಾಂಡ್‌ಗೆ ಕರೆದೊಯ್ಯುತ್ತದೆ. ಅದರಲ್ಲಿ ಪ್ರಯಾಣಿಸುವಾಗ ಕುತೂಹಲ, ಧೈರ್ಯ, ಪ್ರಾಚೀನ ಬುದ್ಧಿವಂತಿಕೆ, ಪೌರಾಣಿಕ ಜೀವಿಗಳು, ರೋಮಾಂಚಕ ಅನ್ವೇಷಣೆಗಳನ್ನು ಎದುರಿಸುತ್ತಾರೆ.

ಸಂಜೀವ್ ಸಾಹೂ ನಿರ್ದೇಶನ. ಪಾಪ್‌ಕಾರ್ನ್ ಅನಿಮೇಷನ್ ಸ್ಟುಡಿಯೋ, ಪರಯಾನ್ ಅನಿಮೇಷನ್ ಸ್ಟುಡಿಯೋ, ಲಿವಿಂಗ್ ಪಿಕ್ಸೆಲ್ಸ್, ವಾರ್ನಿಕ್ ಸ್ಟುಡಿಯೋ ಜಂಟಿಯಾಗಿ ಬಂಡವಾಳ ಹೂಡಿದೆ. ಸರಣಿಯು ಏಪ್ರಿಲ್ 25ರಿಂದ ಅಪ್ಲಾಯ್ಸ್ ಎಂಟರ್‌ಟೈನೆಮೆಂಟ್‌ನ 'ಅಪ್ಲಟೂನ್' ಯೂಟ್ಯೂಬ್ ಚಾನಲ್‌ದಲ್ಲಿ ವೀಕ್ಷಿಸಬಹುದಾಗಿದೆ. ಅಲ್ಲದೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಹೊಸ ಕಂತುಗಳು ಬಿಡುಗಡೆಯಾಗುತ್ತದೆ.

# ಶ್ರೀ ಸತ್ಯ ಸಾಯಿ ಬಾಬಾ: ಪರಿವರ್ತನೆ ಮತ್ತು ಪ್ರೀತಿಯ ಪರಂಪರೆ

ಏಪ್ರಿಲ್ 24 ಅನ್ನು ಜಗತ್ತು ಮಹಾ ಆರಾಧನಾ ದಿನ ಮತ್ತು "ವಿಶ್ವ ಮಾನವ ಮೌಲ್ಯಗಳ ದಿನ" ಎಂದು ಆಚರಿಸಲಾಗುತ್ತದೆ.ಈ ಸಂದರ್ಭದಲ್ಲಿ ಶ್ರೀ ಸತ್ಯ ಸಾಯಿ ಬಾಬಾ ಅವರ ಜೀವನ ಮತ್ತು ಬೋಧನೆಗಳು ಹೊಸ ಪ್ರಾಮುಖ್ಯತೆಯನ್ನು ಪಡೆಯುತ್ತವೆ. ವಿಶೇಷವಾಗಿ ಅವರ ಶತಮಾನೋತ್ಸವ ಆಚರಣೆಯ ಸಂದರ್ಭದಲ್ಲಿ.ಬಾಬಾ ಲಕ್ಷಾಂತರ ಪವಾಡಗಳು ಮತ್ತು ದೈವಿಕ ಪ್ರೇರಿತ ಬುದ್ಧಿವಂತಿಕೆಗೆ ಹೆಸರುವಾಸಿಯಾಗಿದ್ದಾರೆ. ಅವರ ಶಾಶ್ವತ ಪರಂಪರೆಯು ಜಾಗತಿಕವಾಗಿ ಲಕ್ಷಾಂತರ ಜನರ ಮೇಲೆ ಪರಿಣಾಮ ಬೀರುತ್ತಲೇ ಇದೆ, ಅದು ಏಕತೆ, ಸಹಾನುಭೂತಿ, ಏಕತೆ ಮತ್ತು ಮಾನವೀಯ ಮೌಲ್ಯಗಳ ತತ್ವಗಳ ಮೇಲೆ ಇಡೀ ಮಾನವೀಯತೆಯನ್ನು ಸೂಕ್ಷ್ಮವಾಗಿ ಪರಿವರ್ತಿಸುತ್ತದೆ.

ಬಾಬಾ ಅವರ ಅಸಾಧಾರಣ ಸಾಮರ್ಥ್ಯಗಳನ್ನು ಕಂಡು ಲಕ್ಷಾಂತರ ಭಕ್ತರು ದಶಕಗಳಿಂದ ಆಶ್ಚರ್ಯಚಕಿತರಾಗಿದ್ದಾರೆ. ಅವನ ಅವತಾರದ ನಿಜವಾದ ಉದ್ದೇಶವು ಭೂಮಿಯ ಮೇಲೆ ದೈವಿಕ ಶಾಂತಿಯ ಹೊಸ ಯುಗವನ್ನು ಪ್ರಾರಂಭಿಸುವುದು ಮತ್ತು ಎಲ್ಲಾ ಜನರ ಹೃದಯಗಳಲ್ಲಿ ದೈವಿಕ ಗುಣಗಳನ್ನು ಸ್ಥಾಪಿಸುವುದಾಗಿದೆ.

ಆದಾಗ್ಯೂ, ಬಾಬಾ ಅವರ ಸಂದೇಶವು ಪವಾಡ ಗುಣಪಡಿಸುವವನಾಗಿ ಅವರ ಸಾರ್ವಜನಿಕ ವ್ಯಕ್ತಿತ್ವವನ್ನು ಮೀರಿ ಹೋಯಿತು. ಅವರ ಜೀವನದುದ್ದಕ್ಕೂ ವ್ಯಕ್ತಪಡಿಸಿದಂತೆ, "ಮಾನವ ಸಹೋದರತ್ವ ಮತ್ತು ದೇವರ ಪಿತೃತ್ವ" ಎಂಬ ಬ್ಯಾನರ್ ಅಡಿಯಲ್ಲಿ ಮಾನವೀಯತೆಯನ್ನು ಒಂದುಗೂಡಿಸುವುದು ಅವರ ನಿಜವಾದ ಉದ್ದೇಶವಾಗಿತ್ತು. ಬಾಬಾ ಅವರು ತಮ್ಮ ಪೂರ್ವಾಧಿಕಾರಿ ಭಗವಾನ್ ಶ್ರೀ ಶಿರಡಿ ಸಾಯಿಬಾಬಾ ಅವರ ಭಾವನೆಗಳನ್ನು ಪ್ರತಿಧ್ವನಿಸಿದರು, "ಎಂದಿಗೂ ಸಹಾಯ ಮಾಡಿ, ಎಂದಿಗೂ ನೋಯಿಸಬೇಡಿ" ಈ ಆಳವಾದ ಹೇಳಿಕೆಯು ಭೌತಿಕ ಆಸೆಗಳು ಅನೇಕರನ್ನು ಪ್ರೇರೇಪಿಸಿದರೆ, ಆಧ್ಯಾತ್ಮಿಕ ಜಾಗೃತಿ ಮತ್ತು ಸ್ವಯಂ ಸಾಕ್ಷಾತ್ಕಾರದ ಮೂಲಕ ಮಾತ್ರ ಮಾನವಕುಲವು ತನ್ನ ಮಿತಿಗಳನ್ನು ಮೀರಬಹುದು ಎಂಬ ಅಂಶವನ್ನು ಸೂಚಿಸುತ್ತದೆ.

ಎಜುಕೇರ್: ವಿಶ್ವದಾದ್ಯಂತ ಸಾವಿರಾರು ವಿದ್ಯಾರ್ಥಿಗಳ ಪರಿವರ್ತನೆ

ಬಾಬಾ ಅವರ ಪ್ರಭಾವವು ದೂರಗಾಮಿಯಾಗಿತ್ತು, ಮತ್ತು ಶಿಕ್ಷಣದ ಬಗ್ಗೆ ಅವರ ವಿಶಿಷ್ಟ ವಿಧಾನವನ್ನು ಒಳಗೊಂಡಿರುವ "ಎಜುಕೇರ್" ಎಂಬ ಪದಕ್ಕೆ ಅವರು ನೀಡಿದ ಒತ್ತುಗಿಂತ ಇದು ಬೇರೆಲ್ಲಿಯೂ ಹೆಚ್ಚು ಸ್ಪಷ್ಟವಾಗಿರಲಿಲ್ಲ. ಬಾಬಾ ಅವರ ಪ್ರಕಾರ, ಎಜುಕೇರ್ ಕೇವಲ ಶೈಕ್ಷಣಿಕ ಸಾಧನೆ ಅಥವಾ ಬೌದ್ಧಿಕ ಅನ್ವೇಷಣೆಯ ಬಗ್ಗೆ ಅಲ್ಲ, ಆದರೆ ಪ್ರತಿಯೊಬ್ಬ ವ್ಯಕ್ತಿಯಲ್ಲಿ ದೈವತ್ವದ ಅಂತರ್ಗತ ಮೌಲ್ಯಗಳನ್ನು ಹೊರತರುವುದು – ಭೌತಿಕ ಜಗತ್ತನ್ನು ಮೀರಿದ ಮತ್ತು ದೈವತ್ವದ ಕಡೆಗೆ ಸೂಚಿಸುವ ಮೌಲ್ಯಗಳಾಗಿವೆ.

ಇಲ್ಲಿಯವರೆಗೆ, 100,000 ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಶ್ರೀ ಸತ್ಯ ಸಾಯಿ ಉಚಿತ ಶಿಕ್ಷಣ ಸಂಸ್ಥೆಗಳಿಂದ ಪದವಿ ಪಡೆದಿದ್ದಾರೆ, ಶೈಕ್ಷಣಿಕ ಉತ್ಕೃಷ್ಟತೆ ಮತ್ತು ಮಾನವೀಯ ಮೌಲ್ಯಗಳ ಬಲವಾದ ಅಡಿಪಾಯವನ್ನು ಹೊಂದಿದ್ದಾರೆ ಮತ್ತು ನಿಸ್ವಾರ್ಥವಾಗಿ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾರೆ.

# ಪೌಷ್ಟಿಕಾಂಶ ಆಹಾರಗಳಲ್ಲಿ ಸಂಸ್ಕರಿಸಿದ ಸಕ್ಕರೆ ಬಳಸಬೇಡಿ: ಕೇಂದ್ರ ಸರ್ಕಾರ

ನವದೆಹಲಿ: ಪ್ರಮುಖ ಬೆಳವಣಿಗೆಯೊಂದರಲ್ಲಿ, ಮಕ್ಕಳು, ಗರ್ಭಿಣಿಯರು, ಎಳೆ ಮಕ್ಕಳಿಗೆ ಹಾಲುಣಿಸುವ ತಾಯಂದಿರು ಮತ್ತು ಹದಿಹರೆಯದ ಹೆಣ್ಣುಮಕ್ಕಳಿಗೆ ನೀಡಲಾಗುವ ಪೂರಕ ಪೌಷ್ಟಿಕಾಂಶ ಆಹಾರಗಳಲ್ಲಿ ಸಂಸ್ಕರಿಸಿದ ಸಕ್ಕರೆ, ಕೊಬ್ಬು, ಉಪ್ಪು ಮತ್ತು ಸಕ್ಕರೆ ಅಧಿಕವಾಗಿರುವ ಆಹಾರಗಳು, ಸಂರಕ್ಷಕಗಳು, ಬಣ್ಣಗಳು ಮತ್ತು ಸುವಾಸನೆಗಳನ್ನು ಬಳಸದಂತೆ ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಕ್ಕಳು, ಗರ್ಭಿಣಿಯರು, ಹಾಲುಣಿಸುವ ತಾಯಂದಿರು ಮತ್ತು ಬಾಲಕಿಯರಿಗೆ ನೀಡಲಾಗುವ ಟೇಕ್ ಹೋಮ್ ರೇಷನ್ ಮತ್ತು ಬಿಸಿ-ಬೇಯಿಸಿದ ಊಟ ಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸಕ್ಕರೆ, ಉಪ್ಪು ಮತ್ತು ಇತರ ವಸ್ತುಗಳನ್ನು ಒಳಗೊಂಡಿರುವುದನ್ನು ಕಂಡುಕೊಂಡ ನಂತರ ಈ ಸೂಚನೆ ನೀಡಿದೆ. ಮಿಷನ್ ಪೋಷನ್ 2:0 ಅಡಿಯಲ್ಲಿ ವಿವಿಧ ವರ್ಗದ ಫಲಾನುಭವಿಗಳಿಗೆ ಹೆಚ್ ಸಿಎಂ ಮತ್ತು ಟಿಹೆಚ್ ಆರ್ ನ್ನು ಒದಗಿಸುವಾಗ, ರಾಜ್ಯಗಳು ಸಂಸ್ಕರಿಸಿದ ಸಕ್ಕರೆಯನ್ನು ಬಳಸಬಾರದು, ಅಗತ್ಯವಿದ್ದರೆ ಸಿಹಿಗೊಳಿಸಲು ಬೆಲ್ಲವನ್ನು ಮಾತ್ರ ಬಳಸಬೇಕು ಎಂದು ಹೇಳಿದೆ.

ಅತಿಯಾದ ಕ್ಯಾಲೋರಿ ಸೇವನೆಯನ್ನು ತಪ್ಪಿಸಲು ಒಟ್ಟು ಶಕ್ತಿಯ ಶೇಕಡಾ 5ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೆಲ್ಲವನ್ನು ಸೇರಿಸಬೇಕು ಎಂದು ಡಬ್ಲ್ಯುಸಿಡಿ ಉಪ ಕಾರ್ಯದರ್ಶಿ ಜ್ಯೋತಿಕಾ ಅವರು ಹೊರಡಿಸಿದ ಸಲಹೆಯಲ್ಲಿ ತಿಳಿಸಲಾಗಿದೆ.

# ಹೃದಯ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿ

ಬೆಂಗಳೂರು: ಅಂತಿಮ ಹಂತದ ಹೃದಯ ವೈಫಲ್ಯದಿಂದ ಬಳಲುತ್ತಿದ್ದ ಹರಿಯಾಣದ 40 ವರ್ಷದ ನಿವಾಸಿಗೆ ಬೆಂಗಳೂರಿನ ಶೇಷಾದ್ರಿಪುರಂನ ಅಪೋಲೋ ಆಸ್ಪತ್ರೆಯಲ್ಲಿ ನಡೆಸಲಾದ ಸಂಕೀರ್ಣ ಹೃದಯ ಕಸಿ ಶಸ್ತ್ರಚಿಕಿತ್ಸೆಯ ಮೂಲಕ ಹೊಸ ಜೀವನಕ್ಕೆ ಹೊಸ ಉತ್ತುಂಗ ನೀಡಲಾಯಿತು. ಇಬ್ಬರು ಮಕ್ಕಳ ತಂದೆ ಮತ್ತು ಅವರ ಕುಟುಂಬಕ್ಕೆ ಏಕೈಕ ಜೀವನಾಧಾರವಾಗಿರುವ ರೋಗಿಗೆ ತೀವ್ರವಾದ ಬೈ-ವೆಂಟ್ರಿಕ್ಯುಲರ್ ಅಪಸಾಮಾನ್ಯ ಕ್ರಿಯೆಯೊಂದಿಗೆ ಡಿಲೇಟೆಡ್ ಕಾರ್ಡಿಯೊಮಯೋಪತಿ (ಡಿಸಿಎಂ) ಇರುವುದು ಪತ್ತೆಯಾಯಿತು, ಇದು ಹೃದಯದ ಎಡ ಮತ್ತು



ಬಲ ಪಂಪಿಂಗ್ ಕೋಣೆಗಳು ಸರಿಯಾಗಿ ಕಾರ್ಯನಿರ್ವಹಿಸಲು ವಿಫಲವಾಗುವ ಸ್ಥಿತಿಯಾಗಿದೆ. ಅವರ ಸ್ಥಿತಿಗೆ ಪುನರಾವರ್ತಿತ ಹೃದಯ ವೈಫಲ್ಯಕ್ಕೆ ಆಗಾಗ್ಗೆ ಆಸ್ಪತ್ರೆಗೆ ದಾಖಲಾಗಬೇಕಾಗಿತ್ತು, ಇದು ಅವರ ಜೀವನದ ಗುಣಮಟ್ಟದಲ್ಲಿ ತ್ವರಿತ ಕುಸಿತಕ್ಕೆ ಕಾರಣವಾಯಿತು. ವ್ಯಾಪಕ ಚಿಕಿತ್ಸೆಗಳು ಮತ್ತು ಹದಗೆಟ್ಟ ರೋಗಲಕ್ಷಣಗಳ ನಂತರ, ಅವರು ವಿಶೇಷ ವೈದ್ಯಕೀಯ ತಂಡದ ಬೆಂಬಲದೊಂದಿಗೆ ಬೆಂಗಳೂರಿಗೆ ವಿಮಾನದಲ್ಲಿ ಬಂದು ಅಪೋಲೋ ಶೇಷಾದ್ರಿಪುರಂನ ಹೃದಯ ಮತ್ತು ಶ್ವಾಸಕೋಶದ ಕಾರ್ಯಕ್ರಮ ಮತ್ತು ಶಸ್ತ್ರಚಿಕಿತ್ಸಾ ನಿರ್ದೇಶಕ ಡಾ. ಕುಮುದ್ ಧಿತಲ್ ಅವರಿಂದ ಹೃದಯ ಕಸಿ ಮಾಡಿಸಿಕೊಂಡರು.

ಆಸ್ಪತ್ರೆಯಲ್ಲಿ ಹಾಜರಾದಾಗ ರೋಗಿಯ ಸ್ಥಿತಿಯ ಬಗ್ಗೆ ಪ್ರತಿಕ್ರಿಯಿಸಿದ ಡಾ. ಕುಮುದ್ ಧಿತಲ್,"ಅಪೋಲೋ ಆಸ್ಪತ್ರೆಗಳಿಗೆ ಆಗಮಿಸಿದಾಗ, ಅವರಿಗೆ ಮುಂದುವರಿದ ಹೃದಯ ವೈಫಲ್ಯದ ತೀವ್ರ ಲಕ್ಷಣಗಳು ಕಂಡುಬಂದವು. ಅವರ ಸ್ಥಿತಿಯನ್ನು ಸ್ಥಿರಗೊಳಿಸಲು ಇಂಟ್ರಾ-ಅಯೋರ್ಟಿಕ್ ಬಲೂನ್ ಪಂಪ್ ಅನ್ನು ಸೇರಿಸುವುದು ಸೇರಿದಂತೆ ಅವರಿಗೆ ತಕ್ಷಣದ ಹಸ್ತಕ್ಷೇಪದ ಅಗತ್ಯವಿತ್ತು. ಅವರು ಕಸಿ ಮಾಡಲು ಯೋಗ್ಯರೆಂದು ಪರಿಗಣಿಸುವ ಮೊದಲು 20 ಲೀಟರ್‌ಗಿಂತಲೂ ಹೆಚ್ಚು ಹೆಚ್ಚುವರಿ ದ್ರವವನ್ನು ತೆಗೆದುಹಾಕಲು ಆಕ್ರಮಣಕಾರಿ ದ್ರವ ನಿರ್ವಹಣೆಯನ್ನು ನಡೆಸಿ ಶಸ್ತ್ರ ಚಿಕಿತ್ಸೆ ಯಶಸ್ವಿ ಮಾಡಿದ್ದೇವೆ ಎಂದರು.

# 'ಪ್ಯೂರ್ ಗ್ಲೋ' ಬಿಡುಗಡೆ

ಬೆಂಗಳೂರು: ಇಮಾಮಿ ಲಿಮಿಟೆಡ್, ಇಮಾಮಿ ಗ್ರೂಪ್ ಒಂದು ಪ್ರಮುಖ ಪರ್ಸನಲ್ ಕೇರ್ ಹಾಗೂ ಹೆಲ್ತ್ ಕೇರ್ ಕಂಪನಿಯು ಇಮಾಮಿ ಪ್ಯೂರ್ ಗ್ಲೋ ಪ್ರಸ್ತುತಪಡಿಸುತ್ತಾ 4,000 ಕೋಟಿಗಿಂತ ಅಧಿಕವಾದ ಬ್ರೈಟನಿಂಗ್ ಕ್ರೀಮ್ ಕ್ಯಾಟಗರಿಯಲ್ಲಿ ತಮ್ಮ ಪ್ರವೇಶದ ಶುಭಾರಂಭವನ್ನು ಮಾಡಿದ್ದಾರೆ. ಇದು ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ನೀಡಲು ತಯಾರಾದ ಒಂದು ಸಂಪೂರ್ಣವಾದ ಸ್ಕಿನ್ ಕೇರ್ ಸಲ್ಯೂಷನ್ ಆಗಿದೆ ಹಾಗೂ ಇದರಿಂದ ಗ್ಲೋ ಸೆಗ್ಮೆಂಟ್ ಗೊಂದು ಹೊಸ ಮನ್ನಣೆ ದೊರಕಲಿದೆ. ಬ್ರ್ಯಾಂಡ್ ಅನ್ನು ಮತ್ತಷ್ಟು ಆಕರ್ಷಕವಾಗಿ ಪ್ರಸ್ತುತಪಡಿಸಲು ಹಾಗೂ ದೇಶದಾದ್ಯಂತದಲ್ಲಿ ಗ್ರಾಹಕರವರೆಗೆ ತಲುಪಲು, ಇಮಾಮಿಯು ಪ್ಯೂರ್ ಗ್ಲೋನ ಬ್ರ್ಯಾಂಡ್ ಅಂಬಾಸಿಡರ್ ಆಗಿ ರಾಶಿ ಖನ್ನಾರನ್ನು ಶಾಮೀಲು ಮಾಡಲಾಗಿದೆ. ಪ್ರಾದೇಶಿಕ ಹಾಗೂ ಹಿಂದಿ ಫಿಲ್ಮಿನ ಪ್ರಸಿದ್ಧ ಮಿನುಗು ತಾರೆ, ರಾಶಿ ಖನ್ನಾರ ಉಪಸ್ಥಿತಿಯು ಈ ಬ್ರ್ಯಾಂಡ್ ಗೆ ಮತ್ತಷ್ಟು ಮೆರುಗು ಹಾಗೂ ವಿಶೇಷ ಮಾಡಿ ಇದರಲ್ಲಿ ಆತ್ಮವಿಶ್ವಾಸವನ್ನು ತುಂಬುತ್ತದೆ. ಆದ್ದರಿಂದ ನವಯುಗದ ಸ್ಕಿನ್




ಕೇರ್ ಪರಿಹಾರಕ್ಕಾಗಿ ಇದು ಪರಿಪೂರ್ಣವಾದ ಉಪಯುಕ್ತ ಆಯ್ಕೆಯಾಗಿದೆ. ಅತ್ಯಾಧುನಿಕ ತಂತ್ರಜ್ಞಾನದ ಬಳಕೆಯಿಂದ ಇಮಾಮಿ ಪ್ಯೂರ್ ಗ್ಲೋ ತಯಾರು ಮಾಡಲಾಗಿದೆ. ಬಜಾರಿನಲ್ಲಿ ವರ್ತಮಾನದಲ್ಲಿ ಪ್ರಸ್ತುತವಿರುವ ಬ್ರೈಟನಿಂಗ್ ಕ್ರೀಮ್ ನೊಂದಿಗೆ ಮಹಿಳೆಯರು ಎದುರಿಸುತ್ತಿರುವ ಯಾವ್ಯಾವ ದೊಡ್ಡ ಸವಾಲುಗಳವುದೆಲ್ಲದರ ಪರಿಹಾರಕ್ಕಾಗಿ ಇದನ್ನು ತಯಾರಿಸಲಾಗಿದೆ. ಇದರ ಪರಿಹಾರದಲ್ಲಿ ಶಾಮೀಲಾಗಿದೆ – ಮುಖದಲ್ಲಿ ಕ್ರೀಮ್ ನ ಬಿಳಿಯ ಕಲೆ, ಮಾಯಿಶ್ಚರೈಝೇಷನ್ ಅಭಾವ, ಕನಿಷ್ಠ ಪ್ರಭಾವ ಅಥವಾ ಕಾಲಾನಂತರ ಫಲಿತಾಂಶವು ಗೋಚರಣೆಯಿಲ್ಲ. ಇಮಾಮಿ ಸರ್ವದಾ ಪರ್ಸನಲ್ ಕೇರ್ ಸೆಗ್ಮೆಂಟ್ ನಲ್ಲಿ ಹೊಸ ಆವಿಷ್ಕಾರಕ್ಕಾಗಿ ವಿಖ್ಯಾತವಾಗಿದೆ. ಈ ಬಾರಿ ನವಯುಗದ ಈ ಬ್ರೈಟನಿಂಗ್ ಕ್ರೀಮ್ ನಲ್ಲಿ ವಿಜ್ಞಾನ ಹಾಗೂ ಪ್ರಕೃತಿಯ ತಾಕತ್ತನ್ನು ಒಟ್ಟಿಗೇ ಬಳಸಲಾಗಿದೆ. ಇದರೊಂದಿಗೆ ಜಪಾನಿನ ಸಕೂರ ಹೂವಿನ ಗುಣ ಹಾಗೂ ಕ್ಲಿನಿಕಲೀ ಪ್ರಮಾಣೀಕರಿಸಲಾದ ನಿಯಾಸಿನಮೈಡ್ ಕೂಡ ಶಾಮೀಲಾಗಿದೆ. ಈ ವಿಶಿಷ್ಟವಾದ ಫಾರ್ಮುಲಾ ಕೇವಲ 3 ವಾರಗಳಲ್ಲಿ ಕಣ್ಣಿಗೆ ಗೋಚರವಾಗುವ ಹೊಳಪು, 50% ಅಧಿಕ ಮಾಯಿಶ್ಚರೈಝೇಷನ್ ನೀಡುತ್ತದೆ ಹಾಗೂ ಒಂದು ವಾರದಷ್ಟು ಕಡಿಮೇ ಸಮಯದಲ್ಲಿ ಕಪ್ಪು ಕಲೆಗಳನ್ನು ಕಡಿಮೆಗೊಳಿಸಲು ಸಹಾಯ ಮಾಡುತ್ತದೆ.

# ಶೇ.99.90 ಅಂಕ ಗಳಿಸಿದ ಅನಿಕೇತ್ ಡಿ.ಶೆಟ್ಟಿ, ವಿಠಲ್‌ದಾಸ್.ಎ




ಬೆಂಗಳೂರು: ಆಕಾಶ್ ಎಜುಕೇಷನಲ್ ಸರ್ವಿಸಸ್ ಲಿಮಿಟೆಡ್ (ಎಇಎಸ್.ಎಲ್), ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಮುಖ್ಯ ಪರೀಕ್ಷೆ 2025 (ಸೆಷನ್– 2) ನಲ್ಲಿ ತಮ್ಮ ವಿದ್ಯಾರ್ಥಿಗಳ ಅಸಾಧಾರಣ ಸಾಧನೆಯನ್ನು ಹೆಮ್ಮೆಯಿಂದ ಘೋಷಿಸಿದೆ. ಮಂಗಳೂರಿನ ಅನಿಕೇತ್ ಡಿ ಶೆಟ್ಟಿ ಮತ್ತು ವಿಟ್ಟಲ್ ದಾಸ್.ಎ ಪರೀಕ್ಷೆಯ ಎರಡನೇ ಅವಧಿಯಲ್ಲಿ 99.90 ಶೇಕಡಾ ಅಂಕಗಳನ್ನು ಗಳಿಸಿದ್ದಾರೆ.

ಈ ಫಲಿತಾಂಶಗಳು ಭಾರತದ ಅತ್ಯಂತ ಸವಾಲಿನ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳ ಸಮರ್ಪಣೆ ಮತ್ತು ಶೈಕ್ಷಣಿಕ ಶ್ರೇಷ್ಠತೆಯನ್ನು ಎತ್ತಿ ತೋರಿಸುತ್ತವೆ. ಈ ವರ್ಷ ನಿಗದಿಯಾಗಿದ್ದ ಎರಡನೇ ಮತ್ತು ಅಂತಿಮ ಜೆಇಇ ಸೆಶನ್ ವೇಳಾಪಟ್ಟಿ ಅಂತಿಮವಾಗುತ್ತಿದ್ದಂತೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಫಲಿತಾಂಶಗಳನ್ನು ಪ್ರಕಟಿಸಿದೆ.

ಆಕಾಶ್ ಎಜುಕೇಷನಲ್ ಸರ್ವೀಸಸ್ ಲಿಮಿಟೆಡ್‌ನ ಮುಖ್ಯ ಶೈಕ್ಷಣಿಕ ಮತ್ತು ವ್ಯವಹಾರ ಮುಖ್ಯಸ್ಥ ಧೀರಜ್ ಕುಮಾರ್ ಮಿಶ್ರಾ ಮಾತನಾಡಿ, ಜೆಇಇ ಮೇನ್ 2025 ರಲ್ಲಿ ನಮ್ಮ ವಿದ್ಯಾರ್ಥಿಗಳ ಸಾಧನೆಯ ಬಗ್ಗೆ ನಮಗೆ ಹೆಮ್ಮೆ ಇದೆ. ಅವರ ಕಠಿಣ ಪರಿಶ್ರಮ ಮತ್ತು ದೃಢನಿಶ್ಚಯ, ಸರಿಯಾದ ತರಬೇತಿಯೊಂದಿಗೆ ಸೇರಿ ಈ ಅತ್ಯುತ್ತಮ ಫಲಿತಾಂಶಗಳಿಗೆ ಕಾರಣವಾಗಿದೆ. ನಮ್ಮ ಎಲ್ಲಾ ಯಶಸ್ವಿ ವಿದ್ಯಾರ್ಥಿಗಳಿಗೆ ಪ್ರಯಾಣದ ಮುಂದಿನ ಹಂತಗಳಿಗೆ ಶುಭ ಹಾರೈಸುತ್ತೇವೆ ಎಂದರು.

ಉನ್ನತ ಮಟ್ಟದ ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳು (ಎಇಇ) ಹಾಗೂ ಓಖಖಇ ಮತ್ತು ಒಲಿಂಪಿಯಾಡಗಳಂತಹ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡುವ ಗುರಿ ಯನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಸಂಪೂರ್ಣ ಮತ್ತು ಪರಿಣಾಮಕಾರಿ ತಯಾರಿ ಕಾರ್ಯಕ್ರಮ ಗಳನ್ನು ನೀಡುವುದಕ್ಕೆ ಗುರುತಿಸಲ್ಪಟ್ಟಿದೆ.

ಈ ವೇಳೆ ಬ್ರಾಂಚ್ ಹೆಡ್ ಸೂರಜ್ ಪ್ರಭು, ಮಂಗಳೂರು – ಉಡುಪಿ ಸಹಾಯಕ ನಿರ್ದೇಶಕ ಶ್ಯಾಮ್ ಪ್ರಸಾದ್ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

# ಕೆಟಿಎಂನಿಂದ ಕೆಟಿಎಂ 390 ಎಂಡುರೊ ಆರ್. ಬಿಡುಗಡೆ

ಬೆಂಗಳೂರು: ತನ್ನ ಎಂಡುರೊ ಆರ್. ಹೆಸರಿಗೆ ತಕ್ಕಂತಿರುವ ಕಠಿಣ, ವಿಶ್ವಾಸಾರ್ಹ ಕೆಟಿಎಂ 390 ಎಂಡುರೊ ಆರ್. ಕೆಸರಿನ ರಾಡಿಯಿರಲಿ, ನಗರದ ದಟ್ಟಣೆಯಿರಲಿ ಅಥವಾ ಪರ್ವತಗಳಿರಲಿ ಎಲ್ಲ ಕಡೆ ಉತ್ಸಾಹದಲ್ಲಿ ಮುನ್ನುಗ್ಗುತ್ತದೆ.

ಕೆಟಿಎಂ 390 ಎಂಡುರೊ ಆರ್. ಭಾರತೀಯ ಮಾರುಕಟ್ಟೆಗೆ ಎಂಡುರೊ ವರ್ಗವನ್ನು ಕೆಟಿಎಂ ಕಠಿಣತೆಯೊಂದಿಗೆ ಪರಿಚಯಿಸಿದೆ. ದೀರ್ಘಪ್ರಯಾಣದ ಸಸ್ಪೆನ್ಷನ್, 21/18–ಇಂಚು ಸ್ಪೋಕ್ ವ್ಹೀಲ್ಸ್ ಹೊಂದಿರುವ ಹೊಸ ಮಿನಿಮಲ್ ಟಿ.ಎಫ್.ಟಿ. ಡ್ಯಾಶ್ ಬೋರ್ಡ್, ರೈಡ್ ಮೋಡ್ಸ್ ಮತ್ತು ಬದಲಿಸಬಲ್ಲದು. ಎಬಿಎಸ್ ಹೊಂದಿದ್ದು ಇದು ನಿಜ ಜಗತ್ತಿನ,



ಡ್ಯುಯಲ್ ಸ್ಪೋರ್ಟ್ ಸಾಮರ್ಥ್ಯವನ್ನು ನೀಡುತ್ತಿದ್ದು ಈ ವರ್ಗದಲ್ಲಿ ಮಹತ್ವರ ಮೈಲಿಗಲ್ಲು ಸ್ಥಾಪಿಸಿದೆ.

ಬಾಡಿವರ್ಕ್ ಮತ್ತು ಗ್ರಾಫಿಕ್ಸ್

ಕೆಟಿಎಂ 390 ಎಂಡುರೊ ಆರ್. ತೆಳು ಮತ್ತು ಕಿರಿದಾದ ನೋಟ ಹೊಂದಿದ್ದು ಅದರಲ್ಲಿ ತೆಳುವಾದ 9ಲೀಟರ್ ಲೋಹದ ಇಂಧನದ ಟ್ಯಾಂಕ್ ಮತ್ತು ಸಣ್ಣ, ಆಫ್-ರೋಡ್ ಕೇಂದ್ರಿತ ಫೇರಿಂಗ್ಸ್ ಹೊಂದಿದೆ. ಇವು ಒಟ್ಟಾರೆ ಅಗಲ ಕಡಿಮೆ ಮಾಡುವುದಲ್ಲದೆ ಟ್ಯಾಂಕ್ ಗೆ ರಕ್ಷಣೆ ನೀಡುತ್ತವೆ ಅಲ್ಲದೆ ಪೆಗ್ಸ್ ಮೇಲೆ ನಿಲ್ಲುವಾಗ ಚಾಲಕರಿಗೆ ಅಗತ್ಯವಾದ ದಕ್ಷತೆಯನ್ನು ಗರಿಷ್ಠಗೊಳಿಸುತ್ತದೆ.

ಸಿಟಿಜಿ ಮತ್ತು ಗ್ರಾಫಿಕ್ಸ್

ಕೆಟಿಎಂ390 ಎಂಡುರೊ ಆರ್. ಸಂಪೂರ್ಣ ಹೊಸ, ಆಫ್-ರೋಡ್ ಸ್ಫೂರ್ತಿಯ ಸ್ಟೈಲಿಂಗ್ ಹೊಂದಿದ್ದು ಸ್ಪಷ್ಟ ಹಾಗೂ ನಿರ್ದಿಷ್ಟ ಕೆಟಿಎಂ ವಿನ್ಯಾಸವು ಸದೃಢ ಇನ್-ಮೋಲ್ಡ್ ಗ್ರಾಫಿಕ್ಸ್ ಹೊಂದಿದೆ.

# 14 ನೌಕರರಿಗೆ ಪಿಂಚಣಿ ನೀಡುವಂತೆ ಹೈ ಆದೇಶ

ಬೆಂಗಳೂರು: ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ದಿನಗೂಲಿ ಆಧಾರದಲ್ಲಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ 14 ನೌಕರರಿಗೆ ಪಿಂಚಣಿ ನೀಡದ ಸರ್ಕಾರದ ವಿರುದ್ಧ ಈಚೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಕರ್ನಾಟಕ ಹೈಕೋರ್ಟ್, ನೌಕರರಿಗೆ ಮೂರು ತಿಂಗಳಲ್ಲಿ ಪಿಂಚಣಿ ನೀಡುವಂತೆ ತಾಕೀತು ಮಾಡಿದೆ.

ಚಿಕ್ಕಮಗಳೂರು ಜಿಲ್ಲೆಯ ಕಾಳಪ್ಪ ಸೇರಿದಂತೆ 14 ನೌಕರರಿಗೆ ಪಿಂಚಣಿ ನೀಡಲು ಕರ್ನಾಟಕ ಆಡಳಿತಾತ್ಮಕ ನ್ಯಾಯಾಧಿಕರಣ (ಕೆಎಟಿ) ಹೊರಡಿಸಿದ್ದ ಆದೇಶ ರದ್ದು ಕೋರಿ ರಾಜ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಆಯುಕ್ತರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಮತ್ತು ರಾಮಚಂದ್ರ ಹುದ್ದಾರ್ ಅವರ ನೇತೃತ್ವದ ವಿಭಾಗೀಯ ಪೀಠ ವಜಾಗೊಳಿಸಿದೆ.

"ಪಿಂಚಣಿ ಸೌಲಭ್ಯ ಪಡೆದಿರುವ ಸರ್ಕಾರದ ಇತರೆ ನೌಕರರಂತೆಯೇ ಕಾಳಪ್ಪ ಮತ್ತಿತರ 13 ನೌಕರರು 30 ವರ್ಷ ಸೇವೆ ಸಲ್ಲಿಸಿದ್ದಾರೆ. ಇತರೆ ಉದ್ಯೋಗಿಗಳಿಗೆ



ಕಲ್ಪಿಸಿರುವ ಪಿಂಚಣಿ ಸೌಲಭ್ಯವನ್ನು ಕಾಳಪ್ಪ ಮತ್ತಿತರರಿಗೆ ನಿರಾಕರಿಸುವುದು ತಾರತಮ್ಯ. ಸಂವಿಧಾನದ 14 (ಸಮಾನತೆ) ಮತ್ತು 16ನೇ ವಿಧಿ (ಸಾರ್ವಜನಿಕ ಉದ್ಯೋಗದಲ್ಲಿ ಸಮಾವನ ಅವಕಾಶ) ಅನ್ವಯ ರಾಜ್ಯ ಸರ್ಕಾರವು ಯಾವುದೇ ವ್ಯಕ್ತಿ ಅಥವಾ ಸಮೂಹಕ್ಕೆ ತಾರತಮ್ಯ ಮಾಡುವಂತಿಲ್ಲ. ಸಾರ್ವಜನಿಕ ಉದ್ಯೋಗದಲ್ಲಿ ಸಮಾನತೆ ಹಾಗೂ ಸಮಾನ ಅವಕಾಶ ಕಾಯ್ದುಕೊಳ್ಳಬೇಕಾಗುತ್ತದೆ. ಸರ್ಕಾರದ ಇತರೆ ನೌಕರರಂತೆ ಕಾಳಪ್ಪ ಮತ್ತಿತರರನ್ನು ಪರಿಗಣಿಸಬೇಕಿದೆ.

ಅವರಿಗೆ ಮೂರು ತಿಂಗಳಲ್ಲಿ ಪಿಂಚಣಿ ಸೌಲಭ್ಯ ಕಲ್ಪಿಸಬೇಕು ಹಾಗೂ ಹಿಂಬಾಕಿ ಪಾವತಿಸಬೇಕು. ಕಾಳಪ್ಪ ಅವರ ಮಾದರಿಯಲ್ಲಿ ನಿಯೋಜಿಸಲಾದ ಇತರೆ ನೌಕರರಿಗೂ ಪಿಂಚಣಿ ಸೌಲಭ್ಯ ಕೈತಪ್ಪದಂತೆ ನೋಡಿಕೊಳ್ಳಬೇಕು" ಎಂದು ನಿರ್ದೇಶಿಸಿದೆ. ಆದೇಶದ ಅನುಪಾಲನಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು ಎಂದು ನಿರ್ದೇಶಿಸಿದೆ.

ಆಯುಕ್ತರ ಪರ ಸರ್ಕಾರಿ ವಕೀಲರು ವಾದಿಸಿ, 1996ರ ಮೇ 12ರಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶದನ್ವಯ ಕಾಳಪ್ಪ ಮತ್ತಿತರಿಗೆ ಉದ್ಯೋಗ ನೀಡಲಾಗಿದೆ. ಅವರ ಉದ್ಯೋಗವು ಕೇವಲ ಸರ್ಕಾರ ಆದೇಶದಿಂದ ನಿಯಂತ್ರಲ್ಪಟ್ಟಿರುತ್ತದೆ ಹೊರತು ನೇಮಕಾತಿ ನಿಯಮಗಳಿಂದಲ್ಲ. ಈ ನೌಕರರು ಪಿಂಚಣಿಯೇತರ ಉದ್ಯೋಗದ ವಿಭಾಗ ವ್ಯಾಪ್ತಿಗೆ ಬರುತ್ತಾರೆ. ಹೀಗಾಗಿ, ಅವರು ಪಿಂಚಣಿ ಸೌಲಭ್ಯ ಹಕ್ಕುಸಾಧನೆ ಮಾಡಲಾಗದು. ನೌಕರರು ಗ್ರಾಚುಟಿ ಸೌಲಭ್ಯ ಪಡೆಯಲಷ್ಟೇ ಅರ್ಹರು ಎಂದು ವಾದಿಸಿದ್ದರು.

# ಬ್ರಾಹ್ಮಣರು ಸಾಫ್ಟ್ ಟಾರ್ಗೆಟ್; ಪ್ರತಾಪ್ ಸಿಂಹ ವಾಗ್ದಾಳಿ

ಬೆಂಗಳೂರು: ಬ್ರಾಹ್ಮಣರು ಈ ಸರ್ಕಾರದಲ್ಲಿ ಸಾಫ್ಟ್ ಟಾರ್ಗೆಟ್ ಆಗಿದ್ದಾರೆ ಎಂಬ ಗಂಭೀರ ಆರೋಪವನ್ನು ಬಿಜೆಪಿ ಮುಖಂಡ ಮತ್ತು ಮಾಜಿ ಸಂಸದ ಪ್ರತಾಪ್ ಸಿಂಹ ಇಂದು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಬಿಜೆಪಿಯ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದೂಗಳನ್ನು ವಿಭಜಿಸಲು ಹಿಂದಿನಿಂದಲೇ ತಂತ್ರ ರೂಪಿಸುತ್ತಿದ್ದಾರೆ ಎಂದು ಆರೋಪಿಸಿದರು.



"ಬ್ರಾಹ್ಮಣರ ಸಂಖ್ಯೆ ಈ ರಾಜ್ಯದಲ್ಲಿ ಕಡಿಮೆ. ಅವರು ಏನೇ ಮಾಡಿದರೂ ಪ್ರಬಲ ಪ್ರತಿರೋಧ ಇಲ್ಲ ಎಂದು ಭಾವನೆ ಪೋಷಿಸುತ್ತಿರುವವರು ಸಿದ್ದರಾಮಯ್ಯ," ಎಂದವರು ದೂರಿದರು. ಉಡುಪಿಯಲ್ಲಿ ನಡೆದ ಹಿಜಾಬ್ ವಿವಾದದ ಸಂದರ್ಭದಲ್ಲಿ ಸಿದ್ದರಾಮಯ್ಯ ಮುಂಚೂಣಿಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದನ್ನು ಉಲ್ಲೇಖಿಸಿ, "ಆಗ ಎತ್ತಂಗಟ್ಟಿದ ಧ್ವನಿ ಇಂದೆಲ್ಲಿದೆ? ಈಗ ಏಕೆ ಜನಿವಾರ ಪ್ರಕರಣದಲ್ಲಿ ಅವರು ಸಂಪೂರ್ಣ ಮೌನ ವಹಿಸಿದ್ದಾರೆ?" ಎಂದು ಪ್ರಶ್ನಿಸಿದರು.

ಜನಿವಾರ ಪ್ರಕರಣ ಹಿಂದೂ ಧರ್ಮದ ಮೇಲೆ ದಾಳಿ ಎಂಬ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಪ್ರತಾಪ್ ಸಿಂಹ, "ಇದು ಏಕಾಂಗಿಯಾಗಿ ಬ್ರಾಹ್ಮಣರ ವಿರುದ್ಧವಲ್ಲ, ಇಡೀ ಹಿಂದೂ ಧರ್ಮದ ಆಚರಣೆಗಳ ವಿರುದ್ಧವಾಗಿರುವ ಕ್ರಮ. ಜನಿವಾರವನ್ನೇ ಸಮಸ್ಯೆ ಎಂದು ಎಣಿಸಿ ಅದನ್ನು ತೆಗೆಸುವುದು ದುರ್ಘಟನೆ," ಎಂದು ಹೇಳಿದರು.

ಜಾತಿ ಜನಗಣತಿ ವಿಚಾರಕ್ಕೂ ಅವರು ಸ್ಪಷ್ಟ ಪ್ರತಿಕ್ರಿಯೆ ನೀಡುತ್ತಾ, "ಬ್ರಾಹ್ಮಣರ ಸಂಖ್ಯೆ ಕೃತಕವಾಗಿ ಕಡಿಮೆ ತೋರಿಸಲಾಗುತ್ತಿದೆ. ಒಕ್ಕಲಿಗರು, ಲಿಂಗಾಯತರು ತಮ್ಮ ಜನಸಂಖ್ಯೆ ಕಡಿಮೆಯಾದ ಬಗ್ಗೆ ಆತಂಕಗೊಂಡಿದ್ದಾರೆ. ದಲಿತ ನಾಯಕರು ಅಳವಡಿಕೆಗೆ ಹೆಮ್ಮೆ ಪಡುತ್ತಿದ್ದಾರೆ. ಆದರೆ ಇವೆಲ್ಲಾ ಹೀನಪಂಥಿಯ ರಾಜಕೀಯ ತಂತ್ರದ ಭಾಗ," ಎಂದು ಕಿಡಿಕಾರಿದರು.

"ಸಿದ್ದರಾಮಯ್ಯ ಅವರು ಅಹಿಂದ ಧೋರಣೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ವಿಭಜನೆ ಮಾಡುತ್ತಿದ್ದಾರೆ. ಜಾತಿ ಹೆಸರಿನಲ್ಲಿ ಮತಗಳನ್ನು ಒಡೆದು, ತಮ್ಮ ಸಿಂಹಾಸನ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಹಿಂದೂ ಸಮಾಜವೇ ಈ ಷಡ್ಯಂತ್ರವನ್ನು ಅರಿಯಬೇಕು," ಎಂದು ಪ್ರತಾಪ್ ಸಿಂಹ ಅವರು ಮನವಿ ಮಾಡಿದರು.

ಹಿಂದೂ ಧರ್ಮದ ಎಲ್ಲ ಸಮುದಾಯಗಳು ಈ ಘಟನೆಗೆ ಒಗ್ಗಟ್ಟಾಗಿ ಪ್ರತಿಕ್ರಿಯಿಸಬೇಕು ಎಂಬುದರತ್ತ ಗಮನ ಸೆಳೆದ ಅವರು, "ಇನ್ನು ಮುಂದಾದರೂ ನಾವೆಲ್ಲರೂ ಹಿಂದು ಎಂಬ ಐಕ್ಯತೆಯ ಮೇಲೆ ಸವಾರಿ ಮಾಡೋಣ, ಜಾತಿ ಹೆಸರುಗಳಿಂದ ಬದಿಯಾಗಿ ಧರ್ಮದ ನಾಮದಲ್ಲಿ ಸದೃಢತೆ ತರುವ ಸಮಯ ಬಂದಿದೆ" ಎಂದು ಒತ್ತಾಯಿಸಿದರು.

# ಇಡಿಐಐನ 43ನೇ ಸಂಸ್ಥಾಪನಾ ದಿನಾಚರಣೆ

ಬೆಂಗಳೂರು: ಎಂಟರ್‌ಪ್ರಿನ್ಯೂರ್‌ಶಿಪ್ ಡೆವಲಪ್ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ ಏಪ್ರಿಲ್ 20, 2025ರಂದು ತನ್ನ 43ನೇ ಸಂಸ್ಥಾಪನಾ ದಿನವನ್ನು ಸಂಭ್ರಮಿಸಿತು.

ಗೋವಾ ಮುಖ್ಯಮಂತ್ರಿ ಡಾ.ಪ್ರಮೋದ್ ಸಾವಂತ್ ಸಭೆಯನ್ನು ವರ್ಚುಯಲ್ ರೂಪದಲ್ಲಿ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು. ಮುಖ್ಯ ಅತಿಥಿ ರಸ್ನಾ ಗ್ರೂಪ್ ಅಧ್ಯಕ್ಷ ಮತ್ತು ದಕ್ಷಿಣ ಕೊರಿಯಾದ ಗೌರವ ರಾಯಭಾರಿ (ಗುಜರಾತ್) ಡಾ.ಪಿರುಝ್ ಖಂಬಟ್ಟ; ಗೌರವ ಅತಿಥಿ ಕೈಗಾರಿಕಾ ಕಾರ್ಯದರ್ಶಿ ಶ್ರೀ ಸುನೀಲ್ ಅಂಚಿಪಾಕಾ; ಗೋವಾದ ಇಡಿಸಿ ಲಿಮಿಟೆಡ್ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್. ಪೈ ಅಂಗ್ಲೆ; ಐಡಿಬಿಐ ಬ್ಯಾಂಕ್ ಲಿಮಿಟೆಡ್ ಚೀಫ್ ಜನರಲ್ ಮ್ಯಾನೇಜರ್ ಮತ್ತು ಅಹಮದಾಬಾದ್ ಝೋನಲ್ ಹೆಡ್(ಮತ್ತು ಆಡಳಿತ ಮಂಡಳಿ ಸದಸ್ಯರು, ಇಡಿಐಐ) ಶ್ರೀ ದಿನೇಶ್ ಸಿಂಗ್ ರಾವತ್; ಇಡಿಐಐ ಡೈರೆಕ್ಟರ್ ಜನರಲ್ ಡಾ.ಸುನಿಲ್ ಶುಕ್ಲಾ ಉಪಸ್ಥಿತರಿದ್ದರು.

ಸರ್ಕಾರ, ಕಾರ್ಪೊರೇಟ್ ಗಳು, ಕೈಗಾರಿಕಾ ಸಂಘಟನೆಗಳು ಮತ್ತು ಶೈಕ್ಷಣಿಕ ವಲಯದ ಗಣ್ಯರು ಕೂಡಾ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅದು ಹೇಗೆ ಉದ್ಯಮಶೀಲತೆ, ಸ್ಟಾರ್ಟಪ್ ಗಳು ಮತ್ತು ಆವಿಷ್ಕಾರಗಳು ದೇಶದ ಸಾಮಾಜಿಕ-ಆರ್ಥಿಕ ಪ್ರಗತಿಗೆ ಹೇಗೆ ಪರಿಣಾಮ ಬೀರುತ್ತವೆ ಎನ್ನುವುದಕ್ಕೆ ಆದ್ಯತೆ ನೀಡಿದರು.

ವರ್ಚುಯಲ್ ರೂಪದಲ್ಲಿ ಸಭೆಯನ್ನು ಕುರಿತು ಮಾತನಾಡಿದ ಡಾ. ಪ್ರಮೋದ್ ಸಾವಂತ್ ಅವರು, ಗುಜರಾತ್ ಹೊಂದಿರುವ ತನ್ನ ವಿಶಿಷ್ಟ ಪ್ರಗತಿಯ ಮಾದರಿಗೆ ಮತ್ತು ಇಡಿಐಐ ದೇಶದಲ್ಲಿ ಹಾಗೂ ಹೊರಗಡೆ ಉದ್ಯಮಶೀಲತೆ ಉತ್ತೇಜಿಸುವುದಕ್ಕಾಗಿ ಅಭಿನಂದಿಸಿದರು. ಮಾನ್ಯ ಮುಖ್ಯಮಂತ್ರಿಗಳು,



"ಇಂದು ಭಾರತವು ಮಾನ್ಯ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಜಿ ಅವರ ನೇತೃತ್ವದಲ್ಲಿ ಅತ್ಯಂತ ಮುಂಚೂಣಿಯ ಸ್ಟಾರ್ಟಪ್ ದೇಶವಾಗುವ ದಾರಿಯಲ್ಲಿ ವೇಗವಾಗಿ ಮುನ್ನುಗ್ಗುತ್ತಿದೆ ಮತ್ತು ಇದಕ್ಕೆ ಇಡಿಐಐ ಗಮನಾರ್ಹವಾಗಿ ಕೊಡುಗೆ ನೀಡುತ್ತಿದೆ. ಗೋವಾ ಸದೃಢವಾದ ಸ್ಟಾರ್ಟಪ್ ಕೇಂದ್ರಿತ ಇಕೊಸಿಸ್ಟಂ ಆಗಿ ಅಭಿವೃದ್ಧಿ ಹೊಂದುತ್ತಿದ್ದು ಅದು 'ವಿಕಸಿತ ಭಾರತ' ಮತ್ತು 'ವಿಕಸಿತ ಗುಜರಾತ್' ಧ್ಯೇಯಕ್ಕೆ ಪೂರಕವಾಗಿದ್ದು ವಿಕಸಿತ ಗೋವಾದ ಧ್ಯೇಯವನ್ನೂ ನೆರವೇರಿಸಲಿದೆ" ಎಂದರು.

ಮುಖ್ಯಮಂತ್ರಿಗಳು ಇಡಿಐಐ– ಗೋವಾ ಸೆಂಟರ್ ಫಾರ್ ಪ್ರೊಮೋಟಿಂಗ್ ಎಂಟರ್‌ಪ್ರಿನ್ಯೂರ್‌ಶಿಪ್ (ಮಾರ್ಚ್ 12, 2024ರಂದು ಉದ್ಘಾಟನೆಯಾಗಿತ್ತು) ಮಾಡಿರುವ ಗಮನಾರ್ಹ ಕೆಲಸವನ್ನು ಉಲ್ಲೇಖಿಸಿದ್ದು ಗುಜರಾತ್ ನ ಮಾನ್ಯ ಮುಖ್ಯಮಂತ್ರಿ ಶ್ರೀ ಭೂಪೇಂದ್ರ ಪಟೇಲ್ ಅವರು ಬರೆದ ಪತ್ರದ ನಂತರ ಇಡಿಐಐ ಪ್ರಾರಂಭಿಸಿದೆ ಎಂದರು.


## ದುಬಾರಿಯಾದ ದುನಿಯಾ ಜೀವನ ವ್ಯವಸ್ಥೆಯಲ್ಲಿ ದೀರ್ಘಕಾಲಿಕ

# ಶಿಕ್ಷಣ ವ್ಯವಸ್ಥೆ ಬೇಕೇ?

ಸುಡುವ ಬೇಸಿಗೆಯ ಈ ರಣಬಿಸಿಲಿಗೆ ತಲೆ ಸುಡುತ್ತದೆಯೋ ಇಲ್ಲವೋ ಗೊತ್ತಿಲ್ಲ, ಆದರೆ ಮಕ್ಕಳ ಶೈಕ್ಷಣಿಕ ವರ್ಷ ಮುಗಿದು ಮತ್ತೊಂದು ವರ್ಷಕ್ಕೆ ಕಾಲಿಡುವ ಮುನ್ನವೇ ಕಟ್ಟಬೇಕಾದ ಶಾಲಾ ಫೀ ಚೀಟಿ ನೋಡಿದ ತಕ್ಷಣ ಪೋಷಕರಿಗೆ ತಲೆ ಬಿಸಿಯಾಗಿಬಿಡುತ್ತದೆ. ದಿನೇ ದಿನೇ ಗಗನಕ್ಕೆ ಏರುತ್ತಿರುವ ದಿನ ನಿತ್ಯದ ಅಗತ್ಯ ವಸ್ತುಗಳ ಬೆಲೆಯಿಂದ ಹೈರಾಣಾಗಿರುವ ಜನಸಾಮಾನ್ಯರಿಗೆ ಪ್ರತಿ ವರ್ಷ ಏರುತ್ತಿರುವ ಶಾಲಾ ಶುಲ್ಕ ಸಹ ಹೊರಲಾರದ ಭಾರವಾಗಿರುವ ಈ ಸಂದರ್ಭದಲ್ಲಿ ಮಕ್ಕಳನ್ನು ಶಾಲೆಗೆ ಸೇರಿಸಲು ಮಕ್ಕಳ ವಯೋಮಿತಿ ಕಡ್ಡಾಯವಾಗಿ 6 ವರ್ಷ ಪೂರ್ಣಗೊಂಡಿರಬೇಕು ಎಂಬ ಷರತ್ತು ನಿಜವಾಗಿಯೂ ಪೋಷಕರನ್ನು ಮತ್ತಷ್ಟು ಚಿಂತಿಸುವಂತೆ ಮಾಡಿದೆ. ಈಗ ಬಹಳಷ್ಟು ಪೋಷಕರ ಒತ್ತಾಯಕ್ಕೆ ಮಣಿದ ಸರ್ಕಾರ 2025–26 ನೇ ಸಾಲಿಗೆ ಒಂದನೇ ತರಗತಿಗೆ ಸೇರಲು 5 ವರ್ಷ 5 ತಿಂಗಳು ಸಾಕೆಂದು ಅನುಮತಿಸಿದ್ದರೂ ಮುಂದಿನ ವರ್ಷ ಅಂದರೆ 2026–27 ನೇ ಸಾಲಿನಿಂದ ಒಂದನೇ ತರಗತಿಗೆ ಸೇರಲು 6 ವರ್ಷ ಕಡ್ಡಾಯ ಎಂದು ಹೇಳಿದೆ.

ಮಕ್ಕಳನ್ನು ಒಂದನೇ ತರಗತಿಗೆ ಸೇರಿಸಲು ವಯಸ್ಸಿನ ಮಾನದಂಡ ಒಂದೊಂದು ದೇಶದಲ್ಲಿ ಒಂದೊಂದು ರೀತಿ ಇದೆ. ನಮ್ಮಲ್ಲಿ ಮೊದಲು 5 ವರ್ಷ ಆರು ತಿಂಗಳು ಇತ್ತಾದರೂ ಜನನ ಪ್ರಮಾಣ ಪತ್ರ ಕಡ್ಡಾಯಗೊಳ್ಳುವ ಮೊದಲು ನಮ್ಮ ಕಾಲದಲ್ಲಿ ಸರ್ಕಾರಿ ಶಾಲೆಗಳಲ್ಲಿ ಸಾಂಪ್ರದಾಯಿಕವಾಗಿ ವಯಸ್ಸನ್ನು ಪರೀಕ್ಷೆ ಮಾಡುವ ವಿಧಾನ ಇತ್ತು ಅದು ಎಡಗೈಯನ್ನು ತಲೆಯ ಮೇಲಿಂದ ಬಲಗಿವಿಯನ್ನು ತಾಕಿಸುವುದು. ಹೀಗೆ ಕೈ ಕಿವಿಯನ್ನು ತಾಕಿದರೆ ಶಾಲೆಗೆ ಸೇರಲು ವಯಸ್ಸು ಆಗಿದೆ ಎಂದು ಅರ್ಥ. ಆಗ ಶಾಲಾ ಶಿಕ್ಷಕರು ನಮೂದು ಮಾಡಿದ್ದೆ ಜನ್ಮದಿನ ಹೀಗಾಗಿ ಶಾಲಾ ಶಿಕ್ಷಕರು ಕೊಟ್ಟ ಜನ್ಮದಿನದ ಮೇಲೆ ಉದ್ಯೋಗ ಪಡೆದವರು, ಬೇಗ ನಿವೃತ್ತಿಯಾದವರು ಬಹಳಷ್ಟು ಮಂದಿ. ಆದರೆ ಈಗ ಜನನ ಪ್ರಮಾಣ ಪತ್ರ ಕಡ್ಡಾಯ. ಈಗ ಒಂದನೇ ತರಗತಿಗೆ ಸೇರಲು 6 ವರ್ಷ ಕಡ್ಡಾಯವಾಗಿರಬೇಕು ಎನ್ನುವ ಬಗ್ಗೆ ಚರ್ಚೆ ಶುರುವಾಗಿದೆ. ಯಾವ ಮಾನದಂಡದ ಆಧಾರದಲ್ಲಿ 6 ವರ್ಷ ಕಡ್ಡಾಯ ಮಾಡಿದ್ದಾರೆ? ಮುಂದುವರಿದ ರಾಷ್ಟ್ರವಾದ ಅಮೇರಿಕಾದಲ್ಲಿಯೇ ಕೇವಲ ಐದು ವರ್ಷ ಇದೆ, ಉಳಿದಂತೆ ಇಂಗ್ಲೇಂಡ್, ನ್ಯೂಜಿಲೆಂಡ್, ವೇಲ್ಸ್, ಟ್ರಿನಿಡಾಡ್, ಟೊಬ್ಯಾಗೊ, ಹಾಗೂ ಪಕ್ಕದ ರಾಷ್ಟ್ರಗಳಾದ ಪಾಕಿಸ್ತಾನ ಮತ್ತು ನೇಪಾಳದಲ್ಲಿ ಸಹ 5 ವರ್ಷಕ್ಕೆ ಒಂದನೇ ತರಗತಿಗೆ ಸೇರಿಸಲು ವಯಸ್ಸಿನ ಮಿತಿ ಇರುವಾಗ ನಮಗೆ ಏಕೆ ಆರು ವರ್ಷ ಎಂಬ ಪ್ರಶ್ನೆ ಎದ್ದಿದೆ.

ದೀರ್ಘ ಕಾಲದ ಶಿಕ್ಷಣಕ್ಕೆ ಪೋಷಕರು ಹೆದರಲು ಒಂದು ಕಾರಣವಿದೆ, ಈಗ ಮೊದಲಿನಂತೆ ಮಕ್ಕಳನ್ನು ನೇರವಾಗಿ ಒಂದನೇ ತರಗತಿಗೆ ಸೇರಿಸುವ ಪದ್ಧತಿಯೂ ಇಲ್ಲ ಬದಲಾಗಿ ಮೊದಲಿನಂತೆ ಖಾಸಗಿ ಶಾಲೆಗಳ ಪರಿಕಲ್ಪನೆ ಇರಲಿಲ್ಲ, ಆದರೆ ಈಗ ಮಗು ಹುಟ್ಟಿ ಮಾತನಾಡಲು ಪ್ರಾರಂಭಿಸಿದಾಗಿನಿಂದ ಖಾಸಗಿ ಶಾಲೆಗೆ ಸೇರಿಸುವ ಪದ್ಧತಿ ತನ್ನಷ್ಟಕ್ಕೆ ತಾನೇ ಬೆಳೆದುಬಿಟ್ಟಿದೆ. ಒಂದನೇ ತರಗತಿಗೆ ಸೇರಿಸುವ ಮುನ್ನವೇ ಪ್ರೀ ಕೆ ಜಿ, ಎಲ್ ಕೆ ಜಿ, ಯು ಕೆ ಜಿ, ಹೀಗೆ ಮೂರು ವರ್ಷಗಳ ಅಕ್ಷರಾಭ್ಯಾಸ ಆಗಿರುತ್ತದೆ ನಂತರ ಒಂದರಿಂದ ಹನ್ನೆರಡನೆಯ ತರಗತಿಯವರೆಗೆ ಪದವಿ ಪೂರ್ವ ಶಿಕ್ಷಣ, ನಂತರ ಐದು ವರ್ಷಗಳ ಕಾಲ ವೃತ್ತಿಪರ ಕೋರ್ಸ್, ನಂತರ ಎರಡು ವರ್ಷಗಳ ಕಾಲ ಹೆಚ್ಚಿನ ವ್ಯಾಸಂಗ ಇನ್ನು ಡಾಕ್ಟರೇಟ್ ಪಡೆಯಲು ಮತ್ತಷ್ಟು ವ್ಯಾಸಂಗ ಹೀಗೆ ಪ್ರೀ ಕೆ ಜಿ ಯಿಂದ ಹಿಡಿದು ಉನ್ನತ ವ್ಯಾಸಂಗವನ್ನು ಪಡೆಯಲು ಸುಮಾರು 22 ವರ್ಷಗಳಿಂದ ಹಿಡಿದು 25 ವರ್ಷಗಳ ಕಾಲ ಕೆಲವೊಮ್ಮೆ 30 ವರ್ಷಗಳ ಕಾಲ ಒಂದು ಮಗು ಶಿಕ್ಷಣ ಪಡೆಯ ಬೇಕಾದ ವ್ಯವಸ್ಥೆ ಎದುರಾಗಿದೆ. ಕಿಂಡರ್ಗಾರ್ಟನ್ ಗೆ ಸೇರಿಸಲು ಒಂದು ಮಗುವಿಗೆ ಒಂದು ಲಕ್ಷಕ್ಕಿಂತ ಅಧಿಕ ಶಾಲಾ ಶುಲ್ಕವಾಗುತ್ತಿರುವ ಈ ಸಂದರ್ಭದಲ್ಲಿ 22 ರಿಂದ 25 ವರ್ಷಗಳ ಕಾಲ ಮಕ್ಕಳ ಲಕ್ಷ ಲಕ್ಷ ಶೈಕ್ಷಣಿಕ ಶುಲ್ಕ ಭರಿಸುವುದಾದರೂ ಹೇಗೆ? ಎನ್ನುವ ಪ್ರಶ್ನೆ ಪೋಷಕರಲ್ಲಿ ಕಾಡಿ ಒಂದು ಕಡೆ ಜನಸಂಖ್ಯೆಯ ನಿಯಂತ್ರಣ ತನ್ನಿಂದ ತಾನೇ ಆಗುತ್ತಿರುವುದು ವಿಪರ್ಯಾಸವೇ ಸರಿ. ಏಕೆಂದರೆ ಮೊದಲು "ಮಕ್ಕಳಿರಲವ್ವ ಮನೆತುಂಬ" ಎನ್ನುತ್ತಿದ್ದರು ಮನೆ ತುಂಬಾ ಮಕ್ಕಳಿದ್ದರೆ ಕೃಷಿ ಚಟುವಟಿಕೆಗೆ, ವೃದ್ಧರನ್ನು, ಅಸಹಾಯಕರನ್ನು ನೋಡಿಕೊಳ್ಳಲು ಹಾಗೂ ಕುಟುಂಬದ ಭದ್ರತೆಗೆ, ಆದರೆ ಈಗ ಒಂದು ಮಗು ಸಾಕೆ ಇನ್ನೊಂದು ಮಗು ಮಾಡಿಕೊಳ್ಳಬಾರದೆ ಎಂದು ಯಾರಾದರೂ ಕೇಳಿದರೆ, "ಅಯ್ಯೋ ಒಂದು ಮಗುವನ್ನು ಸಾಕಿ ಓದಿಸುವುದೇ ಕಷ್ಟ, ಇನ್ನು ಎರಡು ಮಕ್ಕಳನ್ನು ಸಾಕುವುದು ಹೇಗೆ? ಈ ಒಂದು ಮಗುವನ್ನು ಸಾಕಲಾರದೆ ಮದುವೆ ಆಗಿ ಮೂರು ವರ್ಷ, ಐದು ವರ್ಷ ಫ್ಯಾಮಿಲಿ ಪ್ಲಾನಿಂಗ್ ನಲ್ಲಿ ಇದ್ದೆವು" ಎಂಬ ಉತ್ತರ ಬರುತ್ತದೆ. ಹೀಗಾಗಿಯೇ ಹಿರಿಯ ನಾಗರಿಕರನ್ನು ಪಾಲನೆ ಪೋಷಣೆ ಮಾಡುವವರಿಲ್ಲದೆ ಅನಾಥಾಶ್ರಮಕ್ಕೆ ಸೇರುವ ಅನಿವಾರ್ಯತೆ ಉಂಟಾಗಿದೆ. ಇಂತಹ ದುಬಾರಿ ದುನಿಯಾ ಜೀವನದಲ್ಲಿ ಒಂದು ಮಗುವನ್ನು ಓದಿಸಲು ಸುಮಾರು 25 ವರ್ಷಗಳ ಶಾಲಾ ಕಾಲೇಜಿನ ಫೀ



ಎಷ್ಟಾಗುತ್ತದೆ? ಭರಿಸುವುದಾದರೂ ಹೇಗೆ ಎನ್ನುವ ಪ್ರಶ್ನೆ ಈಗ ಪೋಷಕರಲ್ಲಿ ಕಾಡುವ ಪ್ರಶ್ನೆಯಾಗಿದೆ.

ಇಷ್ಟೆಲ್ಲಾ ಸಮಸ್ಯೆ ಯಾಕೆ ಸುಮ್ಮನೆ ಸರ್ಕಾರಿ ಶಾಲೆಗಳಲ್ಲಿ ಓದಿಸಬಹುದಲ್ಲ ಎನ್ನುವ ಪ್ರಶ್ನೆ ಮೂಡುವುದು ಸಹಜ. ಆದರೆ ಇಂದು ನಮ್ಮಲ್ಲಿ ಸರ್ಕಾರಿ ಶಾಲೆಗಳಲ್ಲಿನ ಸೌಲಭ್ಯ ಎಷ್ಟರಮಟ್ಟಿಗೆ ಇದೆ, ಸರ್ಕಾರಗಳು ಸರ್ಕಾರಿ ಶಾಲೆಗಳನ್ನು ಎಷ್ಟರ ಮಟ್ಟಿಗೆ ನಿರ್ವಹಣೆ ಮಾಡುತ್ತಿವೆ ಎಂದರೆ ಮೊನ್ನೆ ನಡೆದ ಸದನದಲ್ಲಿ ಒಬ್ಬ ಶಾಸಕರು ಪ್ರಸ್ತಾಪ ಮಾಡಿದರು, "ಈಗ ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಕರ ಪರಿಸ್ಥಿತಿ ಹೇಗಿದೆ ಎಂದರೆ ತಾವು ಪಾಠ ಮಾಡಬೇಕಾ? ಪಾಠ ಮಾಡುವ ಸಮಯದಲ್ಲಿ ತರಕಾರಿ, ಬೇಳೆ ತರಬೇಕಾ"? ಎಂದು. ಇದು ಈಗ ಭಾರತದ ಸರ್ಕಾರಿ ಶಾಲೆಗಳಲ್ಲಿನ ಪರಿಸ್ಥಿತಿ. ಸರ್ಕಾರಿ ಶಾಲೆಗಳಲ್ಲಿ ಸರಿಯಾದ ಕೊಠಡಿಗಳು ಇಲ್ಲ, ಶೌಚಾಲಯ ಇಲ್ಲ, ಆಟದ ಮೈದಾನ ಇಲ್ಲ, ಗ್ರಂಥಾಲಯ ಇಲ್ಲ, ಪ್ರಯೋಗಾಲಯ ಇಲ್ಲ, ವಾಹನದ ವ್ಯವಸ್ಥೆ ಇಲ್ಲ, ಕರೆಂಟ್ ಇಲ್ಲ, ನೀರಿಲ್ಲ, ಮೂಲ ಸೌಕರ್ಯಗಳು ಇಲ್ಲ ಕಡೆಗೆ ವಿದ್ಯಾರ್ಥಿಗಳಿಗೆ ತಕ್ಕಷ್ಟು ಶಿಕ್ಷಕರಿಲ್ಲ, ಸಹಾಯಕರಿಲ್ಲ. ಭಾರತದಲ್ಲಿ 60 ರಿಂದ 70 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇದ್ದರೆ, ಅಮೇರಿಕಾದಲ್ಲಿ ಮತ್ತು ಚೀನಾದಲ್ಲಿ 16 ರಿಂದ 17 ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕರು ಇದ್ದಾರೆ. ಇದಲ್ಲದೆ ಅಮೇರಿಕಾದಲ್ಲಿ ಒಂದನೇ ತರಗತಿಯಿಂದ ಹನ್ನೆರಡನೆಯ ತರಗತಿಯವರೆಗೆ ಎಲ್ಲರಿಗೂ ಉಚಿತ ಶಿಕ್ಷಣ, ಅವರ ಶಾಲೆಗಳು ಯೂನಿವರ್ಸಿಟಿಗಳನ್ನು ಮೀರಿಸುವಷ್ಟು ಆಧುನಿಕ ಸಕಲ ಸೌಲಭ್ಯಗಳನ್ನು ಹೊಂದಿವೆ. ಮಧ್ಯಾಹ್ನ ಬಡ ವಿದ್ಯಾರ್ಥಿಗಳಿಗೆ ಉಚಿತ ಊಟದ ವ್ಯವಸ್ಥೆ, ಇದಲ್ಲದೆ ಮನೆಯಿಂದ ಶಾಲೆಗೆ ಕಾಲ ಕರೆದುಕೊಂಡು ಹೋಗಲು ಉಚಿತ ಶಾಲಾ ಬಸ್ ವ್ಯವಸ್ಥೆ ಸಹ ಇದೆ. ಇಂತಹ ಸಕಲ ಸೌಲಭ್ಯಗಳನ್ನು ಹೊಂದಿರುವ ಉಚಿತ ಶಿಕ್ಷಣವನ್ನು ಅಮೆರಿಕಾ ನೀಡುವುದರಿಂದ ಅಲ್ಲಿ ಖಾಸಗಿ ಶಾಲೆಗಳು ಇಲ್ಲ, ಇದ್ದರೂ ಅವು ಬೆರಳೆಣಿಕೆಯಷ್ಟು ಮಾತ್ರ. ಅಮೇರಿಕಾದಲ್ಲಿ ಅಂತಹ ಗುಣಮಟ್ಟದ ವೃತ್ತಿಪರವಾದ ಶಿಕ್ಷಣವನ್ನು 12 ನೇ ತರಗತಿಯವರೆಗೆ ಓದಿ ಮುಂದೆ ವಿಧ್ಯಾಭ್ಯಾಸ ಮೊಟಕುಗೊಳಿಸಿ ಕೆಲಸಕ್ಕೆ ಸೇರುವುದೇ ಹೆಚ್ಚು. ಆದರೆ ನಮ್ಮಲ್ಲಿ ಪದವಿಗಳ ಮೇಲೆ ಪದವಿ ಪಡೆದರೂ ಉದ್ಯೋಗದ ಖಾತ್ರಿ ಇಲ್ಲ. ಅಮೇರಿಕಾದಲ್ಲಿ ನೀಡುವಷ್ಟು ಗುಣಮಟ್ಟದ ಉಚಿತ ಶಿಕ್ಷಣದ ವ್ಯವಸ್ಥೆಯೂ ನಮ್ಮಲ್ಲಿ ಇಲ್ಲ.

ಭಾರತ ಅಮೆರಿಕಾಗಿಂತ ಹೆಚ್ಚಿನ ಗುಣಮಟ್ಟದ ಉಚಿತ ಶಿಕ್ಷಣವನ್ನು ನೀಡಬಹುದು, ಏಕೆಂದರೆ ಭಾರತದ ಸಂವಿಧಾನದ 21ಎ ನೇ ವಿಧಿಯು ಸ್ಪಷ್ಟವಾಗಿ ರಾಜ್ಯ ಸರ್ಕಾರಗಳು ಮಗುವಿನ 6ನೇ ವಯಸ್ಸಿಂದ 14 ನೇ ವಯಸ್ಸಿನವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕು ಎಂದು ಇದೆ. ಹಾಗೆಯೇ 29 ನೇ ವಿಧಿಯು ರಾಜ್ಯ ಸರ್ಕಾರದಿಂದ ನಿರ್ವಹಿಸಲ್ಪಡುವ ಮತ್ತು ಸರ್ಕಾರದಿಂದ ಅನುದಾನ ಪಡೆಯುವ ಯಾವುದೇ ಶಿಕ್ಷಣ ಸಂಸ್ಥೆಗಳು ಯಾವುದೇ ಧರ್ಮ, ಜಾತಿ, ಜನಾಂಗ, ಭಾಷೆ ಆಧಾರದ ಮೇಲೆ ತಾರತಮ್ಯ ಮಾಡಿ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಲು ನಿರಾಕರಿಸುವಂತಿಲ್ಲ ಎಂದು ಹೇಳಿದೆ. ಹೀಗೆ ಉಚಿತ ಶಿಕ್ಷಣ ನಮ್ಮ ಮೂಲ ಭೂತ ಹಕ್ಕು, ಸಂವಿಧಾನ ನಮಗೆ ಈ ಹಕ್ಕನ್ನು ನೀಡಿದೆ. ಇದಲ್ಲದೆ ನಾವು ಕೊಟ್ಯಾಂತರ ರೂಪಾಯಿ ತೆರಿಗೆಯನ್ನು ಸರ್ಕಾರಕ್ಕೆ ಕಟ್ಟುತ್ತಿದ್ದೇನೆ. ಉಚಿತ ಶಿಕ್ಷಣ ಮತ್ತು ಉಚಿತ ಆರೋಗ್ಯ ನೀಡುವುದು ಸರ್ಕಾರದ ಕರ್ತವ್ಯ, ಆದರೆ ರಾಜಕೀಯ ವ್ಯಕ್ತಿಗಳು ನಡೆಸುತ್ತಿರುವ ಖಾಸಗಿ ಶಾಲೆಗಳಲ್ಲಿ ಇರುವ ಕನಿಷ್ಠ ಸೌಲಭ್ಯಗಳು ಸಹ ಅವರ ಕ್ಷೇತ್ರದಲ್ಲಿನ ಸರ್ಕಾರಿ ಶಾಲೆಗಳಲ್ಲಿ ಇರುವುದಿಲ್ಲ ಕಾರಣ ರಾಜಕಾರಣಿಗಳ ಇಚ್ಛಾಶಕ್ತಿ ಕೊರತೆ ಮತ್ತು ತಮ್ಮ ಒಡೆತನದ ಖಾಸಗಿ ಶಾಲೆಗಳನ್ನು ಬಲವರ್ಧನೆ ಮಾಡಿಕೊಳ್ಳಬೇಕು ಎಂಬ ಸ್ವಾರ್ಥ.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಗುಣಮಟ್ಟದ ಶಿಕ್ಷಣ ಇಲ್ಲದೆ ಉದ್ಯೋಗ ಸಿಗುವುದಿಲ್ಲ, ಈಗ ಮನೆಯಲ್ಲಿ ಒಬ್ಬರು ದುಡಿಯುವುದು ಇರಲಿ, ಗಂಡ ಹೆಂಡತಿ ಇಬ್ಬರೂ ದುಡಿದರೂ ಸಹ ಈ ದುಬಾರಿ ದುನಿಯಾದಲ್ಲಿ ಅಗತ್ಯ ವಸ್ತುಗಳ ಬೆಲೆ ಏರಿಕೆ, ಮನೆ ಬಾಡಿಗೆ, ಪೆಟ್ರೋಲ್ ಡೀಸೆಲ್ ಬೆಲೆ ಏರಿಕೆ, ಆಸ್ಪತ್ರೆ ವೆಚ್ಚ ಹೆಚ್ಚಾಗಿರುವುದರಿಂದ ಈಗ ಬದುಕುವುದೇ ಕಷ್ಟವಾಗಿರುವಾಗ ದೀರ್ಘಕಾಲಿಕ ಶಿಕ್ಷಣ ಕೊಡಿಸುವುದು ಮತ್ತಷ್ಟು ಕಷ್ಟವಾಗಿದೆ, ಹೀಗಾಗಿ ಶಿಕ್ಷಣ ವ್ಯವಸ್ಥೆ ಬದಲಾಗಬೇಕು ಮಕ್ಕಿಕಾ ಮಕ್ಕಿ ಅಭ್ಯಾಸ ಮಾಡಿಸುವುದಕ್ಕಿಂತ, ಕೌಶಲ್ಯ ಆಧಾರಿತ ವೃತ್ತಿಪರ ಶಿಕ್ಷಣ ನೀಡಬೇಕು, ಕನಿಷ್ಠ 12 ನೇ ತರಗತಿ ಓದಿದ ಮೇಲೆ ವಿಧ್ಯಾರ್ಥಿಗಳು ತಮ್ಮ ಕಾಲಿನ ಮೇಲೆ ತಾವು ನಿಲ್ಲುವಂತಹ ಶಿಕ್ಷಣವನ್ನು ನೀಡಬೇಕು. ಕೇವಲ ಓಟ್ ಬ್ಯಾಂಕ್ ದೃಷ್ಟಿಯಿಂದ ಬಡವರಾಗಿದ್ದರೆ ಕಾಸು ಕೊಟ್ಟು ಓಟ್ ಹಾಕಿಸಿಕೊಳ್ಳಬಹುದು ಎಂಬ ದುರದೃಷ್ಟ ಆಲೋಚನೆ ರಾಜಕಾರಣಿಗಳಿಂದ ದೂರವಾಗಿ. ಈ ಸ್ಪರ್ಧಾತ್ಮಕ ಯುಗದಲ್ಲಿ ನಮ್ಮ ಸರ್ಕಾರಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳೂ ಸಹ ವಿದೇಶದಲ್ಲಿ ಕೆಲಸ ಗಿಟ್ಟಿಸಿಕೊಳ್ಳುವ ಕಾಲ ಬರಬೇಕು, ಬಡವರ ಮಕ್ಕಳು ಸಹ ಡಾಕ್ಟರ್, ಇಂಜಿನಿಯರ್ ಆಗಬೇಕು. ಹಾಗೆ ಆಗಲು ಕೋಟ್ಯಂತರ ರೂಪಾಯಿ ಬಜೆಟ್ ನಲ್ಲಿ ಶಿಕ್ಷಣಕ್ಕಾಗಿ ಮೀಸಲಿಟ್ಟ ನಮ್ಮ ತೆರಿಗೆಯ ಹಣ ಕೈಯಿಂದ ಕೈಗೆ ಬದಲಾಗಿ ಬರುವಾಗ ಕರಗಿ ಹೋಗದೆ, ಸರ್ಕಾರಿ ಶಾಲೆಗಳ ಗುಣಮಟ್ಟ ಸುಧಾರಣೆ ಆಗಬೇಕು ಹಾಗಾದಾಗ ಮಾತ್ರ ಶ್ರೀಮತಿ ಸಾವಿತ್ರಿ ಬಾಯಿ ಫುಲೆ, ಅಂಬೇಡ್ಕರ್ ರವರಂತಹ ಮಹನೀಯರ ಪರಿಶ್ರಮ ಮತ್ತು ಆಶಯಗಳು ನೆರವೇರುತ್ತವೆ.

ಕಡೆಯದಾಗಿ ಹೇಳುವುದಾದರೆ ಈಗ ಮೊದಲಿನಂತೆ 100 ವರ್ಷಗಳ, 110 ವರ್ಷಗಳ ಸರಾಸರಿ ಆಯಸ್ಸು ಇಲ್ಲ ಈಗ 50 ವರ್ಷ ಬದುಕಿದರೆ ಹೆಚ್ಚು, ಅಷ್ಟರೊಳಗೆ ಎಪ್ಪತ್ತಾರು ಖಾಯಿಲೆ, ಇದರಲ್ಲಿ ಮುವತ್ತು ವರ್ಷ ಶಿಕ್ಷಣಕ್ಕೆ ಮೀಸಲಿಟ್ಟರೆ ಜೀವನದಲ್ಲಿ ಸ್ಥಿರವಾಗುವುದು ಯಾವಾಗ. ಅದೂ ಅಲ್ಲದೇ ಈಗಿನ ಮಕ್ಕಳಲ್ಲಿ ಐಕ್ಯೂ ಪವರ್ ಕಲಿಕಾ ಸಾಮರ್ಥ್ಯ ಹೆಚ್ಚು, ಕಿಂಡರ್ಗಾರ್ಟನ್ ಗೆ ಗಿನ್ನಿಸ್ ದಾಖಲೆ ಮಾಡಿದ ಮಕ್ಕಳು ಇದ್ದಾರೆ. ಇಂತಹ ಸಂದರ್ಭದಲ್ಲಿ ಧೀರ್ಘ ಕಾಲಿಕ ಕಲಿಕೆ ಅಗತ್ಯವೇ? ಚರ್ಚೆ ಆಗಬೇಕಾಗಿದೆ.

-ಬಿ.ಆರ್. ರವೀಂದ್ರ(ರಾಣಾ)

## ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಾಣ: ಶಾಸಕ



ಶಿಡ್ಲಘಟ್ಟ: ನಮ್ಮ ಕ್ಷೇತ್ರದಲ್ಲಿ ನಡೆಯುವ ಎಲ್ಲ ರಾಷ್ಟ್ರೀಯ ಹಾಗೂ ನಾಡ ಹಬ್ಬಗಳ ಆಚರಣೆ ಸೇರಿದಂತೆ ಎಲ್ಲ ರೀತಿಯ ಸರಕಾರಿ, ಸಂಘ ಸಂಸ್ಥೆಗಳ ಕಾರ್ಯಕ್ರಮಗಳು, ಸಮ್ಮೇಳನಗಳು ನಡೆಯಲು ಸಕಲ ಸವಲತ್ತುಗಳುಳ್ಳ ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಾಣವಾಗಲಿದೆ ಎಂದು ಶಾಸಕ ಬಿ.ಎನ್. ರವಿಕುಮಾರ್ ತಿಳಿಸಿದರು.

ತಾಲೂಕಿನ ದಲಿತ ಸಂಘಟನೆಗಳ ಒಕ್ಕೂಟದಿಂದ ಮೇಲೂರು ಗ್ರಾಮದ ಶಾಸಕರ ಗೃಹ ಕಚೇರಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಅಭಿಂದನಾ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದರು.

ನಮ್ಮ ತಾಲೂಕು ಗಡಿ ಭಾಗದಲ್ಲಿದ್ದು ಅತಿ ಹಿಂದುಳಿದ ಕ್ಷೇತ್ರವಾಗಿದೆ. ಇಲ್ಲಿ ಅಭಿವೃದ್ಧಿ ಜತೆಗೆ ಸಾಮರಸ್ಯವನ್ನು ಕೂಡ ಕಾಪಾಡಿಕೊಳ್ಳುವುದು ನಮ್ಮ ಉದ್ದೇಶ. ನನಗೆ ಈ ಕ್ಷೇತ್ರದ ಸ್ವಾಭಿಮಾನಿ ಮತದಾರರು ಅಧಿಕಾರ ನೀಡಿದ್ದು ಅಧಿಕಾರ ಅವಧಿಯಲ್ಲಿ ಪ್ರಾಮಾಣಿಕವಾಗಿ ಮತದಾರರ ಆಶಯಗಳನ್ನು ಈಡೇರಿಸುವ ಕೆಲಸ ಮಾಡುತ್ತೇನೆ ಎಂದರು.

ನಾವು ಯಾವುದೆ ಜಾತಿ ಧರ್ಮದ ವಿರುದ್ಧವಾಗಲಿ, ಪರವಾಗಿ ಇಲ್ಲ. ಎಲ್ಲ ಜಾತಿ ಧರ್ಮಗಳನ್ನು ಕೂಡ ವಿಶ್ವಾಸಕ್ಕೆ ತೆಗೆದುಕೊಂಡು ಎಲ್ಲರ ಜತೆಗೂಡಿ ನಡೆಯುತ್ತೇನೆ. ಕಳೆದ ವರ್ಷಗಳಿಂದಲೂ ತಾಲೂಕಿನಲ್ಲಿ ಅಂಬೇಡ್ಕರ್ ಭವನ ಇಲ್ಲ ಎನ್ನುವ ಕೊರಗು ನನ್ನನ್ನು ಕಾಡುತ್ತಿದೆ.

ಹಾಗಾಗಿ ಸರಕಾರದಿಂದ ಸಿಗುವ ಕೋಟಿ ಜತೆಗೆ ಮಾಜಿ ಪ್ರಧಾನಿ ದೇವೇಗೌಡರ ರಾಜ್ಯ ಸಭಾ ಸದಸ್ಯರ ನಿಧಿ, ಎಂಪಿ ಮಲ್ಲೇಶ್ಬಾಬು ಅವರ ಸಂಸತ್ ಕ್ಷೇತ್ರದ ಅಭಿವೃದ್ಧಿ ನಿಧಿ, ಎಮ್ಮೆಲ್ಸಿ ಇಂಚರ ಗೋವಿಂದರಾಜು ಅವರ ಕ್ಷೇತ್ರಾಭಿವೃದ್ಧಿ ನಿಧಿ, ನನ್ನ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಸೇರಿ ಕೋಟಿ ರೂ.ಹಣವನ್ನು ಹೊಂದಿಸಿದ್ದು ಸುಸಜ್ಜಿತ ಅಂಬೇಡ್ಕರ್ ಭವನ ನಿರ್ಮಾಣ ಮಾಡಲಿದ್ದೇನೆ ಎಂದು ಹೇಳಿದರು.

ನನ್ನ ಅಧಿಕಾರದ ಅವಧಿಯಲ್ಲಿ ಜಾತಿ ಜಾತಿ ಧರ್ಮ ಧರ್ಮಗಳನ್ನು ಎತ್ತಿಕಟ್ಟಿ ಕೇಸುಗಳನ್ನು ಹಾಕಿಸುವ, ವಿನಾಕಾರಣ ಜನ ಸಾಮಾನ್ಯರು ಕೋರ್ಟು ಕಚೇರಿ ಪೊಲೀಸ್ ಸ್ಟೇಷನ್ಗೆ ಅಲೆದಾಡಿಸುವ ಕೆಲಸಕ್ಕೆ ಅವಕಾಶವನ್ನೇ ನೀಡುವುದಿಲ್ಲ. ಪರಸ್ಪರ ಸೌಹಾರ್ದತೆಯಿಂದ ಎಲ್ಲರೂ ಕೂಡಿ ನಡೆಯೋಣ ಎಂದು ಆಶಿಸಿದರು.

ಏಪ್ರಿಲ್ ರಂದು ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಅದ್ದೂರಿ ಹಾಗೂ ಅರ್ಥಪೂರ್ಣವಾಗಿ ನಡೆಸಿಕೊಟ್ಟಿದ್ದಕ್ಕೆ ದಲಿತ ಸಂಘಟನೆಗಳ ಒಕ್ಕೂಟದ ಎಲ್ಲ ಪದಾಧಿಕಾರಿಗಳು ಶಾಸಕ ರವಿಕುಮಾರ್ ಅವರನ್ನು ಶಾಲು ಹಾಕಿ ಹಣ್ಣು ಹಂಪಲು ನೀಡಿ ಸನ್ಮಾನಿಸಿದರು.

ಗಂಜಿಗುಂಟೆ ಗ್ರಾಮ ಪಂಚಾಯಿತಿ ಅಧ್ಯಕ್ಷ ಜಿ. ನರಸಿಂಹಮೂರ್ತಿ, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಬಂಕ್ ಮುನಿಯಪ್ಪ, ತಾಲೂಕು ಜೆಡಿಎಸ್ ಅಧ್ಯಕ್ಷ ವೆಂಕಟೇಶ್, ದಲಿತ ಸಂಘರ್ಷ ಸಮಿತಿ ತಾಲೂಕು ಸಂಚಾಲಕ ಟಿ.ಎ ಚಲಪತಿ, ಉಜ್ಜುರು ರಾಮಣ್ಣ, ಲಕ್ಕೇನಹಳ್ಳಿ ವೆಂಕಟೇಶ್, ದಲಿತ ಮುಖಂಡರಾದ ವಿ. ಕೃಷ್ಣಪ್ಪ,ಮುಖಂಡ ರಮೇಶ್, ಗಂಗನಳ್ಳಿ ರಾಮಣ್ಣ, ಜೆ.ಎನ್.ಪ್ರಕಾಶ್ , ಶಶಿಕಲಾ ನರಸಿಂಹರಾಜು, ಚನ್ನಕೇಶವ, ಡಿ.ಸಿ. ನರಸಿಂಹಮೂರ್ತಿ, ಆರ್.ಮಂಜುನಾಥ್, ಮಧು, ಮುನಿಕೃಷ್ಣ, ಮಂಜುನಾಥ್ ಭಾಗವಹಿಸಿದ್ದರು.

## ನೀರು ಸರಬರಾಜಿಗೆ ಬೆಂಬಲ

ಗೌರಿಬಿದನೂರು: ಎತ್ತಿನಹೊಳೆ ನೀರು ವಾಟದಹೊಸಹಳ್ಳಿ ಅಮಾನಿಬೈರಸಾಗರ ಕೆರೆಗೆ ನೀರು ಹರಿಸಿದ ನಂತರ ಗೌರಿಬಿದನೂರಿಗೆ ಕುಡಿಯುವ ನೀರು ಸರಬರಾಜು ಮಾಡಿಕೊಳ್ಳುವ ಯೋಜನೆಗೆ ನಗರಸಭಾ ಸದಸ್ಯರು ಶನಿವಾರ ಅಧ್ಯಕ್ಷ ಲಕ್ಷ್ಮಿನಾರಾಯಣಪ್ಪ ಅಧ್ಯಕ್ಷತೆಯಲ್ಲಿ ನಡೆದ ಅನೌಪಚಾರಿಕ ಸಭೆಯಲ್ಲಿ ಪಕ್ಷಾತೀತವಾಗಿ ಬೆಂಬಲ ವ್ಯಕ್ತಪಡಿಸಿದರು.

64 ಕೋಟಿ ರೂ. ವೆಚ್ಚದಲ್ಲಿ ಅಮೃತ್ ಯೋಜನೆ ಅಡಿ ಜಾರಿತರಲಿರುವ ಸದರಿ ಕುಡಿಯುವ ನೀರಿಗೆ ರಾಜಕೀಯ ಬೆರಸುವುದು ಬೇಡ ಎಂದು ಸಭೆಯಲ್ಲಿ ಮನವಿ ಮಾಡಿದ ಸದಸ್ಯ ಡಿ.ಜೆ.ಚಂದ್ರಮೋಹನ್ ರವರು ಶಾಸಕ ಕೆ.ಎಚ್ ಪುಟ್ಟಸ್ವಾಮಿಗೌಡರಿಗೆ ವಾಟದಹೊಸಹಳ್ಳಿ ಬೇರೆ ಅಲ್ಲ, ಗೌರಿಬಿದನೂರು ಬೇರೆ ಅಲ್ಲ, ಯಾವುದೇ ತಾರತಮ್ಯ ಇಲ್ಲದೆ ಈ ಯೋಜನೆ ರೂಪಿಸಲಾಗುತ್ತಿದೆ ಎಂದರು.

ಸದಸ್ಯ ಕಲೀಂಉಲ್ಲಾ ಮಾತನಾಡಿ, ವಾಟದಹೊಸಹಳ್ಳಿ ರೈತರಿಗೆ ಈ ಯೋಜನೆಯಿಂದ ಭವಿಷ್ಯದಲ್ಲಿ ಕನಿಷ್ಟ ಸಮಸ್ಯೆಯಾದರೂ ನಗರಸಭೆಯಿಂದ ಹಿಂಪಡೆಯುವುದಾಗಿ ಘೋಷಿಸಿದರು.

ಮತ್ತೋರ್ವ ಸದಸ್ಯ ಎ.ಮೋಹನ್ ಮಾತನಾಡಿ ಸದರಿ ಯೋಜನೆಗೆ ತಮ್ಮ ಬೆಂಬಲ ಇರುವುದಾಗಿ ತಿಳಿಸಿದರು, ಸದಸ್ಯ ವಿ.ರಮೇಶ್ ಮಾತನಾಡಿ, ನಗರದಲ್ಲಿ ನೀರಿನ ಬರ ಆರಂಭವಾದರೆ ಜನ ಪರಿತಪಿಸಬೇಕಾಗುತ್ತದೆ, ಆ ರೀತಿಯ ವಾತಾವರಣ ಪುನಃ ಸೃಷ್ಟಿಯಾಗುವುದು ಬೇಡ ಎಂದರು.ಉಪಾಧ್ಯಕ್ಷ ಫರೀದ್, ಪೌರಾಯುಕ್ತೆ ಡಿ.ಎಂ.ಗೀತಾ,

ಸದಸ್ಯರಾದ ಡಿ.ಎನ್. ವೆಂಕಟರೆಡ್ಡಿ, ಆರ್.ಪಿ. ಗೋಪಿನಾಥ್, ಗೋಪಾಲ್, ಡಿ.ಎ. ಮಂಜುಳ, ರಾಜಕುಮಾರ್, ಪದ್ಮಾವತಮ್ಮ, ಶಬನಾಅಸ್ಲಂ, ಜಯರಾಮಪ್ಪ, ಶ್ರೀರಾಮಪ್, ಗಿರೀಶ್, ಸಪ್ತಗಿರಿ



ಸುಪ್ರೀಂ ಕೋರ್ಟ್‌ನಲ್ಲಿ ವಕ್ಫ್ ತಿದ್ದುಪಡಿ ಕಾಯ್ದೆ ಪ್ರಕರಣದಲ್ಲಿ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಸಲ್ಮಾನ್ ಖುರ್ಷಿದ್ ಅವರನ್ನು ಸಚಿವ ಜಮೀರ್ ಅಹಮದ್ ಖಾನ್ ಶನಿವಾರ ದೆಹಲಿಯಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು. ಈ ವೇಳೆ ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಅನ್ವರ್ ಬಾಷಾ, ಹೆಚ್ಚುವರಿ ಅಡ್ವೋಕೇಟ್ ಜನರಲ್ ಜಬಿವುಲ್ಲಾ, ಧಾರವಾಡ ಅಂಜುಮನ್ ಅಧ್ಯಕ್ಷ ಇಸ್ಮಾಯಿಲ್ ತಮಟ್ ಗಾರ್, ವಕೀಲ ಶೀತಲ್ ಸೋನು ಉಪಸ್ಥಿತರಿದ್ದರು.

# ಬ್ರಾಹ್ಮಣರ ನಿಂದನೆ, ಅಪಮಾನ ಸಹಿಸುವುದಿಲ್ಲ: ರಘುನಾಥ್

ಬೆಂಗಳೂರು: ಸಿಇಟಿ ವಿದ್ಯಾರ್ಥಿಗಳ ಮೇಲೆ ನಡೆದ ಇಂತಹ ಕಹಿ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯಮಂತ್ರಿಗಳು, ಶಿಕ್ಷಣ ಸಚಿವರಿಗೆ ಮನವಿ ಮಾಡಲಾಗಿದೆ. ಶಿಕ್ಷಣ ಸಚಿವರು ವಿದ್ಯಾರ್ಥಿ ಪರೀಕ್ಷೆ ಬರೆಯಲು ಅವಕಾಶ ನೀಡುತ್ತೇವೆ ಎಂದು ಹೇಳಿದ್ದಾರೆ ಮತ್ತು ಸಿ.ಇ.ಟಿ. ಪ್ರಾಧಿಕಾರ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿರುವುದು ಸಮಾಧಾನಕರ ಸಂಗತಿ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್. ರಘುನಾಥ್ ತಿಳಿಸಿದರು.

ಪ್ರೆಸ್‌ಕ್ಲಬ್ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ವತಿಯಿಂದ ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆದು ಪರೀಕ್ಷೆ ಬರೆಯುವಂತೆ ವಿದ್ಯಾರ್ಥಿಗೆ ಹೇಳಿದರು.ಇಂತಹ ಕಹಿ ಘಟನೆಗಳು ವಿಪ್ರ ಸಮುದಾಯಕ್ಕೆ ಅಪಮಾನ ಮಾಡಿರುವ ಖಂಡನೆ ವ್ಯಕ್ತಪಡಿಸಿ ಕುರಿತು ಮಾಧ್ಯಮಗೋಷ್ಠಿ ಏರ್ಪಡಿಸಿ ಮಾತನಾಡಿ, ಸಮಾಜವನ್ನು ಹೀಯಾಳಿಸುವುದು, ನಿಂದಿಸುವುದು, ಅಪಹಾಸ್ಯಕ್ಕೆ ಒಳಪಡಿಸುವುದು ಮತ್ತು ಬ್ರಾಹ್ಮಣರ ಮೇಲೆ ದೌರ್ಜನ್ಯ ವೆಸುಗುವುದು ಸಾಮಾನ್ಯವಾಗಿದೆ. ಬ್ರಾಹ್ಮಣರು ಅಲ್ಪಸಂಖ್ಯಾತರಾಗಿದ್ದಾರೆ. ಜನಿವಾರ ಕಿತ್ತು ಹಾಕಿರುವುದರಿಂದ ಬ್ರಾಹ್ಮಣ ಸಮುದಾಯವು





ರಾಜ್ಯಾದ್ಯಂತ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.ಎಲ್ಲ ಕಡೆಗಳಲ್ಲಿ ಪ್ರತಿಭಟನೆಯಾಗುತ್ತಿದೆ. ವಿಪ್ರ ಸಮುದಾಯದಕ್ಕೆ ಆಗಿರುವ ನೋವು, ಸಂಕಷ್ಟಗಳು ಎದುರಿಸುತ್ತಿರುವ ಸಮಸ್ಯೆಗಳು ಕುರಿತು ಮಹಾಸಭಾದಿಂದ ಮುಖ್ಯಮಂತ್ರಿಗಳಿಗೆ ಮನವಿ ಮಾಡಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಿ.ಇ.ಟಿ ಪರೀಕ್ಷೆ ಬರೆಯಲು ಅವಕಾಶ ನೀಡದಿರುವ ಬ್ರಾಹ್ಮಣ ವಿದ್ಯಾರ್ಥಿಗೆ ಶಿಕ್ಷಣಕ್ಕೆ ಬೇಕಾದ ಆರ್ಥಿಕ ಸಹಾಯ ಮಹಾಸಭಾದಿಂದ ನೀಡಲಾಗುವುದು, ನಮ್ಮ ಸಂಪ್ರಾದಯ, ಸಂಸ್ಕೃತಿ ಎತ್ತಿಹಿಡಿದಿದ್ದಾನೆ ಎಂದು ಹೇಳಿದರು.

ಆರ್. ಲಕ್ಷ್ಮಿಕಾಂತ್ ಯಾರು ಏನು ಬೇಕಾದರು ಬ್ರಾಹ್ಮಣರ ಮೇಲೆ ದಬ್ಬಾಳಿಕೆ ಮಾಡಬಹುದು ಎಂದು ತಿಳಿದಿದ್ದಾರೆ. ಜನಿವಾರ ವಿವಾದ ಇಡಿ ರಾಜ್ಯ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿದೆ. ಪರೀಕ್ಷೆ ಬರೆಯಲು ಲಕ್ಷಾಂತರ ವಿದ್ಯಾರ್ಥಿಗಳು ಬರುತ್ತಾರೆ. ಅದರಲ್ಲಿ ಬ್ರಾಹ್ಮಣ ವಿದ್ಯಾರ್ಥಿಗೆ ಈ ಪರೀಕ್ಷೆ ಮಾಡಬೇಕು ಎಂದರೆ ಪೂರ್ವನಿಯೋಜಿತ ಸಂಚು ಎಂದು ಕಾಣುತ್ತದೆ. ಸಂವಿಧಾನದಲ್ಲಿ ಬ್ರಾಹ್ಮಣರಿಗೆ ಬದುಕಲು ಅವಕಾಶ ನೀಡಿದೆ. ಬ್ರಾಹ್ಮಣರಿಗೆ ಅಪಮಾನ, ತೇಜೋವಧೆ ಮಾಡಿದರೆ ಉಗ್ರ ಪ್ರತಿಭಟನೆ ಮಾಡಲಾಗುವುದು ಎಂದು ಹೇಳಿದರು.

ಸರ್ಕಾರ ಇಂತಹ ಘಟನೆಗಳ ವಿರುದ್ಧ ತತಕ್ಷಣ ಕ್ರಮ ಕೈಗೊಳ್ಳಬೇಕು, ಹೋಂ ಗಾರ್ಡ್ ಕೆಲಸದ ಆದೇಶ ಪಾಲಿಸುತ್ತಾನೆ ಅವನನ್ನ ಬಲಿಪಶು ಮಾಡುವ ಬದಲು ಅಧಿಕಾರಿಗಳ ತಲೆದಂಡವಾಗಬೇಕು. ನಿರ್ದೇಶಕ ಅನುರಾಗ್ ಕಶ್ಯಪ್ ರವರು ಬ್ರಾಹ್ಮಣರ ವಿರುದ್ದ ಅವಹೇಳನಕಾರಿ ಹೇಳಿಕೆ ನೀಡಿರುವುದು ಖಂಡನೆ ವ್ಯಕ್ತಪಡಿಸುತ್ತೇವೆ ಅವರ ಮೇಲೆ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು. ಬ್ರಾಹ್ಮಣರು ಸಮಾಜ, ದೇಶ ಜನರಿಗೆ ಒಳ್ಳೆಯದಾಗಬೇಕು ಎಂದು ಪೂಜೆ, ಹೋಮಹವನ ಮಾಡುತ್ತಾರೆ ಎಂದು ಹೇಳಿದರು. ಜಿಲ್ಲಾ ಪ್ರತಿನಿಧಿಗಳಾದ ಜಿ.ಎಸ್. ನಾಗೇಶ್, ಸತೀಶ್ ಉರಾಳ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷರಾದ ಎಸ್. ರಘುನಾಥ್, ಹಿರಿಯ ಉಪಾಧ್ಯಕ್ಷರಾದ ಆರ್. ಲಕ್ಷ್ಮಿಕಾಂತ್. ಕೆ.ಎನ್. ರವಿಕುಮಾರ್, ಅಂಬಿಕಾ ರಾಮಚಂದ್ರ, ಮಂಜುನಾಥ್ ವಿಪ್ರ ಮುಖಂಡರುಗಳು ರವಿಶಂಕರ, ಶಂಕರನಾರಾಯಣ್

## ಸರ್ಕಾರಿ ನೌಕರರ ಸಂಘದಿಂದ ಪ್ರತಿಭಟನೆ

ಚಿಂತಾಮಣಿ : ತಾಲ್ಲೂಕಿನಲ್ಲಿ ವಿನಾ ಕಾರಣ ಸರ್ಕಾರಿ ಅಧಿಕಾರಿಗಳು ಹಾಗೂ ನೌಕರರ ಮೇಲೆ ದೌರ್ಜನ್ಯ ಪ್ರಕರಣಗಳು ಹಾಗೂ ವಿನಾ ಕಾರಣ ಪ್ರಕರಣಗಳು ದಾಖಲಿಸಲಾಗುತ್ತಿರುವುದನ್ನು ಖಂಡಿಸಿ ರಾಜ್ಯ ಸರ್ಕಾರಿ ನೌಕರರಿಂದ ಚಿಂತಾಮಣಿ ನಗರದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಘಟಕ ಹಾಗೂ ವೃಂದ ಸಂಘಗಳ ಸಹಯೋಗದಲ್ಲಿ ಚಿಂತಾಮಣಿ ನಗರದಲ್ಲಿ ಪ್ರತಿಭಟನೆ ನಡೆಸಿದ ನೌಕರರು ಈ ವೇಳೆ ತಾಲ್ಲೂಕಿನಲ್ಲಿ ಅಧಿಕಾರಿಗಳ ಹಾಗೂ ನೌಕರರ ಮೇಲೆ ವಿನಾಕಾರಣ ದೌರ್ಜನ್ಯ ನಡೆಯುತ್ತಿರುವ ಮತ್ತು ಪ್ರಕರಣಗಳು ದಾಖಲಿಸುತ್ತಿರುವುದನ್ನು ಖಂಡಿಸಿ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ನೌಕರರು ಆಡಳಿತ ಯಂತ್ರಾಂಗದ ವಿರುದ್ಧ ಹಾಗೂ ನೌಕರರ ಪರ ಘೋಷಣೆಗಳನ್ನು ಕೂಗುತ್ತ ಆಕ್ರೋಶ ವ್ಯಕ್ತಪಡಿಸಿದರು.

ಈ ಪ್ರತಿಭಟನೆಯಲ್ಲಿ ಕೆಲವು ನೌಕರರು ಮಾತ್ರ ಭಾಗವಹಿಸಿದ್ದು ಉಳಿದಂತೆ ಇನ್ನು ಕೆಲವು ನೌಕರರು ಗೈರುಹಾಜರಾಗಿದ್ದು ನೌಕರರಲ್ಲಿ ಬಿರುಕು ಎದ್ದು ಕಾಣುತ್ತಿತ್ತು.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯ ವಿಚಿತ್ರ ಬೇಡಿಕೆ...!

ಚಿಕ್ಕೋಡಿ: ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಉತ್ತರ ಪತ್ರಿಕೆಗಳ ಮೌಲ್ಯಮಾಪನ ನಡೆಯುತ್ತಿದ್ದು, ವಿದ್ಯಾರ್ಥಿಗಳು ಉತ್ತರ ಪತ್ರಿಕೆಯಲ್ಲಿ ವಿಚಿತ್ರ ಬೇಡಿಕೆಯಿಟ್ಟಿರುವ ಬರವಣಿಗೆಗಳು ಬೆಳಗಾವಿಯ ಚಿಕ್ಕೋಡಿ ಜಿಲ್ಲೆಯ ಮೌಲ್ಯಮಾಪನ ಕೇಂದ್ರಗಳಲ್ಲಿ ಪತ್ತೆಯಾಗಿದೆ. ನನ್ನನ್ನು ಪಾಸ್ ಮಾಡಿದ್ರೆ ಅಷ್ಟೇ ನನ್ನ ಲವ್ ಮಾಡುತ್ತೇನೆ ಅಂದಿದ್ದಾಳೆ.

## 'ಸಿದ್ದು, ಡಿಕೆಶಿ ಕಾದಾಟದಲ್ಲಿ ಖರ್ಗೆ ಎಂಟ್ರಿ'



ಕಲಬುರಗಿ: ತಮ್ಮ ಮಗನನ್ನ ಸಿಎಂ ಮಾಡಲು ಮಲ್ಲಿಕಾರ್ಜುನ ಖರ್ಗೆಯವರೇ ಈ ಸರ್ಕಾರ ಬಿಳಿಸುತ್ತಾರೆ ಎಂದು ಬಿಜೆಪಿಯ ಮಾಜಿ ಸಚಿವ ಶ್ರೀರಾಮುಲು ಹೇಳಿದ್ದಾರೆ.

ಕಲಬುರಗಿಯಲ್ಲಿ ಶುಕ್ರವಾರ ನಡೆದ ಜನಾಕ್ರೋಶ ರ‍್ಯಾಲಿಯಲ್ಲಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಈಗಾಗಲೇ ಸಿಎಂ ಗಾದಿಗೆ ಫೈಟ್ ಮಾಡುತ್ತಿದ್ದಾರೆ. ಇದರ ನಡುವೆಯೇ ಮೂರನೇ ವ್ಯಕ್ತಿ ಪ್ರವೇಶ ಮಾಡುತ್ತಾರೆ. ಮಲ್ಲಿಕಾರ್ಜುನ ಖರ್ಗೆ ತಮ್ಮ ಮಗನನ್ನು ಸಿಎಂ ಮಾಡಲು ಅವರೇ ಸರ್ಕಾರವನ್ನ ಬೀಳಿಸುತ್ತಾರೆ. ಮೊನ್ನೆ ಖರ್ಗೆ ಅವರು ಸರ್ಕಾರ ಬೀಳುವ ಬಗ್ಗೆ ಮಾತನಾಡಿದ್ದಾರೆ. ಮೋದಿಯವರು ಈ ಸರ್ಕಾರ ಬಿಳಿಸುತ್ತಾರೆ ಎಂದು ಹೇಳಿದ್ದಾರೆ. ಮೋದಿಯವರಿಗೆ ಏನು ಕರ್ಮ ಈ ಸರ್ಕಾರ ಬಿಳಿಸೋಕೆ. ಇಬ್ಬರ ಕಾದಾಟದಲ್ಲಿ ತಮ್ಮ ಮಗನನ್ನ ಸಿಎಂ ಮಾಡಲು ಖರ್ಗೆಯವರೇ ಪ್ಲಾನ್ ಮಾಡಿದ್ದಾರೆ ಎಂದು ಶ್ರೀರಾಮುಲು ಹೇಳಿದರು. ತಂದೆ, ಮಕ್ಕಳು ಸೇರಿ ರಿಪಬ್ಲಿಕ್ ಆಫ್ ಕಲಬುರಗಿಯನ್ನಾಗಿ ಮಾಡಿದ್ದಾರೆ. ನಮ್ಮ ರಾಜದ್ಯಾಧ್ಯಕ್ಷರು ಅಲ್ಲಿಗೆ ಭೇಟಿ ಕೊಟ್ಟರೇ ಅವರ ಕಾರ್ಯಕರ್ತರು ದಬ್ಬಾಳಿಕೆ ಮಾಡುತ್ತಾರೆ. ಅದಕ್ಕೆ ತಕ್ಕ ಉತ್ತರ ನೀಡುತ್ತೇವೆ. ಇತ್ತೀಚೆಗೆ ಜಾತಿಗಣತಿ ಬಗ್ಗೆ ನಿರ್ಧಾರ ಮಾಡುವುದಿಲ್ಲ ಎಂದು ಗೊತ್ತಿತ್ತು. ಹೀಗಾಗಿ ಪಲಾಯನ ಮಾಡಿದ್ದಾರೆ. ಸಿಎಂ ಕುರ್ಚಿಗೆ ಕಂಟಕ ಬಂದಾಗ ಜಾತಿಗಣತಿ ಪ್ರಸ್ತಾಪ ಮಾಡುತ್ತಾರೆ. ಅವರ ಕೈಯಲ್ಲಿ ಆಗೋದು ಅಷ್ಟೇ. ಮುಂದೆ ಒಂದು ಕಮಿಟಿ ನೇಮಕ ಮಾಡಿ ವರದಿ ತರಿಸಿಕೊಳ್ಳುತ್ತೇವೆ ಎನ್ನುತ್ತಾರೆ. ಈ ಸರ್ಕಾರ ಸುಮ್ಮನೇ ಕಾಲಹರಣ ಮಾಡುತ್ತದೆ ಎಂದು ಶ್ರೀರಾಮುಲು ವಾಗ್ದಾಳಿ ನಡೆಸಿದರು.

# ಜನಾಕ್ರೋಶ ಯಾತ್ರೆಗೆ ಭಾಗವಹಿಸಲು ಪಕ್ಕಿರಪ್ಪ ಕರೆ



ಬಳ್ಳಾರಿ: ಇದೇ 24ರಂದು ಜರುಗಲಿರುವ ಜನಾಕ್ರೋಶ ಯಾತ್ರೆಯಲ್ಲಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಜಿ ಸಂಸದರು, ಬಿಜೆಪಿಯ ಹಿರಿಯ ಧುರೀಣರೂ ಆದ ಸಣ್ಣ ಪಕ್ಕಿರಪ್ಪ ಕರೆ ನೀಡಿದರು.


ನಗರದ ಕೌಲ್ ಬಜಾರ್ ಬಿಜೆಪಿ ಮಂಡಲ ಕಚೇರಿಯಲ್ಲಿ ಏರ್ಪಡಿಸಿದ್ದ ಜನಾಕ್ರೋಶ ಯಾತ್ರೆಯ ಪೂರ್ವಭಾವಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಬಳ್ಳಾರಿ ಗ್ರಾಮೀಣ ವಿಧಾನ ಸಭಾ ಕ್ಷೇತ್ರದ ಕೌಲ್ ಬಜಾರ್ ಮಂಡಲದಿಂದ ಮೂರು ಸಾವಿರ ಜನರು ಭಾಗವಹಿಸುವ ನಿರೀಕ್ಷೆಯಿದೆ. ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ನೀತಿಗಳಿಂದ ಜನಸಾಮಾನ್ಯರು ಬೇಸತ್ತು ಬಳಲುವಂತಾಗಿದೆ. ಜಾತಿಗಣತಿ ನೆಪದಲ್ಲಿ ಜಾತಿ ರಾಜಕೀಯ ಆರಂಭಗೊಂಡಿದೆ ಎಂದರು.

ಜಾತಿ ಗಣತಿ ಮಾಡದೇ ಸಿಎಂ ಸಿದ್ದರಾಮಯ್ಯ 165 ಕೋಟಿ ರೂ. ಗುಳುಂ ಮಾಡಿದ್ದಾರೆ. ಸಿದ್ದರಾಮಯ್ಯ ಧರ್ಮ, ಜಾತಿ ಒಡೆಯುವುದರಲ್ಲಿ ನಂಬರ್ 1 ಆಗಿದ್ದಾರೆ. ಈ ಹಿಂದೆ ಲಿಂಗಾಯತ ಧರ್ಮ ಒಡೆಯಲು ಹೋಗಿ ಕಪಾಳ ಮೋಕ್ಷ ತಿಂದಿದ್ದಾರೆ. ಈಗ ಜಾತಿ ಗಣತಿ ವರದಿ ತೋರಿಸಿ ಹಿಂದೂಗಳನ್ನು ಒಡೆಯುತ್ತಿದ್ದಾರೆ. ಮುಸ್ಲಿಂ ಧರ್ಮದಲ್ಲೂ 10 ಜಾತಿಗಳಿವೆ. ಒಂದೂ ಡಿವೈಡ್ ಮಾಡಿಲ್ಲ. ಆದರೆ ಹಿಂದುಗಳನ್ನು ಪೀಸ್ ಪೀಸ್ ಮಾಡಿದ್ದಾರೆ ಎಂದರು.

ಇದೇ ಎಪ್ರಿಲ್ 24 ರಂದು ನಗರದ ಕನಕ ದುರ್ಗಮ್ಮ ದೇವಸ್ಥಾನದಿಂದ ರಾಯಲ್ ವೃತ್ತದ ವರೆಗೆ ನಡೆಯುವ ಬಿಜೆಪಿಯ ಜನಾಕ್ರೋಶ ಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಜನಾಕ್ರೋಶ ಯಾತ್ರೆ ಯಶಸ್ವಿ ಮಾಡುವಂತೆ ಕಾರ್ಯಕರ್ತರಿಗೆ ಸಣ್ಣ ಪಕ್ಕೀರಪ್ಪ ಮನವಿ ಮಾಡಿದರು.

ಬಿಜೆಪಿ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ಬಿಜೆಪಿ ಎಸ್ಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಓಬಳೇಶ್, ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ನಿಗಮದ ಮಾಜಿ ಅಧ್ಯಕ್ಷ ಹನುಮಂತಪ್ಪ, ಕೌಲ್ ಬಜಾರ್ ಮಂಡಲ ಅಧ್ಯಕ್ಷ ವಿ. ನಾಗರಾಜ್ ರೆಡ್ಡಿ, ಮಾಜಿ ಸಚಿವ ಶ್ರೀರಾಮುಲು ಆಪ್ತ ವೆಂಕಟೇಶ್, ಮುಖಂಡರಾದ ಶಂಕರಪ್ಪ, ನೂರ್ ಭಾಷ, ಚೌದ್ರಿ ಶ್ರೀನಿವಾಸ್, ತಿಮಪ್ಪ, ವಿನೋದ್ ಕುಮಾರ್, ಡಾ. ಅರುಣ, ವಿಜಯಲಕ್ಷ್ಮೀ, ಫೋರ್ಟ್ ದುರ್ಗ, ಹೊನ್ನೂರ್ ಸ್ವಾಮಿ, ಬಟ್ಟಿ ಹನುಮಂತ ರಾವ್, ಎರ್ರಸ್ವಾಮಿ, ಕೌಲ್ ಬಜಾರ್ ಮಂಡಲ ಪ್ರಧಾನ ಕಾರ್ಯದರ್ಶಿಗಳಾದ ಅವಿನಾಶ್ ನಾಯ್ಡು, ರಾಜೇಶ್, ಸೇರಿದಂತೆ ಬಿಜೆಪಿಯ ಎಲ್ಲಾ ಮುಖಂಡರು ಕಾರ್ಯಕರ್ತರು ಬಿಜೆಪಿಯ 7 ಮೋರ್ಚಾಗಳ ಅಧ್ಯಕ್ಷರು ಪದಾಧಿಕಾರಿಗಳು ಉಪಸ್ಥಿತರಿದ್ದರು.

## 'ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆದಿದ್ದು ಖಂಡನೀಯ'



ಬೆಂಗಳೂರು : ಬೀದರ್ ಮತ್ತು ಶಿವಮೊಗ್ಗದಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆ ಸಿಇಟಿ ಕೇಂದ್ರದಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಘಟನೆ ತಪ್ಪು ಎಂದು ನಿಖಿಲ್ ಕುಮಾರಸ್ವಾಮಿ ಹೇಳಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಪ್ರತಿ ಜಾತಿ ಧರ್ಮದ ನಂಬಿಕೆ ಗೌರವಿಸುವುದನ್ನು ಕಲಿಯಬೇಕು. ಜನಿವಾರ ಹಾಕಿದ್ದಕ್ಕೆ ಪರೀಕ್ಷೆಗೆ ಕೂರಿಸದೇ ಇರುವುದು ಸರಿಯಲ್ಲ. ಈ ಘಟನೆಯನ್ನು ನಾನು ಖಂಡಿಸುತ್ತೇನೆ. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಸರ್ಕಾರ ಎಚ್ಚರಿಕೆವಹಿಸಬೇಕು ಎಂದು ಎಂದರು.

ಜನಿವಾರ ಹಾಕಿಕೊಂಡು ಕಾಪಿ ಹೊಡೆಯೋಕೆ ಆಗುತ್ತಾ? ಜನಿವಾರದಲ್ಲಿ ಕಾಪಿ ಚೀಟಿ ಇಟ್ಟುಕೊಂಡು ಹೋಗೋಕೆ ಆಗುತ್ತಾ? ಜನಿವಾರ ಇದ್ದರೆ ಏನು ಸಮಸ್ಯೆ? ಸ್ಮಾರ್ಟ್ ವಾಚ್ ಕಟ್ಟಿಕೊಂಡು ಬಂದರೆ ನೀವು ತೆಗೆಸಬೇಕು ಎನ್ನುವುದು ಸರಿ. ಆದರೆ ಜನಿವಾರ ತೆಗೆದು ಒಂದು ಸಮುದಾಯಕ್ಕೆ ಅವಮಾನ ಮಾಡೋದು ಸರಿಯಲ್ಲ. ಈ ಘಟನೆ ಬಗ್ಗೆ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು. ಅವರಿಗೆ ಬುದ್ದಿವಾದ ಹೇಳಬೇಕು. ಮುಂದೆ ಇಂತಹ ಘಟನೆ ಆಗದಂತೆ ಕ್ರಮ ವಹಿಸಬೇಕು ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

# ೮೦೦ ವರ್ಷಗಳ ಹಿಂದೆಯೇ ಮಹಿಳೆ ಸಮಾನತೆ ಸಾರಿದ ಬಸವ ತತ್ವ!

ತುಮಕೂರು: ಕರ್ನಾಟಕ ಸಾಂಸ್ಕೃತಿಕ ನಾಯಕ ವಿಶ್ವ ಗುರು ಬಸವಣ್ಣನವರ ಬದುಕು, ಸಂದೇಶ ಮತ್ತು ಚಿಂತನೆಗಳನ್ನು ಪ್ರಚುರಪಡಿಸುವ ನಿಟ್ಟಿನಲ್ಲಿ ಇದೇ 17ರಿಂದ 29ರವರೆಗೆ ರಾಜ್ಯದಾದ್ಯಂತ ಹಮ್ಮಿಕೊಂಡಿರುವ ಅನುಭವ ಮಂಟಪ– ಬಸವಾದಿ ಶರಣರ ವೈಭವ ರಥಯಾತ್ರೆ ಕಾರ್ಯಕ್ರಮಕ್ಕೆ ಶನಿವಾರ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಚಾಲನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ರಥಯಾತ್ರೆಯನ್ನು ಸ್ವಾಗತಿಸಿ ಮಾತನಾಡಿದ ಅವರು, ಬಾಗಲಕೋಟೆ ಜಿಲ್ಲೆ ಬಸವನ ಬಾಗೇವಾಡಿಯಲ್ಲಿ ಇದೇ 29 ಹಾಗೂ 30ರಂದು ಆಯೋಜಿಸಿರುವ ಅನುಭವ ಮಂಟಪ– ಬಸವಾದಿ ಶರಣರ ವೈಭವ ಕಾರ್ಯಕ್ರಮದ ಅಂಗವಾಗಿ ಈ ರಥಯಾತ್ರೆಯನ್ನು ಆಯೋಜಿಸಲಾಗಿದೆ. ವಿಧಾನಸೌಧದ ಮುಂಭಾಗದಲ್ಲಿ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು 17ರಂದು ರಥಯಾತ್ರೆಗೆ ಚಾಲನೆ ನೀಡಿದ್ದು, ರಥಯಾತ್ರೆಯು ನಾಡಿನಾದ್ಯಂತ ಸಂಚರಿಸಿ ಬಸವಣ್ಣನವರ ಬದುಕು, ಸಂದೇಶ ಮತ್ತು ಚಿಂತನೆಗಳನ್ನು ಪ್ರಚುರಪಡಿಸಲಿದೆ ಎಂದು ತಿಳಿಸಿದರು.

ಇಂದು ಪ್ರಜಾಪ್ರಭುತ್ವದಲ್ಲಿ ಸಮಾನತೆ, ಸ್ವಾತಂತ್ರ್ಯದ ಬಗ್ಗೆ ನಾವೆಲ್ಲಾ ಮಾತನಾಡುತ್ತಿದ್ದೇವೆ. ಆದರೆ ಬಸವಣ್ಣನವರು 12ನೇ ಶತಮಾನದಲ್ಲಿಯೇ ತಮ್ಮ ಅನುಭವ ಮಂಟಪದ ಮೂಲಕ ಮಹಿಳೆಯರು ಸೇರಿದಂತೆ ಎಲ್ಲಾ ಕಾಯಕ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸುವ ಮೂಲಕ ಸಮಾಜದ ಏಳಿಗೆಗಾಗಿ ಹಗಲಿರುಳು ಶ್ರಮಿಸಿದರು. ಸಾಮಾಜಿಕ ತಾರತಮ್ಯ, ಲಿಂಗತಾರತಮ್ಯ, ಮೂಢ ನಂಬಿಕೆಗಳನ್ನು ಹೋಗಲಾಡಿಸಲು 800 ವರ್ಷಗಳ ಹಿಂದೆಯೇ ರಚಿಸಿದ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಬಸವಣ್ಣನವರ ಮಹತ್ವವನ್ನು ನಾಡಿಗೆ ಸಾರಲು ಹೊರಟಿರುವುದು ಶ್ಲಾಘನೀಯ. ನಮ್ಮ ಜಿಲ್ಲೆಯಲ್ಲಿಯೂ ಬಸವಣ್ಣನವರ ವಚನಗಳ ಕುರಿತು ವಿಚಾರ ಸಂಕಿರಣಗಳನ್ನು ಏರ್ಪಡಿಸಲು ಜಿಲ್ಲಾಡಳಿತದಿಂದ ತಯಾರಿ ನಡೆಸಲಾಗುವುದು ಎಂದು ತಿಳಿಸಿದರು.



ನಗರ ಶಾಸಕ ಜಿ.ಬಿ. ಜ್ಯೋತಿಗಣೇಶ್ ಮಾತನಾಡಿ, ಬಸವಣ್ಣನವರ ಜಯಂತಿ ಅಂಗವಾಗಿ ಅವರ ಬದುಕು, ತತ್ವಗಳನ್ನು ಜನತೆಗೆ ತಿಳಿಸಲು ಸರಕಾರ ಕೈಗೊಂಡಿರುವ ಅನುಭವ ಮಂಟಪ– ಬಸವಾದಿ ಶರಣರ ವೈಭವ ರಥಯಾತ್ರೆ ಇಂದು ತುಮಕೂರಿಗೆ ಆಗಮಿಸಿದೆ. ಬಸವಣ್ಣನವರ ವಚನಗಳ ಸಾರವನ್ನು ತಿಳಿದು ನಡೆದರೆ, ಕಲ್ಯಾಣ ರಾಜ್ಯ ಸಾಕಾರಗೊಳ್ಳಲಿದೆ ಎಂದು ತಿಳಿಸಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಕೆ.ಎಸ್. ಸಿದ್ದಲಿಂಗಪ್ಪ ಮಾತನಾಡಿ, ಬಸವಾದಿ ಶರಣರ ಸಂದೇಶಗಳನ್ನು ಸರಕಾರ ನಾಡಿಗೆ ಪಸರಿಸಲು ಹೊರಟಿರುವುದು ಸ್ವಾಗತಾರ್ಹ. ಇದರ ಜೊತೆಗೆ ಶಾಲಾ, ಕಾಲೇಜುಗಳಲ್ಲಿ ಬಸವಣ್ಣನವರ ಬಗ್ಗೆ ವಿಚಾರ ಸಂಕಿರಣ, ಕಾರ್ಯಾಗಾರಗಳನ್ನು ನಡೆಸುವುದರ ಜೊತೆಗೆ, ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಬಸವಭವನ ನಿರ್ಮಾಣ ಮಾಡಬೇಕೆಂಬುದು ಬಹು ಜನರ ಬೇಡಿಕೆಯಾಗಿದೆ. ಸರಕಾರ ಈ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ರೂಪಿಸಬೇಕೆಂಬುದು ಶರಣರ ಒತ್ತಾಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಅಪರ ಜಿಲ್ಲಾಧಿಕಾರಿ ಡಾ. ಎನ್. ತಿಪ್ಪೇಸ್ವಾಮಿ, ತಹಶೀಲ್ದಾರ್ ರಾಜೇಶ್ವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸುರೇಶ್ ಕುಮಾರ್, ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾ ಜಿಲ್ಲಾಧ್ಯಕ್ಷ ಡಾ. ಪರಮೇಶ್, ತುಮಕೂರು ನಗರ ವೀರಶೈವ ಸೇವಾ ಸಮಾಜದ ಅಧ್ಯಕ್ಷ ಜಿ.ಎಸ್. ಚಂದ್ರಮೌಳಿ, ಮುಖಂಡರಾದ ಸದಾಶಿವಯ್ಯ, ಎಂ.ಜಿ. ಸಿದ್ದರಾಮಯ್ಯ, ಡಾ. ಡಿ.ಎನ್. ಯೋಗೀಶ್ವರಪ್ಪ, ಎಸ್. ಕುಮಾರಸ್ವಾಮಿ, ರಾಜಶೇಖರಯ್ಯ, ಶಶಿಧರನ್, ತಕರಾರಿ ಮಹೇಶ್, ಕನ್ನಡ ಪ್ರಕಾಶ, ಶ್ರೀಧರ, ಅನುಸೂಯಮ್ಮ ಹಾಜರಿದ್ದರು.

# ಧಾರ್ಮಿಕ ಆಚರಣೆಗೆ ಅವಮಾನ: ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹ

ಚಿತ್ರದುರ್ಗ: ರಾಜ್ಯದಲ್ಲಿ ಎರಡು ದಿನಗಳ ಕಾಲ ನಡೆಸಿದ ಸಿಇಟಿ ಪರೀಕ್ಷೆಯಲ್ಲಿ ಎರಡು ಕಡೆ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಜನಿವಾರ ತೆಗೆಸಿರುವುದನ್ನು ಖಂಡಿಸಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಹಾಗೂ ಜಿಲ್ಲಾ ಬ್ರಾಹ್ಮಣ ಮಹಾಸಭಾ ವತಿಯಿಂದ ಶನಿವಾರ ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.



ಬೀದರ್‌ನ ಸ್ಥಾಯಿ ಸ್ಫೂರ್ತಿ ಪರೀಕ್ಷಾ ಕೇಂದ್ರ ಹಾಗೂ ಶಿವಮೊಗ್ಗದ ಆದಿಚುಂಚನಗಿರಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ಜನಿವಾರ ತೆಗೆಸಿರುವ ಅಧಿಕಾರಿಗಳು ಧಾರ್ಮಿಕ ಆಚರಣೆಗೆ ಅವಮಾನ ಮಾಡಿದ್ದಾರೆ. ತಪ್ಪಿತಸ್ಥರ ಮೇಲೆ ಕೂಡಲೇ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದರು. ರಾಜ್ಯದಲ್ಲಿ 45 ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಬ್ರಾಹ್ಮಣರಿದ್ದರೂ ಕೇವಲ ಹತ್ತು ಲಕ್ಷ ಎಂದು ಜಾತಿ ಗಣತಿಯಲ್ಲಿ ಲೆಕ್ಕ ತೋರಿಸಿ ಬ್ರಾಹ್ಮಣ ಜನಾಂಗವನ್ನು ನಿರ್ಲಕ್ಷಿಸುತ್ತಿರುವುದು ಮನಸ್ಸಿಗೆ ನೋವುಂಟು ಮಾಡಿದೆ. ಈ ಜಾತಿ ಸಮೀಕ್ಷೆಯನ್ನು ಸರ್ಕಾರ ಪರಿಗಣನೆಗೆ ತೆಗೆದುಕೊಳ್ಳಬಾರದು. ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ಸಂಭವಿಸದಂತೆ ಸರ್ಕಾರ ಎಚ್ಚೆತ್ತುಕೊಳ್ಳುವಂತೆ ಪ್ರತಿಭಟನಾನಿರತರು ಆಗ್ರಹಿಸಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಟಿ.ಕೆ. ನಾಗರಾಜರಾವ್, ಡಾ. ರಾಜೀವಲೋಚನ, ಮಾರುತಿ ಮೋಹನ್, ಸುಭಾಷ್, ನವೀನ್‌ಕುಮಾರ್, ವೆಂಕಟೇಶ್ ದೀಕ್ಷಿತ್, ಲಕ್ಷ್ಮಿ, ಶಶಿರೇಖಾ, ಶೃತಿ, ಪಲ್ಲವಿ, ಮಂಜುನಾಥ್ ಇನ್ನು ಅನೇಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# 'ಜನಿವಾರ ತೆಗೆಸಿ ಕಸದ ಬುಟ್ಟಿಗೆ ಹಾಕಿಸಿರುವುದು ಖಂಡನೀಯ'

ಮಧುಗಿರಿ: ಬ್ರಹ್ಮ ಜ್ಞಾನದ ಸಂಕೇತವಾದ ಜನಿವಾರವನ್ನು ತೆಗೆಸಿ ಕಸದ ಬುಟ್ಟಿಗೆ ಹಾಕಿಸಿರುವುದು ಖಂಡನೀಯ ಎಂದು ಹಿರಿಯ ವಕೀಲ ಪಿ. ದತ್ತಾತ್ರೇಯ ಆರೋಪಿಸಿದ್ದಾರೆ.



ಪಟ್ಟಣದ ಶ್ರೀ ಮಲ್ಲೇಶ್ವರ ಸ್ವಾಮಿ ದೇವಸ್ಥಾನದಿಂದ ಮೆರವಣಿಗೆಯಲ್ಲಿ ಸಾಗಿ ಉಪ ವಿಭಾಗಾಧಿಕಾರಿಗಳ ಕಚೇರಿಯ ಗ್ರೇಡ್– 2 ತಹಶೀಲ್ದಾರ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಶ್ರೀ ಶಂಕರ ಸೇವಾ ಸಮಿತಿ, ಆರ್ಯ ವೈಶ್ಯ ಮಂಡಳಿ ಹಾಗೂ ಸೋಮ ವಂಶ, ಆರ್ಯ ಕ್ಷತ್ರಿಯ ಟ್ರಸ್ಟ್ ವತಿಯಿಂದ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿ, ಸಿಇಟಿ ಪರೀಕ್ಷೆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಅಧಿಕಾರಿಗಳ ಕ್ರಮವನ್ನು ವಿರೋಧಿಸಿದ ಅವರು, ನಮ್ಮ ಸಂವಿಧಾನದ ಪ್ರಕಾರ ಅವರವರ ಧರ್ಮದ ಸಂಪ್ರದಾಯಗಳನ್ನು ಆಚರಿಸಲು ನಿರ್ಬಂಧ ವಿಲ್ಲ, ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ಇದುವರೆಗೂ ಜನಿವಾರಗಳನ್ನು ತೆಗೆಸುತ್ತಿರಲಿಲ್ಲ. ಈ ಬಾರಿ ಜನಿವಾರ ತೆಗೆಸಿರುವುದು ಪೂರ್ವ ನಿಯೋಜಿತವಾಗಿದೆ. ಇಂತಹ ಘಟನೆ ಮರುಕಳಿಸದಂತೆ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸೋಮ ವಂಶ, ಆರ್ಯ ಕ್ಷತ್ರಿಯ ಟ್ರಸ್ಟ್‌ನ ಪ್ರಧಾನ ಕಾರ್ಯದರ್ಶಿ ಜಿ. ನಾರಾಯಣ ರಾಜು ಮಾತನಾಡಿ, ಜನಿವಾರದ ಮಹತ್ವ ತಿಳಿಯದೆ ತೆಗೆಸಿರುವುದು ತಪ್ಪು ಕ್ರಮವಾಗಿದ್ದು, ಇದು ಧಾರ್ಮಿಕ ವಿರೋಧಿ ಕಾರ್ಯವಾಗಿದೆ. ಧಾರ್ಮಿಕ ಭಾವನೆಗೆ ಧಕ್ಕೆ ಉಂಟು ಮಾಡಿರುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ವಿದ್ಯಾರ್ಥಿಗೆ ನ್ಯಾಯ ದೊರಕಿಸಿ ಕೊಡಬೇಕೆಂದು ಒತ್ತಾಯಿಸಿದರು.

ಶ್ರೀ ಶಂಕರ ಸೇವಾ ಸಮಿತಿ ಅಧ್ಯಕ್ಷ ಬಿ.ಆರ್. ಸತ್ಯನಾರಾಯಣ, ಖಜಾಂಚಿ ಕೆ.ಲಕ್ಷ್ಮಿ ಪ್ರಸಾದ್, ವೇ.ಬ್ರ.ಕೆ. ನಾಗರಾಜ ಶಾಸ್ತ್ರೀ, ಪುರಸಭಾ ಸದಸ್ಯ ಕೆ. ನಾರಾಯಣ್, ಹಿರಿಯ ವಕೀಲರಾದ ಎಸ್.ಎ. ಶ್ಯಾಮನಾಥ್, ಡಿ.ವಿ. ಶೇಷಾದ್ರಿ, ಎಚ್.ವಿ. ಮಂಜುನಾಥ್, ಪ್ರಧಾನ ಅರ್ಚಕರುಗಳಾದ ನಟರಾಜ್ ದೀಕ್ಷಿತ್, ಅನಂತಪದ್ಮನಾಭ ಭಟ್ಟರ್, ಸಿದ್ದನಹಳ್ಳಿ ಕಿರಣ್, ಬದ್ರಿ, ಸಂಜೀವ್ ಮೂರ್ತಿ, ಬಿಮೇಶ್, ವರದ, ಶಾರದಾ ಮಹಿಳಾ ಮಂಡಳಿಯ ಪದಾಧಿಕಾರಿಗಳು ಆರ್ಯವೈಶ್ಯ ಮಂಡಳಿ ಅಧ್ಯಕ್ಷ ಉಪಾಧ್ಯಕ್ಷರು ಎ. ರಮೇಶ್ ವಾಸವಿ ಯುವಜನ ಸಂಘದ ಅಧ್ಯಕ್ಷ ಶಶಿರ್, ಆದರ್ಶ್, ತಾತ ಬದ್ರಿನಾಥ್, ಎಂ.ಎಸ್ ರಘುನಾಥ್, ವಾಸವಿ ರವಿ, ಕೃಷ್ಣ, ಕಿಶೋರ್, ತಾತ ಪಾರಥ ಸಾರಥಿ, ಅನಂದ್ ಕೃಷ್ಣ ಮುಂತಾದವರು ಇದ್ದರು.

# ಇಡಿ, ಸಿಬಿಐ ದುರ್ಬಳಕೆ: ಕೆ.ಹೆಚ್. ಮುನಿಯಪ್ಪ ಆರೋಪ

ವಿಜಯಪುರ: ನ್ಯಾಷನಲ್ ಹೆರಾಲ್ಡ್ ಪತ್ರಿಕೆಯ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ಸಂಸದೀಯ ನಾಯಕಿ ಸೋನಿಯಾ ಗಾಂಧಿ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಇಡಿ ಚಾರ್ಟ್‌ಶಿಟ್ ಸಲ್ಲಿಸಿರುವುದು ನೈತಿಕವಾಗಿ ತಪ್ಪಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಸಚಿವ ಕೆ.ಹೆಚ್. ಮುನಿಯಪ್ಪ ಬೇಸರ ವ್ಯಕ್ತಪಡಿಸಿದರು.

ತಮ್ಮ ನಿವಾಸಕ್ಕೆ ಭೇಟಿ ನೀಡಿದ್ದ ವಸತಿ ಸಚಿವ ಬಿ.ಝಡ್. ಜಮೀರ್ ಅಹ್ಮದ್ ಖಾನ್ ಅವರ ಸೌಹಾರ್ದಯುತ ಭೇಟಿಯ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈ ಕುರಿತು ನಮ್ಮ ಪಕ್ಷ ಕಾನೂನು ಪ್ರಕಾರ ಹೋರಾಟ ನಡೆಸಲಿದೆ. ಕೇಂದ್ರ ಸರ್ಕಾರ ಹಾಗೂ ಬಿಜೆಪಿಯ ನಾಯಕರು ನಮ್ಮ ನಾಯಕರ ತೇಜೋವಧೆಗಾಗಿ ಇಲ್ಲಸಲ್ಲದ ಆರೋಪಗಳನ್ನು ಮಾಡಿದ್ದಾರೆ. ನಾವು ಇದಕ್ಕೆ ತೀವ್ರವಾಗಿ ಪ್ರತಿಕ್ರಿಯೆ ನೀಡಲಿದ್ದೇವೆ.

ಇಡಿ, ಸಿಬಿಐ, ಆದಾಯ ತೆರಿಗೆ ಇಲಾಖೆ ಮುಂತಾದ ತನಿಖಾ ಸಂಸ್ಥೆಗಳನ್ನು ಉಪಯೋಗಿಸಿಕೊಂಡು ಕಾಂಗ್ರೆಸ್ ನಾಯಕರಿಗೆ ಕಿರುಕುಳ ನೀಡುವುದು ಕೇಂದ್ರದ ಸಾಮಾನ್ಯ ತಂತ್ರವಾಗಿದೆ. ಇದು ಹಲವು ವರ್ಷಗಳಿಂದಲೂ ನಿರಂತರವಾಗಿ ನಡೆದುಕೊಂಡು ಬರುತ್ತಿದೆ.

ಬಿಜೆಪಿಯ ಕೇಂದ್ರ ನಾಯಕರು ಯಾರೇ ಆದರೂ ತಮ್ಮ ವಿರುದ್ಧ ಮಾತಾಡಿದರೆ, ಅಥವಾ ಬಲಿಷ್ಠ ನಾಯಕರು ಪಕ್ಷ ಸಂಘಟನೆಯತ್ತ ಒಲಿಸುತ್ತಿದ್ದರೆ ಅವರನ್ನು ಟಾರ್ಗೆಟ್ ಮಾಡಿ, ತನಿಖಾ ಸಂಸ್ಥೆಗಳ ಮೂಲಕ ಕ್ರಮ ಕೈಗೊಳ್ಳುವುದು ಸಹಜವಾಗಿ ಬಿಟ್ಟಿದೆ. ನಾವು ಸಂವಿಧಾನ ಚೌಕಟ್ಟಿನೊಳಗೆ ಕಾನೂನಿಗೆ ಗೌರವ ಕೊಡುತ್ತೇವೆ. ಆದರೆ, ಕೇಂದ್ರ ಸರ್ಕಾರದ ಪ್ರಜಾಪ್ರಭುತ್ವ ವಿರೋಧಿ ನಡವಳಿಕೆಗೆ ವಿರುದ್ಧವಾಗಿ ದೊಡ್ಡ ಮಟ್ಟದಲ್ಲಿ ಹೋರಾಟ ಮಾಡಲಿದ್ದೇವೆ ಎಂದರು.

ಜಾತಿ ಗಣತಿ ವಿಚಾರವಾಗಿಯೂ ಮುಂದಿನ ದಿನಗಳಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ಪಡೆದುಕೊಂಡ ನಂತರ ಉತ್ತಮ ಬೆಳವಣಿಗೆಗಳಾಗಲಿವೆ. ಇನ್ನೂ ಅಂತಿಮವಾಗಿಲ್ಲ ಎಂದರು. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಸೇರಿದಂತೆ ಎಲ್ಲಾ ಧರ್ಮಗಳಿಗೂ ಸಂವಿಧಾನಿಕ ಸಮಾನ ಹಕ್ಕುಗಳಿವೆ. ಅದನ್ನು ಆಧಾರವಾಗಿ ಜಾತಿ ಗಣತಿ ವಿಚಾರವನ್ನು ಚರ್ಚೆ ಮಾಡಲಾಗುತ್ತದೆ ಎಂದು ತಿಳಿಸಿದರು.

ಮುಖ್ಯಮಂತ್ರಿಗಳ ಬದಲಾವಣೆಯ ವಿಚಾರದ ಕುರಿತು ಪ್ರತಿಕ್ರಿಯೆ ನೀಡಿದ ಅವರು, ಈಗ ಸಿದ್ದರಾಮಯ್ಯ ಅವರು, ಮುಖ್ಯಮಂತ್ರಿಯಾಗಿದ್ದಾರೆ. ಯಾವುದೇ ಬದಲಾವಣೆಯ ಅವಶ್ಯಕತೆ ಇಲ್ಲ. ಬದಲಾವಣೆ ಮಾಡುವುದರಾದರೆ ಅದು ಎಐಸಿಸಿ ನಾಯಕರ ನಿರ್ಣಯಕ್ಕೆ ಬಿಟ್ಟದ್ದು. ಪರಿಶಿಷ್ಟ ಜಾತಿಯ ಮುಖ್ಯಮಂತ್ರಿ ವಿಚಾರ ಈ ಸಂದರ್ಭದಲ್ಲಿ ಅಪ್ರಸ್ತುತವಾಗಿದೆ ಎಂದರು.

ವಸತಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಮಾತನಾಡಿ, ನನ್ನ ಮತ್ತು ಹಿರಿಯರಾದ ಮುನಿಯಪ್ಪನವರ ಸ್ನೇಹಭಾಂಧವ್ಯ ಹಳೆಯದು, ಅವರನ್ನು ಭೇಟಿಯಾಗಿ ಕ್ಷೇತ್ರದ ಅಭಿವೃದ್ಧಿಯ ಕುರಿತು ಚರ್ಚೆ ಮಾಡಿದ್ದೇವೆ. ಇದು ಸೌಜನ್ಯಯುತವಾದ ಭೇಟಿಯಾಗಿದೆ ಎಂದರು.



# ನಿಡುಮಾಮಿಡೇಸ್ವರಿ, ಕೊಲ್ಲಾಪುರದಮ್ಮ ಜಾತ್ರಾ ಸಂಪನ್ನ

ಚಿತ್ರದುರ್ಗ: ಭೀಮಸಮುದ್ರ ಸಮೀಪವಿರುವ ವಿ. ಪಾಳ್ಯದಲ್ಲಿ ನಿಡುಮಾಮಿಡೇಶ್ವರಿ, ಕೊಲ್ಲಾಪುರದಮ್ಮ, ಆಂಜನೇಯಸ್ವಾಮಿಯ ಜಾತ್ರಾ ಮಹೋತ್ಸವ ಹಾಗೂ ನಾಲ್ಕನೇ ವರ್ಷದ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.



ಬಾಳೆಕಂದು, ಹೊಂಬಾಳೆ, ಮಲ್ಲಿಗೆ, ಸುಗಂಧರಾಜ, ಕನಕಾಂಬರ, ಸೇವಂತಿಗೆ, ಗುಲಾಬಿ, ಹಸಿರು ಪತ್ರೆ, ಬೃಹಧಾಕಾರವಾದ ಹಾರ ಹಾಗೂ ವಿವಿಧ ವರ್ಣಗಳ ಬಾವುಟಗಳಿಂದ ರಥವನ್ನು ಅಲಂಕರಿಸಲಾಗಿತ್ತು.

ನಿಡಮಾಮಿಡೇಶ್ವರಿ, ಆಂಜನೇಯ, ಕೊಲ್ಲಾಪುರದಮ್ಮ, ಕರಿಮಾರಮ್ಮ, ಯಲ್ಲಮ್ಮ, ಕುಕ್ಕುವಾಡೇಶ್ವರಿ, ದುರುಗಮ್ಮ ದೇವರುಗಳನ್ನು ವಿಶೇಷವಾಗಿ ಸಿಂಗರಿಸಿ ರಥದಲ್ಲಿ ಕೂರಿಸಿದ ನಂತರ ನೂರಾರು ಭಕ್ತರು ರಥವನ್ನು ಎಳೆದರು.

ರಥೋತ್ಸವ ವೇಳೆಯಲ್ಲಿ ಜಮಾಯಿಸಿದ್ದ ಭಕ್ತರು ರಥದ ಕಳಸಕ್ಕೆ ಬಾಳೆಹಣ್ಣುಗಳನ್ನು ಎಸೆದು ಹರಕೆ ತೀರಿಸಿಕೊಂಡರು. ರಥೋತ್ಸವಕ್ಕೆ ಆಗಮಿಸಿದ್ದ ಭಕ್ತರಿಗೆ ಅಲ್ಲಲ್ಲಿ ತಂಪಾದ ಮಜ್ಜಿಗೆಯನ್ನು ವಿತರಿಸಲಾಯಿತು.

# 'ಹೆಣ್ಮಕ್ಕಳಿಗೆ 2ಸಾವಿರ ಎಂದೇಳಿ ಗಂಡಸರ ಜೇಬಿಗೆ ಕತ್ತರಿ!'

ಕೋಲಾರ: ಕರ್ನಾಟಕದ ಭೂಪಟದಲ್ಲಿ ಜಿಲ್ಲೆ ಇದೆ ಎಂಬುದನ್ನೇ ರಾಜ್ಯದ ಭ್ರಷ್ಟ ಕಾಂಗ್ರೆಸ್ ಸರ್ಕಾರ ಮರೆತು ಹೋಗಿದೆ. ಜಿಲ್ಲೆಗೆ ನೇಮಕವಾಗಿರುವ ಉಸ್ತುವಾರಿ ಸಚಿವರು ಕೇವಲ ಕೆಡಿಪಿ ಸಭೆ, ಧ್ವಜಾರೋಹಣಕ್ಕೆ ಮಾತ್ರ ಸೀಮಿತರಾಗಿದ್ದಾರೆ ಎಂದು ಜೆಡಿಎಸ್ ರಾಜ್ಯ ಉಪಾಧ್ಯಕ್ಷ ಕೆ.ಬಿ. ಗೋಪಾಲಕೃಷ್ಣ ಟೀಕಿಸಿದ್ದಾರೆ.

ಶನಿವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಜಿಲ್ಲೆಗೆ ನೇಮಕವಾಗಿರುವ ಉಸ್ತುವಾರಿ ಸಚಿವರು ಕೇವಲ ರಾಷ್ಟ್ರೀಯ ಹಬ್ಬಗಳಿಗೆ ಬಂದು ಪೋಸ್ ನೀಡಿ ಧ್ವಜಾರೋಹಣ ಮಾಡಿ ಸುದ್ದಿಗೋಷ್ಠಿ ನಡೆಸಿ ಒಂದೆರಡು ಮಾತು ಹೇಳಿ ಹೋದರೆ ಅವರ ಕೆಲಸ ಮುಗಿತು ಎಂದು ವ್ಯಂಗ್ಯವಾಡಿದ್ದಾರೆ.

ಹಾಲಿನ ಪ್ರೋತ್ಸಾಹಧನ ರೈತರಿಗೆ ತಲುಪಿಲ್ಲ: ಹೆಣ್ಣು ಮಕ್ಕಳಿಗೆ 2 ಸಾವಿರ ರೂ. ನೀಡುವುದಾಗಿ ಹೇಳಿ ನಾಲ್ಕು ತಿಂಗಳಿಗೊಮ್ಮೆ ಹಣ ಹಾಕು ನಾವೇನೋ ಮಾಡಿದ್ದೇವೆ ಎಂದು ಬೀಗುವ ಕಾಂಗ್ರೆಸ್ ಸರ್ಕಾರದ ಸಚಿವರುಗಳು, ಹಾಲಿನ ದರ, ಪ್ರಯಾಣದರ, ಮುದ್ರಾಂಕ ಶುಲ್ಕ ದುಪ್ಪಟ್ಟು ಏರಿಕೆ ಮಾಡಿ ಗಂಡಸರ ಜೇಬಿಗೆ ಕತ್ತರಿ ಹಾಕಿ ಲೂಟಿ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.

ಹಾಲಿನ ದರ ಏರಿಕೆಯಾದರೂ ರೈತರಿಗೆ ಸಿಗಬೇಕಾದ ಹಾಲಿನ ಪ್ರೋತ್ಸಾಹಧನ ರೈತರ ಖಾತೆಗೆ ಜಮಾ ಆಗಲಿಲ್ಲ, ಜನರಿಗೆ ತೆರಿಗೆ ದುಪ್ಪಟ್ಟು ಏರಿಕೆ ಮಾಡಿ ಸಂಗ್ರಹಿಸಿದ್ದೆಲ್ಲಾ ಎಲ್ಲಿಗೆ ಹೋಗುತ್ತಿದೆ ಎಂದು ಪ್ರಶ್ನಿಸಿರುವ ಅವರು, ಅನ್ನ ನೀಡುವ ರೈತರಿಗೆ ದ್ರೋಹ ಮಾಡಿದ ಯಾವ ಸರ್ಕಾರವೂ ಉಳಿಯಲ್ಲ ಎಂದು ಎಚ್ಚರಿಸಿದರು.

ಗಡಿ ಜಿಲ್ಲೆಯಾದ ಕೋಲಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಕಣಕ್ಕಿಳಿಯುವುದಾಗಿ ನಾಟಕವಾಡಿ ಕೊನೆ ಘಳಿಗೆಯಲ್ಲಿ ಕೊತ್ತೂರು ಮಂಜುನಾಥ್‌ರನ್ನು ಶಾಸಕರಾಗಿಸಿದರು ಆದರೆ ಅವರು ಕೇವಲ ಗುದ್ದಲಿ ಪೂಜೆಗೆ ಸೀಮಿತರಾಗಿದ್ದು, ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ ಎಂದು ಲೇವಡಿ ಮಾಡಿದರು.

ವಿಧಾನಸಭಾ ಚುನಾವಣೆಗೆ ಮುನ್ನಾ ಕೋಲಾರ ಜಿಲ್ಲೆಯ ಜನತೆಗೆ ನೀಡಿದ ಒಂದೇ ಒಂದು ಭರವಸೆಯನ್ನೂ ಈ ಸರ್ಕಾರ ಈಡೇರಿಸಿಲ್ಲ ಎಂದು ಟೀಕಿಸಿದರು.

ಮತ ನೀಡಿದ ಜನತೆಗೆ ದ್ರೋಹ ಮಾಡಿರುವ ಈ ಸರ್ಕಾರದ ನಡೆಯಿಂದಾಗಿ ಕೋಲಾರ 20 ವರ್ಷಗಳಷ್ಟು ಹಿನ್ನಡೆ ಅನುಭವಿಸುವಂತಾಗಿದೆ. ಕೆಸಿ ವ್ಯಾಲಿ ಕೊಳಚೆನೀರು ಹರಿಸಿ ಎತ್ತಿನ ಹೊಳೆಯನ್ನು ಬೇರೆ ಜಿಲ್ಲೆಗಳಿಗೆ ಹರಿಸಿದ್ದಾರೆ ಎಂದು ಟೀಕಿಸಿದರು.

ಯುವನಿಧಿ ನೀಡಿಕೆ ಶ್ವೇತಪತ್ರಕ್ಕೆ ಆಗ್ರಹ: ಗ್ಯಾರಂಟಿಗಳ ಜಾರಿಯಲ್ಲೂ ಹಿನ್ನಡೆ ಅನುಭವಿಸಿರುವ ಈ ಸರ್ಕಾರ ಯುವನಿಧಿ ಹೆಸರಲ್ಲಿ ಯುವಕರಿಗೆ ನೆರವಾಗುವುದಾಗಿ ಹೇಳಿದ್ದು, ಎಷ್ಟು ಜನ ಯುವಕರಿಗೆ ಇವರ ಗ್ಯಾರಂಟಿ ತಲುಪಿದೆ ಎಂದು ಶ್ವೇಪತ್ರ ಹೊರಡಿಸಲಿ ಎಂದು ಆಗ್ರಹಿಸಿದರು.

ಬಸ್ ಪ್ರಯಾಣದರ ಮಹಿಳೆಯರಿಗೆ ಉಚಿತ ಎಂದು ಹೇಳಿ ದುಪ್ಪಟ್ಟು ಬೆಲೆ ಏರಿಸಿ ಪುರುಷರಿಂದ ವಸೂಲಿ ಮಾಡುತ್ತಿದ್ದಾರೆ. ಇದೀಗ ಉಚಿತ ಪ್ರಯಾಣ ಎಂದು ತಿಳಿಸಿ ಮಹಿಳೆಯರಿಗೆ ಸ್ಮಾರ್ಟ್‌ಕಾರ್ಡ್ ನೀಡುವ ಆಲೋಚನೆ ಮಾಡಿದ್ದಾರಂತೆ. ಗ್ರಾಮೀಣ ಬಡ ಮಹಿಳೆಯರು ಆ ಕಾರ್ಡ್ ಎಷ್ಟು ಮಂದಿ ಮಾಡಿಸಿಕೊಳ್ಳಲು ಸಾಧ್ಯ ಎಂದು ಪ್ರಶ್ನಿಸಿದರು.

ಚುನಾವಣೆಗೆ ಮುನ್ನಾ ಕೆಸಿ ವ್ಯಾಲಿ ಮೂರನೇ ಹಂತದ ಶುದ್ಧೀಕರಣದ ಕುರಿತು ಉದ್ದೂದ್ದ ಭಾಷಣ ಮಾಡಿದ್ದ ಕಾಂಗ್ರೆಸ್ ಮುಖಂಡರು ಈಗ ಎಲ್ಲಿ ಮರೆಯಾಗಿದ್ದಾರೆ ಎಂದು ಪ್ರಶ್ನಿಸಿರುವ ಅವರು, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಎತ್ತಿನಹೊಳೆ ನೀರು ಎಂದು ಯೋಜನೆ ಆರಂಭಿಸಿ ಇದೀಗ ಈ ಎರಡು ಜಿಲ್ಲೆಯ ಜನರನ್ನು ವಂಚಿಸಿ ಬೇರೆ ಜಿಲ್ಲೆಗಳಿಗೆ ಹರಿಸಿದ್ದಾರೂ, ಸ್ಥಳೀಯ ಶಾಸಕರು, ಉಸ್ತುವಾರಿ ಸಚಿವರು ಈ ಬಗ್ಗೆ ತುಟಿ ಬಿಚ್ಚಿಲ್ಲ ಎಂದು ಲೇವಡಿ ಮಾಡಿದ್ದಾರೆ. ಕೋಲಾರ ಜಿಲ್ಲೆಯ ರೈತರು ಬೆಳೆ ನಾಶದಿಂದಾಗಿ ಕಂಗೆಟ್ಟಿದ್ದಾರೆ ಅವರ ನೆರವಿಗೆ ಬರುವ ಆಲೋಚನೆಯೂ ಈ ಸರ್ಕಾರ ಮಾಡಿಲ್ಲ, ಜಿಲ್ಲೆಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳಿಗೆ ಹಣವಿಲ್ಲ ಎಂದು ಅಧಿಕಾರಿಗಳೇ ಹೇಳುತ್ತಿದ್ದಾರೆ. ಯಾವ ಇಲಾಖೆಯಿಂದಲೂ ಹೊಸ ಕಾರ್ಯಕ್ರಮ ಜಾರಿಗೆ ಬರುತ್ತಿಲ್ಲ ಬಡವರಿಗೆ ಒಂದೇ ಒಂದು ಮನೆ ನೀಡಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಬಡಜನತೆಗೆ ಒಂದೇ ಒಂದು ಮನೆ ಕೊಟ್ಟಿರುವ ನಿದರ್ಶನವಿಲ್ಲ, ವಸತಿ ಯೋಜನೆಗಳು ಬಂದ್ ಆಗಿದ್ದು, ಮನೆ, ನಿವೇಶನವಿಲ್ಲದ ಬಡವರು ಸಂಕಷ್ಟ ಅನುಭವಿಸುತ್ತಿದ್ದಾರೆ. ಕೂಡಲೇ ಸರ್ಕಾರ ಬಡವರ ನೆರವಿಗೆ ಬರಬೇಕು ಎಂದು ಒತ್ತಾಯಿಸಿದರು.

ಶಾಲೆಗಳ ದುಸ್ಥಿತಿಯಂತೂ ದೇವರಿಗೆ ಪ್ರೀತಿ, ಸರ್ಕಾರಿ ಶಾಲೆಗಳ ದುರಸ್ಥಿಗೆ ಹಣವಿಲ್ಲ, ಶಿಕ್ಷಕರ ಕೊರತೆ ಕಾಡುತ್ತಿದ್ದರೂ ನೇಮಕಾತಿ ಪ್ರಯತ್ನವೂ ನಡೆದಿಲ್ಲ. ಸರ್ಕಾರಿ ಶಾಲೆಗಳನ್ನು ಮುಚ್ಚಿ ಖಾಸಗಿಯವರ ನೆರವಿಗೆ ಸರ್ಕಾರ ಮುಂದಾಗಿದೆಯೇ ಎಂಬ ಅನುಮಾನ ಕಾಡುತ್ತಿದೆ ಎಂದು ತಿಳಿಸಿದರು.

# 51.25 ಕೋಟಿ ರೂ. ಮೌಲ್ಯದ ಅಕ್ರಮ ಒತ್ತುವರಿ ತೆರವು

ಬೆಂಗಳೂರು: ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಒತ್ತುವರಿಯಾಗಿರುವ ರೂ. 51.25 ಕೋಟಿ ಅಂದಾಜು ಮೌಲ್ಯದ ಒಟ್ಟು 13 ಎಕರೆ 0.26 ಗುಂಟೆ ಸರ್ಕಾರಿ ಜಮೀನನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳಾದ ಜಿ. ಜಗದೀಶ ನೇತೃತ್ವದಲ್ಲಿ ತೆರವುಗೊಳಿಸಿ ವಶಕ್ಕೆ ಪಡೆಯಲಾಯಿತು.

ಶನಿವಾರ ಬೆಂಗಳೂರು ನಗರ ಜಿಲ್ಲೆಯಾದ್ಯಂತ ವಿವಿಧ ತಾಲ್ಲೂಕುಗಳ ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಒತ್ತುವರಿಯಾಗಿದ್ದ ಗೋಮಾಳ, ಹದ್ದುಗಿಡದಹಳ್ಳ, ಮುಫತ್ ಕಾವಲ್, ಸರ್ಕಾರಿ ಕುಂಟೆ, ಶ್ರೀಬಸವಣ್ಣ ದೇವರ ಇನಾಂ, ಗುಂಡು ತೋಪು, ಸರ್ಕಾರಿ ಬೀಳು, ಸರ್ಕಾರಿ ಖರಾಬು ಜಾಗಗಳಿಗೆ ಭೇಟಿ ನೀಡಿ ತೆರವು ಕಾರ್ಯಾಚರಣೆ ಕೈಗೊಂಡರು.



ಬೆಂಗಳೂರು ಪೂರ್ವ ತಾಲ್ಲೂಕಿನ ಕೆ.ಆರ್.ಪುರ ಹೋಬಳಿಯ ಹಗದೂರು ಗ್ರಾಮದ ಸ.ನಂ 159ರ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 1 ಎಕರೆಯಾಗಿದ್ದು, ಅಂದಾಜು ಮೌಲ್ಯ ರೂ. 10 ಕೋಟಿಗಳಾಗಿರುತ್ತದೆ. ಬಿದರಹಳ್ಳಿ ಹೋಬಳಿಯ ಶೀಗೆಹಳ್ಳಿ ಗ್ರಾಮದ ಸ.ನಂ: 30, 31 ಮತ್ತು 45ರ ಹದ್ದುಗಿಡದಹಳ್ಳ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.05 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.50 ಕೋಟಿಗಳಾಗಿರುತ್ತದೆ. ಬಿದರಹಳ್ಳಿ ಹೋಬಳಿಯ ಕಿತ್ತಗನೂರು ಗ್ರಾಮದ ಸ.ನಂ: 165ರ ಮುಫತ್ ಕಾವಲ್ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.10 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.70 ಕೋಟಿಗಳಾಗಿರುತ್ತದೆ. ವರ್ತೂರು ಹೋಬಳಿಯ ಕೈಕೊಂಡ್ರಹಳ್ಳಿ ಗ್ರಾಮದ ಸ.ನಂ: 6ರ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.01 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.20 ಕೋಟಿಗಳಾಗಿರುತ್ತದೆ.


ಆನೇಕಲ್ ತಾಲ್ಲೂಕಿನ ಕಸಬಾ– 1 ಹೋಬಳಿಯ ಮೆಣಸಿಗನಹಳ್ಳಿ ಗ್ರಾಮದ ಸ.ನಂ 111ರ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.20 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.30 ಕೋಟಿಗಳಾಗಿರುತ್ತದೆ. ಅತ್ತಿಬೆಲೆ– 1 ಹೋಬಳಿಯ ಹಳೇಹಳ್ಳಿ ಗ್ರಾಮದ ಸ.ನಂ 52ರ ಸರ್ಕಾರಿ ಕುಂಟೆ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.04 ಗುಂಟೆಗಳಾಗಿದ್ದು,ಅಂದಾಜು ಮೌಲ್ಯ ರೂ. 0.05 ಕೋಟಿಗಳಾಗಿರುತ್ತದೆ. ಸರ್ಜಾಪುರ– 2 ಹೋಬಳಿಯ ಮುತ್ತಾನಲ್ಲೂರು ಗ್ರಾಮದ ಸ.ನಂ 132, 129, 128, 127, 124, 117 ಮತ್ತು 118 ಖರಾಬು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.05 ಗುಂಟೆಗಳಾಗಿದ್ದು, ಅಂದಾಜು ಮೌಲ್ಯ ರೂ. 0.13 ಕೋಟಿಗಳಾಗಿರುತ್ತದೆ. ಸರ್ಜಾಪುರ– 3 ಹೋಬಳಿಯ ನರಿಗಾ ಗ್ರಾಮದ ಸ.ನಂ 211ರ ಖರಾಬು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.10 ಗುಂಟೆಗಳಾಗಿದ್ದು, ಅಂದಾಜು ಮೌಲ್ಯ ರೂ. 0.15 ಕೋಟಿಗಳಾಗಿರುತ್ತದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ತಾವರೆಕೆರೆ ಹೋಬಳಿಯ ಮಾದಾಪಟ್ಟಣ ಗ್ರಾಮದ ಸ.ನಂ 32ರ ಶ್ರೀಬಸವಣ್ಣ ದೇವರ ಇನಾಂ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.08 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 2.40 ಕೋಟಿಗಳಾಗಿರುತ್ತದೆ. ಬೇಗೂರು ಹೋಬಳಿಯ ಮೈಲಸಂದ್ರ ಗ್ರಾಮದ ಸ.ನಂ 21ರ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.01 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.30 ಕೋಟಿಗಳಾಗಿರುತ್ತದೆ. ಉತ್ತರಹಳ್ಳಿ ಹೋಬಳಿಯ ರಾವುಗೋಡ್ಲು ಗ್ರಾಮದ ಸ.ನಂ 8ರ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.18 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.70 ಕೋಟಿಗಳಾಗಿರುತ್ತದೆ. ಕೆಂಗೇರಿ ಹೋಬಳಿಯ ಕಂಬೀಪುರ ಗ್ರಾಮದ ಸ.ನಂ 151ರ ಖರಾಬು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.21ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 1 ಕೋಟಿಗಳಾಗಿರುತ್ತದೆ.

ಯಲಹಂಕ ತಾಲ್ಲೂಕಿನ ಜಾಲ– 3 ಹೋಬಳಿಯ ಬಿ.ಕೆ. ಅಮಾನಿಕರೆ ಗ್ರಾಮದ ಸ.ನಂ 2ರ ಸರ್ಕಾರಿ ಬೀಳು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 1ಎಕರೆ 0.07 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 5.00 ಕೋಟಿಗಳಾಗಿರುತ್ತದೆ. ಜಾಲ– 1 ಹೋಬಳಿಯ ಹುತ್ತನಹಳ್ಳಿ ಗ್ರಾಮದ ಸ.ನಂ. 73ರ ಒಟ್ಟು ಒತ್ತುವರಿ ತೆರವುಗೊಳಿಸಿರುವ 1 ಎಕರೆಯಾಗಿದ್ದು, ಅಂದಾಜು ಮೌಲ್ಯ ರೂ. 2.20 ಕೋಟಿಗಳಾಗಿರುತ್ತದೆ. ಹೆಸರುಘಟ್ಟ–2 ಹೋಬಳಿಯ ಕಾಮಾಕ್ಷಿಪುರ ಗ್ರಾಮದ ಸ.ನಂ. 10ರ ಗುಂಡು ತೋಪು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.15 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 1.25 ಕೋಟಿಗಳಾಗಿರುತ್ತದೆ.

ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ಕಡಬಗೆರೆ ಗ್ರಾಮದ ಸ.ನಂ 22ರ ಸರ್ಕಾರಿ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.30 ಗುಂಟೆಗಳಾಗಿದ್ದು, ಅಂದಾಜು ಮೌಲ್ಯ ರೂ. 3 ಕೋಟಿಗಳಾಗಿರುತ್ತದೆ. ದಾಸನಪುರ ಹೋಬಳಿಯ ಕದರನಹಳ್ಳಿ ಗ್ರಾಮದ ಸ.ನಂ 38 ಸರ್ಕಾರಿ ಗೋಮಾಳ ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 3 ಎಕರೆ 0.36 ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ 20.00 ಕೋಟಿಗಳಾಗಿರುತ್ತದೆ. ದಾಸನಪುರ ಹೋಬಳಿಯ ಕುಕ್ಕನಹಳ್ಳಿ ಗ್ರಾಮದ ಸ.ನಂ 40ರ ಸರ್ಕಾರಿ ಬೀಳು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 1 ಎಕರೆ 0.12ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 1.50 ಕೋಟಿಗಳಾಗಿರುತ್ತದೆ. ದಾಸನಪುರ ಹೋಬಳಿಯ ಕುಕ್ಕನಹಳ್ಳಿ ಗ್ರಾಮದ ಸ.ನಂ 51ರ ಸರ್ಕಾರಿ ಬೀಳು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 1 ಎಕರೆ 0.15ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 1.50 ಕೋಟಿಗಳಾಗಿರುತ್ತದೆ. ದಾಸನಪುರ ಹೋಬಳಿಯ ಗಟ್ಟಿಸಿದ್ದನಹಳ್ಳಿ ಗ್ರಾಮದ ಸ.ನಂ 16ರ ಸರ್ಕಾರಿ ಖರಾಬು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.05ಗುಂಟೆಗಳಾಗಿದ್ದು ಅಂದಾಜು ಮೌಲ್ಯ ರೂ. 0.25 ಕೋಟಿಗಳಾಗಿರುತ್ತದೆ. ದಾಸನಪುರ ಹೋಬಳಿಯ ಗಟ್ಟಿಸಿದ್ದನಹಳ್ಳಿ ಗ್ರಾಮದ ಸ.ನಂ 17ರ ಸರ್ಕಾರಿ ಖರಾಬು ಒಟ್ಟು ಒತ್ತುವರಿ ತೆರವುಗೊಳಿಸಿರುವ ವಿಸ್ತೀರ್ಣ 0.03ಗುಂಟೆಗಳಾಗಿದ್ದು, ಅಂದಾಜು ಮೌಲ್ಯ ರೂ. 0.12 ಕೋಟಿಗಳಾಗಿರುತ್ತದೆ. ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯ ಸಹಾಯಕರು ಮತ್ತು ಬೆಂಗಳೂರು ನಗರ ಜಿಲ್ಲೆಯ ವಿವಿಧ ತಾಲ್ಲೂಕಿನ ತಹಶೀಲ್ದಾರ್ ಉಪಸ್ಥಿತರಿದ್ದರು.

## ಮೇ. 2ಕ್ಕೆ ಶಂಕರಾಚಾರ್ಯರ ಜಯಂತಿ



ಕೋಲಾರ : ಶೃಂಗೇರಿ ಶ್ರೀದಕ್ಷಿಣಾಮ್ನಾಯ ಶ್ರೀಶಾರದಾ ಪೀಠದ ಉಭಯ ಜಗದ್ಗುರುಗಳ ದಿವ್ಯ ಆಶೀರ್ವಾದದಿಂದ ಸನಾತನ ಧರ್ಮದ ಉದ್ಧಾರಕರೂ, ವೈದಿಕಮಾರ್ಗ ಪ್ರವರ್ತಕರೂ, ಚತುರಾಮ್ನಾಯ ಪೀಠಗಳ ಸ್ಥಾಪಕರೂ ಪ್ರಾತಃ ಸ್ಮರಣೀಯರೂ ಆದ ಶ್ರೀ ಆದಿ ಶಂಕರ ಭಗವತ್ಪಾದಾಚಾರ್ಯರ ಜಯಂತಿ ಮಹೋತ್ಸವವನ್ನು ಮೇ.2 ರಿಂದ ಮೇ.7 ರವರೆಗೂ ನಗರದ ಕೋಟೆಯ ಶೃಂಗೇರಿ ಶಂಕರಮಠದಲ್ಲಿ ಹಮ್ಮಿಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ಜಗದ್ಗುರುಗಳ ಪ್ರೀತ್ಯರ್ಥವಾಗಿ ಹೊನ್ನಾವರ ತಾಲ್ಲೂಕಿನ ಹಿರೇಮಕ್ಕಿಯ ವೇದಬ್ರಹ್ಮಶ್ರೀ ನಾಗರಾಜ ನಾರಾಯಣ ಭಟ್ಟರಿಂದ ಸಮಗ್ರ ಸಾಮವೇದ ಪಾರಾಯಣ ಆಯೋಜಿಸಲಾಗಿದೆ. ಶ್ರೀಶಂಕರ ಜಯಂತಿಯ ಕಾರ್ಯಕ್ರಮಗಳ ದಿನಗಳಂದು ಬೆಳಗ್ಗೆ ವೇದ, ಶಾಸ್ತ್ರ, ಸ್ತೋತ್ರ, ಶ್ರೀಶಾಂಕ ಭಾಷ್ಯ, ಭಗವದ್ಗೀತಾ ಪಾರಾಯಣಗಳು ನಡೆಯಲಿವೆ.

ಮಕರ ಸಂಕ್ರಾಂತಿಯಂದು ಆರಂಭಗೊಂಡ ನಮಃ ಶಂಕರಾಯ ಜಪಯಜ್ಞದ ಸಂಖ್ಯೆಯನ್ನು ಶ್ರೀಗುರುಪಾದಗಳಲ್ಲಿ ಸಮರ್ಪಿಸಿ ಮಹಾಮಂಗಳವನ್ನು ಆಚರಿಸಲಾಗುತ್ತದೆ ಎಂದು ತಿಳಿಸಿದ್ದಾರೆ.

ನಿತ್ಯವೂ ಸಾಂಸ್ಕೃತಿಕ ಕಾರ್ಯಕ್ರಮಗಳು: ಸಾಂಸ್ಕೃತಿಕ ಕಾರ್ಯಕ್ರಮಗಳ ಅಂಗವಾಗಿ ಶಂಕರಜಯಂತಿ ಮಹೋತ್ಸವದ ಕಾರ್ಯಕ್ರಮದ ದಿನಗಳಂದು ಸಂಜೆ 5.30ರಿಂದ ವಿವಿಧ ಭಕ್ತ ಮಂಡಳಿಗಳಿಂದ ಶ್ರೀಶಾಂಕರ ಸ್ತೋತ್ರ ಗಾಯನ ಮತ್ತು 6.30ರಿಂದ ಉಪನ್ಯಾಸ ಕಾರ್ಯಕ್ರಮಗಳು ಜರುಗಲಿವೆ. ಮೇ. 2ರಂದು ತುಮಕೂರಿನ ಶ್ರೀರಾಮಕೃಷ್ಣಾಶ್ರಮದ ಪೂಜ್ಯಶ್ರೀ ವಿರೇಶಾನಂದರಿಂದ ಮಾನವ ವಿಕಾಸದ ವಾರಿಧಿಯಲ್ಲಿ ಶ್ರೀಶಂಕರ ಭಗವತ್ಪಾದರ ವಿಚಾರ ಶ್ರೇಷ್ಠತೆ ಕುರಿತಾಗಿ ಉಪನ್ಯಾಸ ನಡೆಯಲಿದೆ.

ಮೇ. 3ಶನಿವಾರದಂದು ಕಗ್ಗದ ಭಟ್ಟರು ಎಂದೇ ಖ್ಯಾತರಾದ ಹೆಚ್. ಲಕ್ಷ್ಮಿನಾರಾಯಣ ಭಟ್ಟರಿಂದ ಕಗ್ಗದಲ್ಲಿ ಅದ್ವೈತ, ಮೇ. 4ರ ಭಾನುವಾರದಂದು ಸೂಲಿಬೆಲೆ ಚಕ್ರವರ್ತಿಯವರು ಅಖಂಡ ಭಾರತದ ರೂಪವೇ ಶ್ರೀಶಂಕರಾಚಾರ್ಯರು ಕುರಿತಾಗಿ ಮಾತನಾಡಲಿದ್ದಾರೆ ಎಂದು ತಿಳಿಸಿದ್ದಾರೆ. ಮೇ 5ರಂದು ವಿದ್ವಾನ್ ನಾಗಚೇತನ ಸನಾತನ ಧರ್ಮದ ಉದ್ಧಾರಕರು ಮತ್ತು ಶೃಂಗೇರಿ ಶ್ರೀಗುರುಪರಂಪರೆ ಮೇ. 6ರಂದು ವಿದ್ವಾನ್ ಪ್ರಮೋದ ನಟರಾಜ್‌ರಿಂದ ಸರ್ವರಿಗೂ ವೇದಾಂತದ ಅವಶ್ಯಕತೆ (ಭಜಗೋವಿಂದಮ್ ಗ್ರಂಥ ಆಧರಿತ) ಮತ್ತು ಮೇ. 7 ರಂದು ರಾಮಕೃಷ್ಣ ಭಟ್ಟರಿಂದ ಸಾಮವೇದ ಪರಿಚಯದ ಉಪನ್ಯಾಸಗಳು ನಡೆಯಲಿವೆ. ಮೇ. 2ರ ಶುಕ್ರವಾರದ ಶಂಕರಪಂಚಮಿಯಂದು ವಿಶೇವಾದ ರಥೋತ್ಸವ ಕಾರ್ಯಕ್ರಮವು ನಗರದ ರಾಜಬೀದಿಗಳಲ್ಲಿ ವೇದ– ನಾದ ಸ್ವರಗಳೊಂದಿಗೆ ಮತ್ತು ಶ್ರೀಶಂಕರರ ಛದ್ಮವೇಷ ತೊಟ್ಟ ಚಿಣ್ಣರೊಂದಿಗೆ ಸಾಗಿಬರಲಿದೆ ಎಂದು ಹೇಳಿದರು.

ಸಮಾಜದ ಎಲ್ಲ ಸನಾತನ ಧರ್ಮದ ಅನುಯಾಯಿಗಳು ಈ ಕಾರ್ಯಕ್ರಮಗಳಲ್ಲಿ ತಪ್ಪದೇ ಭಾಗವಹಿಸಿ, ಯಶಸ್ವಿಗೊಳಿಸಲು ಅಧ್ಯಕ್ಷ ಡಾ. ಎಮ್.ವಿ. ಜಯರಾಮ್ ಮತ್ತು ಧರ್ಮಾಧಿಕಾರಿ ಜೆ.ಎನ್. ರಾಮಕೃಷ್ಣ ಕೋರಿದ್ದಾರೆ.

## ಬ್ರಾಹ್ಮಣ ಸಂಘದಿಂದ ಸಾಮೂಹಿಕ ಧರ್ಮೋಪನಯನ

ಕೋಲಾರ: ನಗರದ ಬ್ರಾಹ್ಮಣ ಸಂಘದಿಂದ ಸ್ವಸ್ತಿ ಶ್ರೀವಿಶ್ವಾವಸು ಜ್ಯೇಷ್ಠ ಶುಕ್ಲಷಷ್ಠೀ, ಜೂ. 1ರ ಅಪರಾಹ್ನ 11.50ರಿಂದ 12.20ರೊಳಗೆ ಸಲ್ಲುವ ಅಭಿಜಿನ್ ಲಗ್ನದಲ್ಲಿ ಸಾಮೂಹಿಕ ಧರ್ಮೋಪನಯನ ನಡೆಸಲು ನಿಶ್ಚಯಿಸಲಾಗಿದ್ದು, ತ್ರಿಮತಸ್ಥ ವಿಪ್ರ ಬಾಂಧವರೂ ಇದರ ಸದುಪಯೋಗ ಪಡೆಯಲು ಬ್ರಾಹ್ಮಣ ಸಂಘದ ಪದಾಧಿಕಾರಿಗಳ ಪರವಾಗಿ ಕಾರ್ಯದರ್ಶಿ ಜೆ. ಎನ್. ರಾಮಕೃಷ್ಣ ಕೋರಿದ್ದಾರೆ.

ಉಪನಯನ ಮಾಡಿಸಲು ಇಚ್ಛಿಸುವವರು ಮೇ. 20ರೊಳಗೆ ಎನ್.ಎ. ಶ್ರೀನಿಧಿ– 8892713071 ಸಂಖ್ಯೆಗೆ ವಾಟ್ಸಫ್ ಮೂಲಕ ಉಪನಯನದ ಅಭ್ಯರ್ಥಿಯ ಹೆಸರು, ತಂದೆಯ ಹೆಸರು, ಗೋತ್ರ, ಸೂತ್ರ, ಶಾಖೆ, ವೇದ, ಜನ್ಮದಿನಾಂಕ ಮತ್ತು ವಿಳಾಸಗಳನ್ನು ಕಳುಹಿಸಲು ಸೂಚಿಸಿದೆ. ಮಾಹಿತಿಗಾಗಿ ಜಿ.ಎಸ್. ಜಯತೀರ್ಥ– 8095954117, ಜೆ. ಎನ್. ರಾಮಕೃಷ್ಣ– 9731040800, ರಂಗನಾಥ್ ರಾವ್– 9972796578 ಇವರನ್ನು ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

## ಸಂತೋಷ್ ಕುಮಾರ್‌ಗೆ ವಿಶ್ವದಾಖಲೆ ಗೌರವ



ನವದೆಹಲಿ: ಇತ್ತೀಚೆಗೆ ನವದೆಹಲಿಯ ರಿಯಾಲಿಟಿ ಬುಕ್ ಆಫ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯು ಬೆಂಗಳೂರು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ದಾವಣಗೆರೆ ಜಿಲ್ಲೆಯ ಖ್ಯಾತ ಮನೋವೈದ್ಯಕೀಯ ಸಾಮಾಜಿಕ ಕಾರ್ಯಕರ್ತ ಸಂತೋಷ್ ಕುಮಾರ್ .ಎಂ ಅವರಿಗೆ ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ಸಲ್ಲಿಸಿದ ಅತ್ಯುನ್ನತ ಸೇವೆಗಾಗಿ ವಿಶ್ವ ದಾಖಲೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಂತೋಷ್ ಕುಮಾರ್ ಎಂ ಅವರು ಕಳೆದ 9 ವರ್ಷಗಳಿಂದ ದಾವಣಗೆರೆ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಸಮುದಾಯದ ಮಟ್ಟದಲ್ಲಿ ಮಾನಸಿಕ ಆರೋಗ್ಯ ಜಾಗೃತಿ, ತರಬೇತಿ ಕಾರ್ಯಕ್ರಮಗಳು, ಮನೋರೋಗಿಗಳಿಗೆ ಚಿಕಿತ್ಸೆ, ಮನೋವೈದ್ಯಕೀಯ ಶಿಕ್ಷಣ, ಆಪ್ತ ಸಮಾಲೋಚನೆ, ಮನೆ ಬೇಟಿ ಕಾರ್ಯಕ್ರಮ, ಮಾಸಾಶನ, ಹಾಗೂ ಬೀದಿ ಬದಿಯ ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

ಕೊವಿಡ್ ಸಮಯದಲ್ಲಿ 2,000ಕ್ಕೂ ಹೆಚ್ಚು ಮಾನಸಿಕ ಅಸ್ವಸ್ಥರಿಗೆ ಉಚಿತ ಆಹಾರ ಕಿಟ್‌ಗಳನ್ನು ವಿತರಿಸಿ ಮಾನವೀಯತೆ ಮೆರೆದಿದ್ದಾರೆ. ಇದಲ್ಲದೆ, ಕಳೆದ 13 ವರ್ಷಗಳಿಂದ ವಿದ್ಯಾರ್ಥಿಗಳ ಹಕ್ಕುಗಳಿಗಾಗಿ ಹೋರಾಟ, ದಲಿತರು, ಅಂಗವಿಕಲರು, ವೃದ್ಧರಿಗೆ ಸಹಾಯ ಹಸ್ತ ನೀಡುತ್ತಾ ಬಂದಿದ್ದಾರೆ.

ಅಲ್ಲದೆ ಅವರು ಭಾರತೀಯ ಕಲಾ ಸಾಂಸ್ಕೃತಿಕ ಅಕಾಡೆಮಿಯ ವ್ಯವಸ್ಥಾಪಕ ಅಧ್ಯಕ್ಷರಾಗಿ 2,000ಕ್ಕೂ ಹೆಚ್ಚು ಸಾಧಕರಿಗೆ ರಾಜ್ಯ ಮತ್ತು ರಾಷ್ಟ್ರ ಪ್ರಶಸ್ತಿಗಳನ್ನು ನೀಡಿ ಗೌರವಿಸಿದ್ದಾರೆ. ಕರ್ನಾಟಕ ರಾಜ್ಯ ಪ್ರೊಫೆಷನಲ್ ಸೋಶಿಯಲ್ ವರ್ಕರ್ಸ್ ವೆಲ್ಫೇರ್ ಅಸೋಸಿಯೇಶನ್ (ರಿ) ಬೆಂಗಳೂರು ಸಂಸ್ಥೆಯ ಸ್ಥಾಪಕ ರಾಜ್ಯಾಧ್ಯಕ್ಷರಾಗಿ, ವೃತ್ತಿಪರ ಸಾಮಾಜಿಕ ಕಾರ್ಯಕರ್ತರ ಹಕ್ಕುಗಳಿಗಾಗಿ ರಾಜ್ಯಮಟ್ಟದಲ್ಲಿ ಹೋರಾಟ ನಡೆಸುತ್ತಿದ್ದಾರೆ.

ಇವರ ಸಮಾಜ ಸೇವೆಯನ್ನು ಪರಿಗಣಿಸಿ ಇವರಿಗೆ 15 ರಾಷ್ಟ್ರ ಪ್ರಶಸ್ತಿಗಳು, 17 ರಾಜ್ಯ ಪ್ರಶಸ್ತಿಗಳು, ಹಾಗೂ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಗೌರವಗಳು ಲಭಿಸಿವೆ.

ಈ ಎಲ್ಲಾ ಸಾಧನೆಗಳ ಪರಿಗಣನೆಯೊಂದಿಗೆ, ಸಂತೋಷ್ ಕುಮಾರ್ ಎಂ ಅವರು ಮಾನಸಿಕ ಆರೋಗ್ಯ ಕ್ಷೇತ್ರದಲ್ಲಿ ವಿಶ್ವದಾಖಲೆ ಸಾಧಿಸಿ, ಕರ್ನಾಟಕದ ಹೆಮ್ಮೆ ಆಗಿದ್ದಾರೆ. ಈ ಪ್ರಶಸ್ತಿಯನ್ನು ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ಸಂತೋಷ್ ಹೆಗ್ಡೆ ಅವರ ಅಮೃತ ಹಸ್ತದಿಂದ ಪ್ರದಾನಿಸಲಾಯಿತು.

## 'ಸೂಲಿಕುಂಟೆ ಗ್ರಾ.ಪಂ. ಅಧ್ಯಕ್ಷೆ ಸುಗುಣಮ್ಮ ಪದಚ್ಯುತಿ'

ಬಂಗಾರಪೇಟೆ: ತಾಲ್ಲೂಕಿನ ಸೂಲಿಕುಂಟೆ ಗ್ರಾಮ ಪಂಚಾಯತಿ ಅಧ್ಯಕ್ಷೆ ಆರ್. ಸುಗುಣಮ್ಮರ ವಿರುದ್ಧ ಶನಿವಾರದಂದು ಸಹಾಯಕ ಕಮಿಷನರ್ ಡಾ. ಮೈತ್ರಿರವರ ಅಧ್ಯಕ್ಷತೆಯಲ್ಲಿ ನಡೆದ ಅವಿಶ್ವಾಸ ಮಂಡನೆ ಸಭೆಯಲ್ಲಿ 14 ಸದಸ್ಯರು ಅವಿಶ್ವಾಸ ಮಂಡಿಸಿ ಅಧ್ಯಕ್ಷರನ್ನು ಪದಚ್ಯುತಗೊಳಿಸಿದರು.

18 ಸದಸ್ಯರನ್ನು ಹೊಂದಿರುವ ಸೂಲಿಕುಂಟೆ ಗ್ರಾಮ ಪಂಚಾಯಿತಿಗೆ ಸೆ. 9/2023 ರಂದು ಆರ್. ಸುಗುಣಮ್ಮರವರು ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದರು. ಆರ್. ಸುಗುಣಮ್ಮ ಅವರು ಅಧ್ಯಕ್ಷರಾದಾಗಿನಿಂದ ಸದಸ್ಯರಿಗೆ ಸರಿಯಾಗಿ ಸ್ಪಂದಿಸದೆ ಗ್ರಾ.ಪಂ. ವ್ಯಾಪ್ತಿಯಲ್ಲಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವಲ್ಲಿ ವಿಫಲರಾಗಿದ್ದಾರೆ. ಅಧ್ಯಕ್ಷರ ಪತಿ ರಾಮನಾಯಕನಹಳ್ಳಿ ಆರ್.ವಿ. ಮಂಜುನಾಥ್ ಗ್ರಾ.ಪಂ.ನಲ್ಲಿ ಹಸ್ತಕ್ಷೇಪ ಮಾಡುವುದು ಸೇರಿದಂತೆ ಹಲವಾರು ಆರೋಪಗಳನ್ನು ಹೊರಿಸಿ ದಿನಾಂಕ ಮಾರ್ಚ್ 3/2025 ರಂದು ಅವಿಶ್ವಾಸ ಮಂಡಿಸಲು ಉಪವಿಭಾಗಾಧಿಕಾರಿಗಳಿಗೆ ಗ್ರಾ.ಪಂ. ಸದಸ್ಯರು ಮನವಿ ಸಲ್ಲಿಸಿದ್ದರು.



ಮನವಿಯಂತೆ ಉಪವಿಭಾಗಾಧಿಕಾರಿಗಳು ಮಾರ್ಚ್ 24/2025 ರಂದು ಅವಿಶ್ವಾಸ ಮಂಡನೆಗೆ ಸಭೆ ಕರೆದಿದ್ದರು. ಈ ಸಭೆಯ ಆದೇಶದ ವಿರುದ್ಧ ಅಧ್ಯಕ್ಷೆ ಆರ್. ಸುಗುಣಮ್ಮ ಅವರು ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದರು. ಆ ನಂತರ ತಡೆಯಾಜ್ಞೆ ತೆರವುಗೊಂಡ ನಂತರ ಶನಿವಾದಂದು ಅವಿಶ್ವಾಸ ಮಂಡನೆಗೆ ಗ್ರಾ.ಪಂ. ಕಾರ್ಯಾಲಯದಲ್ಲಿ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಒಟ್ಟು 18 ಸದಸ್ಯರ ಪೈಕಿ 14 ಸದಸ್ಯರು ಹಾಜರಾಗಿ ಅವಿಶ್ವಾಸ ನಿರ್ಣಯ ಮಂಡಿಸುವಲ್ಲಿ ಯಶಸ್ವಿಯಾದರು.

ಈ ಸಂದರ್ಭದಲ್ಲಿ ಪಂಚಾಯತಿ ಉಪಾಧ್ಯಕ್ಷೆ ನಾಗಮ್ಮ, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶಂಕರ್, ಸದಸ್ಯರಾದ ಎಂ. ಕೃಷ್ಣಪ್ಪ, ರೂಪ, ಯಲ್ಲಮ್ಮ, ಜಬೀನ್‌ತಾಜ್, ಶ್ರೀನಿವಾಸಪ್ಪ ಎಸ್.ಎಂ. ಮಂಜುನಾಥ್, ಶಾರದಮ್ಮ, ವೆಂಕಟಲಕ್ಷ್ಮಮ್ಮ, ಆನಂದ್ ಕೆ.ಎನ್, ಯಲ್ಲಯ್ಯ, ಎಸ್.ಸಿ, ವನಿತ ಎಸ್.ಎ, ಅಮರೇಶ್.ಆರ್ ಹಾಜರಿದ್ದರು.

## ಶಾಲಾ ಕಟ್ಟಡ ತೆರವಿಗೆ ಗ್ರಾಮಸ್ಥರ ಒತ್ತಾಯ

ವಿಜಯಪುರ: ಹೋಬಳಿಯ ಮಂಡಿಬೆಲೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಧರ್ಮಪುರ ಗ್ರಾಮದಲ್ಲಿನ ಕೂಸಿನ ಮನೆಯ ಪಕ್ಕದಲ್ಲಿರುವ ಹಳೇಯ ಶಾಲಾ ಕಟ್ಟಡವು ಶಿಥಿಲವಾಗಿದ್ದು, ಅದನ್ನು ತೆರವುಗೊಳಿಸುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಶಾಲಾ ಕಟ್ಟಡದ ಗೋಡೆಗಳು ಕುಸಿದು ಬಿದ್ದಿವೆ. ಮಳೆಗಾಲವಾದ್ದರಿಂದ ಕಟ್ಟಡ ಕುಸಿದು ಬಿದ್ದರೆ, ಕೂಸಿನ ಮನೆಗೆ ಬರುವ ಮಕ್ಕಳಿಗೆ ಅಪಾಯವಾಗುವ ಸಾಧ್ಯತೆಗಳಿದ್ದು, ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಕುರಿತು ಜಾಗ್ರತೆ ವಹಿಸಬೇಕಿದೆ. ಶಿಥಿಲವಾಗಿರುವ ಹಳೇಯ ಕಟ್ಟಡದ ಗೋಡೆಗಳು ಕುಸಿದು ಬೀಳುವ ಮೊದಲೇ ಕಟ್ಟಡವನ್ನು ತೆರವುಗೊಳಿಸಿ, ಮುಂದೆ ಆಗಬಹುದಾದ ಅಪಾಯವನ್ನು ತಪ್ಪಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ಕುರಿತು ಶಿಕ್ಷಣ ಇಲಾಖೆಯ ಅಧಿಕಾರಿಯೊಬ್ಬರು ಮಾತನಾಡಿ, ಹಳೇಯ ಕಟ್ಟಡವನ್ನು ತೆರವುಗೊಳಿಸುವಂತೆ ನಾವು ಇಲಾಖೆಯ ಮೂಲಕ ಲೋಕೋಪಯೋಗಿ ಇಲಾಖೆ ಹಾಗೂ ಪಂಚಾಯತ್ ರಾಜ್ ಇಲಾಖೆಗೆ ಪತ್ರ ಬರೆದಿದ್ದೇವೆ. ಅವರು, ಇದುವರೆಗೂ ಏನೂ ಕ್ರಮ ಕೈಗೊಂಡಿಲ್ಲ ಎಂದರು.

ಸ್ಥಳೀಯ ಕೂಸಿನ ಮನೆಗೆ ಮಕ್ಕಳನ್ನು ಕಳುಹಿಸುತ್ತಿರುವ ಪೋಷಕರು ಕೂಡಾ ಕಟ್ಟಡವನ್ನು ತೆರವುಗೊಳಿಸುವಂತೆ ಒತ್ತಾಯಿಸುತ್ತಿದ್ದಾರೆ. ಹಳೇಯ ಕಟ್ಟಡವಾಗಿರುವ ಕಾರಣ, ಆಗಾಗ ಇಲ್ಲಿ ಹಾವುಗಳ ದರ್ಶನವೂ ಆಗುತ್ತದೆ. ನಮ್ಮ ಮಕ್ಕಳು ಸಣ್ಣವರು, ಆಕಸ್ಮಾತ್ ಹೊರಗೆ ಬಂದಾಗ ಕಟ್ಟಡ ಬಿದ್ದರೆ, ಅಪಾಯವಾಗುವ ಸಂಭವ ಜಾಸ್ತಿಯಿದೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು, ಕಟ್ಟಡವನ್ನು ತೆರವುಗೊಳಿಸಿ ಎಂದು ಒತ್ತಾಯಿಸಿದ್ದಾರೆ.



## ಕೃಷಿ ತಂತ್ರಜ್ಞರ ಸಂಸ್ಥೆಗೆ ಪದಾಧಿಕಾರಿಗಳ ಆಯ್ಕೆ

ಬೆಂಗಳೂರು : ಬೆಂಗಳೂರು ಕೃಷಿ ತಂತ್ರಜ್ಞರ ಸಂಸ್ಥೆಯು ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು ನಂ.15, ಕ್ವೀನ್ಸ್ ರಸ್ತೆಗೆ ಹೊಂದಿಕೊಂಡಂತೆ 1968ರಲ್ಲಿ ಸ್ಥಾಪನೆಯಾಗಿರುತ್ತದೆ. ಸದರಿ ಸಂಸ್ಥೆಯು ಸುಮಾರು 5800ಕ್ಕೂ ಹೆಚ್ಚು ಆಜೀವ ಸದಸ್ಯರನ್ನು ಹೊಂದಿದ್ದು ರಾಜ್ಯದ ಕೃಷಿ ಕ್ಷೇತ್ರಕ್ಕೆ ಅನುಕೂಲವಾಗುವಲ್ಲಿ ಹಲವಾರು ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನ ಮಾಡುತ್ತಾ ಬಂದಿರುತ್ತದೆ. ಈ ಸಂಸ್ಥೆಯು ಪ್ರತೀ ಮೂರು ವರ್ಷಕ್ಕೊಮ್ಮೆ ತನ್ನ ಆಡಳಿತ ಮಂಡಳಿಗೆ ಚುನಾವಣೆ ಮೂಲಕ ವ್ಯವಸ್ಥಾಪನಾ ಸಮಿತಿಯನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಸದರಿ ಸಂಸ್ಥೆಯ 2025– 28ರ ಸಾಲಿನ ಆಡಳಿತ ಮಂಡಳಿಗಾಗಿ ಇದೇ 12 ರಂದು ಚುನಾವಣೆ ಆಗಿದ್ದು, ಅದರನ್ವಯ 15 ಸದಸ್ಯರನ್ನು ಚುನಾಯಿಸಲಾಗಿದೆ. ಸಂಸ್ಥೆಯು ದಿನಾಂಕ 19–04–2025ರಂದು ನಡೆದ ಪ್ರಥಮ ಸಭೆಯಲ್ಲಿ ಈ ಕೆಳಕಂಡ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿರುತ್ತದೆ.

ಅಧ್ಯಕ್ಷರಾಗಿ ಡಾ. ಎ.ಬಿ. ಪಾಟೀಲ್, ಉಪಾಧ್ಯಕ್ಷರುಗಳಾಗಿ ಡಾ. ನಾಗರಾಜು ಮತ್ತು ಡಾ. ವಿ.ಐ. ಬೆಣಗಿ, ಕಾರ್ಯದರ್ಶಿಯಾಗಿ ಜಿ.ಹೆಚ್. ಯೋಗೀಶ್, ಜಂಟಿ ಕಾರ್ಯದರ್ಶಿಯಾಗಿ ಸಿ.ಎಸ್. ಪಾಟೀಲ್ ಮತ್ತು ಖಜಾಂಚಿಯಾಗಿ ಜಿ.ರಾಮೇಗೌಡ ಉಳಿದಂತೆ ಸಿ. ಲೋಕೇಶ್ವರ್, ಡಾ. ಟಿ.ಕೆ. ಪ್ರಭಾಕರ ಶೆಟ್ಟಿ, ಡಾ. ಎಸ್.ಬಿ. ಯೋಗಾನಂದ, ಡಾ. ಎಂ. ಭೀಮಣ್ಣ, ಡಾ. ಎ.ಪಿ. ಮಲ್ಲಿಕಾರ್ಜುನ ಗೌಡ, ಡಾ. ರಾಜು ಜಿ.ತೆಗ್ಗಳ್ಳಿ, ವಿ.ಎಸ್. ಪಾಟೀಲ್, ಎಫ್.ಆರ್. ನಿಡಗುಂದಿ ಮತ್ತು ಶರಣಪ್ಪ ಬಿ. ಕೊಂಗವಾಡ ಇವರುಗಳನ್ನು ವ್ಯವಸ್ಥಾಪನ ಸಮಿತಿ ಸದಸ್ಯರಾಗಿ ಆಯ್ಕೆಯಾಗಿರುತ್ತಾರೆ.

## 'ನಾಟಿ ಹಸುಗಳ ಸಂತತಿಯನ್ನು ಉಳಿಸಿ ಬೆಳೆಸಿ'

ಮಾಲೂರು: ಗ್ರಾಮೀಣ ಭಾಗದಲ್ಲಿ ನಾಟಿ ಹಸುಗಳ ಸಂತತಿಯನ್ನು ಉಳಿಸಿ ಬೆಳೆಸಲು ಪ್ರತಿಯೊಬ್ಬ ರೈತರು ನಾಟಿ ಹಸುಗಳ ಸಾಕಾಣಿಕೆ ಮಾಡಿ ಪೋಷಿಸುವಂತೆ ನಮ್ಮ ಕರ್ನಾಟಕ ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ಹೇಳಿದರು.

ಪಟ್ಟಣದ ಸರ್ಕಾರಿ ಬಾಲಕಿಯರ ಕಾಲೇಜಿನ ಆವರಣದಲ್ಲಿ ಕರಗ ಮಹೋತ್ಸವ ಪ್ರಯುಕ್ತ ನಾಟಿ ಹಸುಗಳ ಪ್ರದರ್ಶನ ಹಾಗೂ ಮೆರವಣಿಗೆಗೆ ಚಾಲನೆ ನೀಡಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಆಧುನಿಕತೆ ಹೆಚ್ಚಿದಂತೆ ಹಸುಗಳು ಹಾಗೂ ಎತ್ತುಗಳ ಸಾಕಾಣಿಕೆ ಕ್ಷೀಣಿಸುತ್ತಿದ್ದು ಅದರಲ್ಲೂ ಸೀಮೆ ಹಸುಗಳನ್ನು ಹೆಚ್ಚು ಹಾಲು ಉತ್ಪಾದನೆಕ್ಕಾಗಿ ಸಾಕಾಣಿಕೆ ಮಾಡುತ್ತಾರೆ ಆದರೆ ಬಹಳ ಹಿಂದಿನಿಂದಲೂ ನಾಟಿ ಹಸುಗಳನ್ನು ಸಾಕಾಣಿಕೆ ಮಾಡುತ್ತಿದ್ದ ರೈತರು ನಾಟಿ ಹಸುಗಳನ್ನು ಸಾಕಾಣಿಕೆ ಮಾಡುವುದು ಮರೆಯುತ್ತಿದ್ದಾರೆ. ನಾಟಿ ಹಸುಗಳ ಹಾಲು, ಆರೋಗ್ಯಕರವಾಗಿದ್ದು ನಾಟಿ ಹಸುಗಳಿಗೆ ಯಾವುದೇ ರೋಗ ರುಜಿನಗಳು ಬೇಗ ಹರಡುವುದಿಲ್ಲ ನಾಟಿ ಹಸುಗಳು ಗಟ್ಟಿಮುಟ್ಟಾದ ಹಸುಗಳಾಗಿದ್ದು ಮುಂದಿನ ಪೀಳಿಗೆಗಾಗಿ ನಾವು ನಾಟಿ ಹಸುಗಳ ಸಂತತಿಯನ್ನು ಉಳಿಸಿ ಬೆಳೆಸಬೇಕಾಗಿದೆ ಪ್ರೋತ್ಸಾಹ ನೀಡುವಂತೆ ಹೇಳಿದರು.



ಕರಗ ಮಹೋತ್ಸವ ಪ್ರಯುಕ್ತ ನಾಟಿ ಹಸುಗಳ ಪ್ರದರ್ಶನ ಹಾಗೂ ಮೆರವಣಿಗೆ ಏರ್ಪಡಿಸಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದರು.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆಯ ಜಿಲ್ಲಾಧ್ಯಕ್ಷ ಎಸ್.ಎಂ. ರಾಜು ಜಿಲ್ಲಾ ಗೌರವಾಧ್ಯಕ್ಷ ದ್ಯಾಪಸಂದ್ರ ಅಮರ್ ಜಗದೀಶ್, ಶಾಮೇಗೌಡ, ಸಂಜಯ್, ಸಂತೋಷ್, ಕಾರ್ತಿಕ್, ಚೇತನ್, ಡಿ.ಎನ್. ಗೋಪಾಲ್ ಹಾಜರಿದ್ದರು.

## ಟಿಬಿ ಡ್ಯಾಂ ಹೂಳೆತ್ತಲು ಆಗ್ರಹ

ಬಳ್ಳಾರಿ: ಕಲ್ಯಾಣ ಕರ್ನಾಟಕದ ಜೀವನಾಡಿ ಯಾಗಿರುವ ತುಂಗಭದ್ರಾ ಡ್ಯಾಂನಲ್ಲಿ ವರ್ಷದಿಂದ ವರ್ಷಕ್ಕೆ ಬಾರೀ ಪ್ರಮಾಣದ ಹೂಳು ತುಂಬಿಕೊಳ್ಳುತ್ತಿದೆ. ಡ್ಯಾಂನಲ್ಲಿ ಸಂಗ್ರಹವಾಗಿರುವ ಹೂಳನ್ನು ತೆಗೆಯುವಂತೆ ಆಗ್ರಹಿಸಿ ರೈತರು, ಜನರು ನಿರಂತರವಾಗಿ ಸರ್ಕಾರದ ವಿರುದ್ಧ ಹೋರಾಟಗಳನ್ನು ಮಾಡುತ್ತಲೇ ಬಂದಿದ್ದಾರೆ.

ಆದರೆ, ಸರ್ಕಾರ ಸಾವಿರಾರು ರೂಪಾಯಿ ಖರ್ಚಾಗುತ್ತದೆ ಎಂದು ಸಬೂಬು ನೀಡುತ್ತಾ ಬರುತ್ತಿದೆ. ಹೀಗಾಗಿ ಈ ವರ್ಷವಾದರೂ ಹೂಳು ತೆಗೆಯಲಿ ಎಂಬುದು ರೈತರ ಒತ್ತಾಯವಾಗಿದೆ. ಡ್ಯಾಂ ನಿರ್ಮಾಣವಾದಾಗ ಸುಮಾರು 132 ಟಿಎಂಸಿ ನೀರನ್ನು ಸಂಗ್ರಹ ಮಾಡುವ ಸಾಮರ್ಥ ಹೊಂದಿತ್ತು.

ಆದರೆ, ಕಾಲ ಕಳೆದಂತೆ ಹೂಳಿನ ಪ್ರಮಾಣ ಹೆಚ್ಚಾಗುತ್ತಿದ್ದರಿಂದ ಪ್ರಸ್ತುತ 105 ಟಿಎಂಸಿ ನೀರು ಸಂಗ್ರಹ ಸಾಮರ್ಥ ಹೊಂದಿದೆ.

ಹೀಗಾಗಿ ವರ್ಷದಿಂದ ವರ್ಷಕ್ಕೆ ತುಂಗಭದ್ರಾ ಡ್ಯಾಂ ನೀರಿನ ಸಂಗ್ರಹದ ಪ್ರಮಾಣ ಕಡಿಮೆ ಆಗುತ್ತಿದೆ. ಇದರಿಂದ ಕುಡಿಯುವ ನೀರಿನ ಸಮಸ್ಯೆ, ರೈತರ ಬೆಳೆಗಳಿಗೆ ನೀರಿನ ಸಮಸ್ಯೆ ಉಂಟಾಗುತ್ತಿದೆ. ಸರ್ಕಾರ ಕೂಡಲೇ ಹುಳು ತೆಗೆಯುವ ಕಾರ್ಯಕ್ಕೆ ಮುಂದಾಗಬೇಕು ಎಂಬುದು ರೈತರ ಒತ್ತಾಯವಾಗಿದೆ.

ಟಿಬಿ ಡ್ಯಾಂನಲ್ಲಿ ಸರ್ವೆ ಪ್ರಕಾರ ಸರಿಸುಮಾರು 28 ಟಿಎಂಸಿ ನೀರು ಸಂಗ್ರಹವಾಗುವಷ್ಟು ಹೂಳು ತುಂಬಿದೆ.

ಹೀಗಾಗಿ 132 ಟಿಎಂಸಿ ನೀರನ್ನು ಸಂಗ್ರಹ ಮಾಡುವ ಬದಲು 103 ರಿಂದ 105 ಟಿಎಂಸಿ ನೀರು ಸಂಗ್ರಹ ಮಾಡಲಾಗುತ್ತಿದೆ. ಹಿಂದಿನ ಸರ್ಕಾರಗಳು ಹೂಳು ತೆಗೆಸಲು ಹಲವು ವಿದೇಶಿ ತಂತ್ರಜ್ಞಾನವನ್ನು ಬಳಕೆ ಮಾಡಲು ಮುಂದಾಗಿದ್ದವು. ಆದರೆ ಅದರ ಖರ್ಚುವೆಚ್ಚ ಸಾವಿರಾರು ಕೋಟಿ ರೂ. ಆಗುವ ಕಾರಣದಿಂದ ಆ ಪ್ರಾಜೆಕ್ಟ್ ಕೈಬಿಡಲಾಗಿತ್ತು.

## ಜನಿವಾರ ಪ್ರಕರಣ; ಜನರ ನಂಬಿಕೆ ಮೇಲೆ ಪ್ರಹಾರ

ಹುಬ್ಬಳ್ಳಿ: ಸಿಇಟಿ ಪರೀಕ್ಷೆ ಬರೆಯಲು ಹೋದ ವಿದ್ಯಾರ್ಥಿ ಜನಿವಾರ ತೆಗೆಸಿರುವುದು ಜನರ ನಂಬಿಕೆ ಮೇಲೆ ಪ್ರಹಾರ ನಡೆಸಿದಂತೆ ಆಗಿದೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಖಂಡಿಸಿದರು.

ಹುಬ್ಬಳ್ಳಿಯಲ್ಲಿ ಶನಿವಾರ ಮಾಧ್ಯಮದೊಂದಿಗೆ ಮಾತನಾಡಿ, ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ಹೋಂ ಗಾರ್ಡ್ ಅಮಾನತ್ತು ಮಾಡಿ ಕೈ ತೊಳೆದುಕೊಂಡಿದ್ದು, ಇದು ಸರಿಯಲ್ಲ ಎಂದರು.



ಸ್ಪಷ್ಟ ಮಾರ್ಗಸೂಚಿ ಹೊರಡಿಸಲು ಆಗ್ರಹ: ಕೇವಲ ಬ್ರಾಹ್ಮಣರಷ್ಟೇ ಜನಿವಾರ ಹಾಕುವುದಿಲ್ಲ. ಇದೊಂದು ಧಾರ್ಮಿಕ ನಂಬಿಕೆಯಾಗಿದ್ದು, ಇದರ ಮೇಲೆ ಪ್ರಹಾರ ನಡೆಸಿದೆ. ಇದನ್ನ ಗಂಭೀರವಾಗಿ ಪರಿಗಣಿಸಿ ಸರ್ಕಾರ ಇದಕ್ಕೊಂದು ಸ್ಪಷ್ಟ ಮಾರ್ಗಸೂಚಿ ಹೊರಡಿಸಬೇಕು ಎಂದು ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು. ವಿವಾದ ಮರೆಮಾಚಲು ಯತ್ನ: ರಾಜ್ಯದಲ್ಲಿ ಶುರುವಾದ ಜಾತಿಗಣತಿ ವಿವಾದ, ಆಡಳಿತ ವೈಫಲ್ಯ ಮರೆಮಾಚಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಏನಾದರೊಂದು ವಿಷಯಾಂತರ ಮಾಡುತ್ತಲೇ ಇರುತ್ತದೆ ಎಂದು ಪ್ರಲ್ಹಾದ ಜೋಶಿ ಟೀಕಿಸಿದರು.

Printed by gandasi sadananda swamy, published by gandasi sadanandaswamy, owned by gandasi sadananda swamy. Printed at LAVANYA MUDRANA No. 79, TR mill, compound, 5th main 9th corss, Chamarajpet Bangalore-560018, published at No.531, prakruthi nilaya, kalikanagar, Andrahalli, Vishwaneedam Post, Bangalore-560091. Editor: Gandasi sadanandaswamy